


ದಾದಾ ಭಗವಾನರ ನಿರೂಪಣೆ

# ಮೃತ್ಯು

## ಸಮಯದಲ್ಲಿ, ಮೊದಲು ಹಾಗು ನಂತರ...

ಯಾವುದೊಂದು ವಸ್ತು ಜನಿಸುವುದೋ,
ಅದರ ಮೃತ್ಯು ಅವಶ್ಯವಾಗಿ ಬರುವುದು.
ಈ ಜನನ-ಮರಣವು ಆತ್ಮದ್ದಲ್ಲ,
ಆತ್ಮವು ಪರ್ಮನೆಂಟ್ ವಸ್ತುವಾಗಿದೆ.

Kannada

ದಾದಾ ಭಗವಾನರ ನಿರೂಪಣೆ

# ಮೃತ್ಯು ಸಮಯದಲ್ಲಿ,

# ಮೊದಲು ಹಾಗು ನಂತರ...

ಮೂಲ ಗುಜರಾತಿ ಸಂಕಲನೆ: ಡಾಕ್ಟರ್. ನಿರುಬೇನ್ ಅಮೀನ್

ಕನ್ನಡ ಅನುವಾದ: ಮಹಾತ್ಮ ವೃಂದ

ಪ್ರಕಾಶಕರು: ಶ್ರೀ ಅಜೀತ್ ಸಿ. ಪಟೇಲ್

ದಾದಾ ಭಗವಾನ್ ಆರಾಧನಾ ಟ್ರಸ್ಟ್,

ದಾದಾ ದರ್ಶನ್, 5, ಮಮತಾ ಪಾರ್ಕ್ ಸೊಸೈಟಿ,

ನವ ಗುಜರಾತ್ ಕಾಲೇಜು ಹಿಂಬಾಗ, ಉಸ್ಮಾನಪುರ,

ಅಹ್ಮದಾಬಾದ್ - 380014, ಗುಜರಾತ್.

ಫೋನ್: (079) 39830100

**© ಪೂಜ್ಯಶ್ರೀ ದೀಪಕ್‌ಭಾಯಿ ದೇಸಾಯಿ, ತ್ರಿಮಂದಿರ, ಅಡಾಲಜ್ ಜಿಲ್ಲೆ: ಗಾಂಧೀನಗರ ಗುಜರಾತ್.**

ಈ ಪುಸ್ತಕದ ಯಾವುದೇ ಬಿಡಿ ಭಾಗವನ್ನು ಮತ್ತೊಂದೆಡೆ ಉಪಯೋಗಿಸುವುದಾಗಲಿ ಅಥವಾ ಪುನರ್ ಪ್ರಕಟಿಸುವುದಾಗಲಿ ಮಾಡುವ ಮೊದಲು ಕೃತಿಯ ಹಕ್ಕುದಾರರ ಅನುಮತಿಯನ್ನು ಹೊಂದಿರಬೇಕು.

ಪ್ರಥಮ ಆವೃತ್ತಿ: 1000 ಪ್ರತಿಗಳು ನವೆಂಬರ್ 2018

ಭಾವ ಮೌಲ್ಯ: 'ಪರಮ ವಿನಯ ಹಾಗು ನಾನು ಏನನ್ನೂ ತಿಳಿದಿಲ್ಲ' ಎಂಬ ಭಾವನೆ!

ದ್ರವ್ಯ ಮೌಲ್ಯ: 20.00 ರೂಪಾಯಿಗಳು

ಮುದ್ರಣ: ಅಂಬಾ ಆಫ್ ಸೆಟ್

ಬಿ-99, ಎಲೆಕ್ಟ್ರಾನಿಕ್ಸ್ GIDC,

ಕ-6 ರೋಡ್, ಸೆಕ್ಟರ್-25, ಗಾಂಧಿನಗರ - 382044

ಫೋನ್: (079) 39830341

# ತ್ರಿಮಂತ್ರ








ನಮೋ ಅರಿಹಂತಾಣಂ

ನಮೋ ಸಿದ್ಧಾಣಂ

ನಮೋ ಆಯರಿಯಾಣಂ

ನಮೋ ಉವಜ್ಝಾಯಾಣಂ

ನಮೋ ಲೋಯೆ ಸವ್ವಸಾಹೂಣಂ

ಏಸೋ ಪಂಚ ನಮುಕ್ಕಾರೋ;

ಸವ್ವ ಪಾವಪ್ಪಣಾಸಣೋ

ಮಂಗಲಾಣಂ ಚ ಸವ್ವೇಸಿಂ;

ಪಢಮಂ ಹವಯಿ ಮಂಗಲಂ

ಓಂ ನಮೋ ಭಗವತೇ ವಾಸುದೇವಾಯ

ಓಂ ನಮಃ ಶಿವಾಯ

ಜೈ ಸಚ್ಚಿದಾನಂದ್



# 'ದಾದಾ ಭಗವಾನ್' ಯಾರು?

1958ರ ಜೂನ್ ಮಾಸದ ಒಂದು ಸಂಜೆ, ಸುಮಾರು ಆರು ಗಂಟೆಯಾಗಿರಬಹುದು. ಜನಜಂಗುಳಿಯಿಂದ ತುಂಬಿಹೋಗಿದ್ದ ಸೂರತ್ ಪಟ್ಟಣದ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 3ರ ಒಂದು ಬೆಂಚಿನ ಮೇಲೆ ಶ್ರೀ ಎ. ಎಮ್. ಪಟೇಲ್ ಎಂಬ ಹೆಸರಿನ ದೇಹರೂಪಿ ಮಂದಿರದಲ್ಲಿ, ಅಕ್ರಮ ರೂಪದಲ್ಲಿ, ಪ್ರಕೃತಿಯ ಲೀಲೆಯಂತೆ, 'ದಾದಾ ಭಗವಾನ್'ರವರು ಸಂಪೂರ್ಣವಾಗಿ ಪ್ರಕಟರಾದರು. ಪ್ರಕೃತಿಯು ಅಧ್ಯಾತ್ಮದ ಅದ್ಭುತ ಆಶ್ಚರ್ಯವನ್ನು ಸೃಷ್ಟಿಸಿತು. ಒಂದು ಗಂಟೆಯೊಳಗೆ ಅವರಿಗೆ ವಿಶ್ವದರ್ಶನವಾಯಿತು. 'ನಾನು ಯಾರು? ದೇವರು ಯಾರು? ಜಗತ್ತನ್ನು ನಡೆಸುವವರು ಯಾರು? ಕರ್ಮ ಎಂದರೆ ಏನು? ಮುಕ್ತಿ ಎಂದರೆ ಏನು?' ಎಂಬ ಜಗತ್ತಿನ ಎಲ್ಲಾ ಆಧ್ಯಾತ್ಮಿಕ ಪ್ರಶ್ನೆಗಳ ಸಂಪೂರ್ಣ ರಹಸ್ಯ ಪ್ರಕಟಗೊಂಡಿತು. ಈ ರೀತಿ, ಪ್ರಕೃತಿಯು ಜಗತ್ತಿನ ಮುಂದೆ ಒಂದು ಅದ್ವಿತೀಯ ಪೂರ್ಣ ದರ್ಶನವನ್ನು ಪ್ರಸ್ತುತಪಡಿಸಿತು ಹಾಗು ಇದಕ್ಕೊಂದು ಮಾಧ್ಯಮವಾದರು, ಗುಜರಾತಿನ ಚರೋತರ್ ಪ್ರದೇಶದ ಭಾದರಣ್ ಎಂಬ ಹಳ್ಳಿಯ ಪಟೇಲರಾಗಿದ್ದ, ವೃತ್ತಿಯಲ್ಲಿ ಕಾಂಟ್ರಾಕ್ಟರಾಗಿದ್ದ, ಸಂಪೂರ್ಣವಾಗಿ ರಾಗದ್ವೇಷದಿಂದ ಮುಕ್ತರಾಗಿದ್ದವರು ಶ್ರೀ ಎ. ಎಮ್. ಪಟೇಲ್!

'ವ್ಯಾಪಾರದಲ್ಲಿ ಧರ್ಮವಿರಬೇಕು, ಧರ್ಮದಲ್ಲಿ ವ್ಯಾಪಾರವಲ್ಲ', ಎಂಬ ಸಿದ್ಧಾಂತದ ಪಾಲನೆ ಮಾಡುತ್ತಾ ಇವರು ಇಡೀ ಜೀವನವನ್ನು ಕಳೆದರು. ಜೀವನದಲ್ಲಿ ಅವರು ಯಾರಿಂದಲೂ ಹಣ ತೆಗೆದುಕೊಳ್ಳಲಿಲ್ಲವಷ್ಟೇ ಅಲ್ಲ, ತಮ್ಮ ಭಕ್ತರಿಗೆ ತಮ್ಮ ಸಂಪಾದನೆಯ ಹಣದಲ್ಲಿ ಯಾತ್ರೆ ಮಾಡಿಸುತ್ತಿದ್ದರು.

ಅವರು ಅನುಭವಿಗಳಾಗಿದ್ದರು. ಅದೇ ರೀತಿ, ಅವರು ಸಿದ್ಧಿಸಿಕೊಂಡ ಅದ್ಭುತವಾದ ಜ್ಞಾನಪ್ರಯೋಗದ ಮೂಲಕ ಕೇವಲ ಎರಡೇ ಗಂಟೆಗಳಲ್ಲಿ ಬೇರೆ ಮುಮುಕ್ಷುಗಳಿಗೂ ಸಹ ಆತ್ಮಜ್ಞಾನದ ಅನುಭವ ಉಂಟಾಗುವಂತೆ ಮಾಡುತ್ತಿದ್ದರು. ಇದನ್ನು ಅಕ್ರಮ ಮಾರ್ಗ ಎಂದು ಕರೆಯಲಾಯಿತು. ಅಕ್ರಮ, ಅದರರ್ಥ ಯಾವುದೇ ಕ್ರಮವಿಲ್ಲದ ಎಂದು. ಹಾಗು ಕ್ರಮ ಎಂದರೆ ಹಂತ ಹಂತವಾಗಿ, ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೇರುವುದು ಎಂದು. ಅಕ್ರಮ ಎಂದರೆ ಲಿಫ್ಟ್ ಮಾರ್ಗ, ಒಂದು ಶಾರ್ಟ್ ಕಟ್.

ಅವರು ತಾವೇ ಪ್ರತಿಯೊಬ್ಬರಿಗೂ 'ದಾದಾ ಭಗವಾನ್ ಯಾರು?' ಎಂಬುದರ ರಹಸ್ಯದ ಬಗ್ಗೆ ಹೇಳುತ್ತಾ ನುಡಿಯುತ್ತಿದ್ದರು "ನಿಮ್ಮ ಎದುರು ಕಾಣುತ್ತಿರುವವರು 'ದಾದಾ ಭಗವಾನ್' ಅಲ್ಲ. ನಾನು ಜ್ಞಾನಿ ಪುರುಷ. ನನ್ನೊಳಗೆ ಪ್ರಕಟಗೊಂಡಿರುವವರು 'ದಾದಾ ಭಗವಾನ್'. ದಾದಾ ಭಗವಾನ್ ಹದಿನಾಲ್ಕು ಲೋಕಗಳಿಗೂ ಒಡೆಯರು. ಅವರು ನಿಮ್ಮಲ್ಲೂ ಇದ್ದಾರೆ, ಎಲ್ಲರಲ್ಲೂ ಇದ್ದಾರೆ. ನಿಮ್ಮಲ್ಲಿ ಅವ್ಯಕ್ತರೂಪದಲ್ಲಿದ್ದಾರೆ ಮತ್ತು 'ಇಲ್ಲಿ' ನನ್ನೊಳಗೆ ಸಂಪೂರ್ಣ ರೂಪದಲ್ಲಿ ಪ್ರಕಟಗೊಂಡಿದ್ದಾರೆ. ದಾದಾ ಭಗವಾನ್‌ರವರಿಗೆ ನಾನೂ ನಮಸ್ಕಾರ

## ದಾದಾ ಭಾಗವಾನ್ ಫೌಂಡೇಶನ್ ನಿಂದ ಪ್ರಕಾಶಿತವಾದ ಕನ್ನಡ ಹಾಗೂ ಹಿಂದಿ ಪುಸ್ತಕಗಳು

## ಕನ್ನಡ ಪುಸ್ತಕಗಳು

1. ಆತ್ಮಸಾಕ್ಷಾತ್ಕಾರ
2. ಅಡ್ಜಸ್ಟ್ ಎವ್ರಿವೇರ್
3. ಸಂಘರ್ಷಣೆಯನ್ನು ತಪ್ಪಿಸಿ

## ಹಿಂದಿ ಪ್ರಸ್ತಕಗಳು

1. ಜ್ಞಾನಿ ಪುರುಷ್ ಕೀ ಪಹಚಾನ್
2. ಸರ್ವ್ ದುಃಖೋಂ ಸೇ ಮುಕ್ತಿ
3. ಕರ್ಮ್ ಕಾ ಸಿದ್ಧಾಂತ್
4. ಆತ್ಮಬೋಧ್
5. ಅಂತಃಕರಣ್ ಕಾ ಸ್ವರೂಪ್
6. ಜಗತ್ ಕರ್ತಾ ಕೌನ್?
7. ಭುಗತೇ ಉಸೀ ಕಾ ಭೂಲ್
8. ಅಡ್ಜಸ್ಟ್ ಎವೆರಿವ್ಹೇರ್
9. ಟಕರಾವ್ ಟಾಲಿಏ
10. ಹುವಾ ಸೋ ನ್ಯಾಯ್
11. ಚಿಂತಾ
12. ಕ್ರೋಧ್
13. ಮೈ ಕೌನ್ ಹೂಂ?
14. ವರ್ತಮಾನ್ ತೀರ್ಥಂಕರ್ ಸೀಮಂಧರ್ ಸ್ವಾಮಿ
15. ಮಾನವ ಧರ್ಮ
16. ಪ್ರೇಮ್
17. ಅಹಿಂಸಾ
18. ಪ್ರತಿಕ್ರಮಣ್ (ಸಂ.)
19. ಪಾಪ್–ಪುಣ್ಯ್
20. ಕರ್ಮ್ ಕಾ ವಿಜ್ಞಾನ್
21. ಚಮತ್ಕಾರ್
22. ವಾಣಿ, ವ್ಯವಹಾರ್ ಮೇ...
23. ಪೈಸೋಂಕಾ ವ್ಯವಹಾರ್
24 .ಪತಿ–ಪತ್ನಿ ಕಾ ದಿವ್ಯ ವ್ಯವ–ಹಾರ್
25. ಮಾತಾ ಪಿತಾ ಔರ್ ಬಚ್ಚೋಂಕಾ...
26. ಸಮಝ್ ಸೇ ಪ್ರಾಪ್ತ್ ಬ್ರಹ್ಮಚರ್ಯ್
27. ನಿಜದೋಷ್ ದರ್ಶನ್ ಸೇ...
28. ಕ್ಲೇಶ್ ರಹಿತ್ ಜೀವನ್
29. ಗುರು–ಶಿಷ್ಯ್
30. ಸೇವಾ–ಪರೋಪಕಾರ್
31. ತ್ರಿಮಂತ್ರ್
32. ಭಾವನಾ ಸೇ ಸುಧರೇ ಜನ್ಮೋಜನ್ಮ್
33. ದಾನ್
34. ಮೃತ್ಯು ಕೆ ರಹಸ್ಯ
35. ದಾದಾ ಭಗವಾನ್ ಕೌನ್?
36. ಸತ್ಯ–ಅಸತ್ಯ ಕೆ ರಹಸ್ಯ
37. ಆಪ್ತವಾಣಿ – 1 ರಿಂದ 9
38. ಆಪ್ತವಾಣಿ – 13 (ಭಾಗ 1 – 2)

ದಾದಾ ಭಗವಾನ್ ಫೌಂಡೇಶನ್‌ನಿಂದ ಗುಜರಾತಿ ಭಾಷೆಯಲ್ಲೂ ಹಲವಾರು ಪುಸ್ತಕಗಳು ಪ್ರಕಾಶಿತವಾಗಿವೆ. www.dadabhagwan.org ನಲ್ಲಿ ಸಹ ನೀವು ಈ ಎಲ್ಲಾ ಪುಸ್ತಕಗಳನ್ನು ಪಡೆಯಬಹುದು.ದಾದಾ ಭಗವಾನ್ ಫೌಂಡೇಶನ್‌ನಿಂದ ಪ್ರತಿ ತಿಂಗಳು ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 'ದಾದಾವಾಣಿ' ಮ್ಯಾಗಜಿನ್ ಪ್ರಕಾಶಿತವಾಗುತ್ತದೆ.

# ಸಂಪಾದಕೀಯ

ಈ 'ಮೃತ್ಯು' ಎನ್ನುವುದು ಮನುಷ್ಯನಿಗೆ ಎಷ್ಟೊಂದು ಭಯವನ್ನುಂಟು ಮಾಡಿಬಿಡುತ್ತದೆ. ಅದೆಷ್ಟೋ ರೀತಿಯಲ್ಲಿ ಆಘಾತವನ್ನುಂಟು ಮಾಡುವುದಲ್ಲದೆ, ಸಂಪೂರ್ಣವಾಗಿ ದುಃಖದಲ್ಲಿ ಮುಳುಗಿಸಿಬಿಡುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ಯಾರಾದರೊಬ್ಬರು ಮರಣದ ಸಾಕ್ಷಿಯಾಗಬೇಕಾಗಿ ಬರುತ್ತದೆ. ಆಗ ಆ ಸಮಯದಲ್ಲಿ ಕ್ಷಣಿಕ ಕಾಲದವರೆಗೆ ಮೃತ್ಯುವಿನ ವಿಷಯದ ಬಗ್ಗೆ ಮತ್ತು ಅದರ ಸ್ವರೂಪದ ವಾಸ್ತವಿಕತೆಯ ಬಗ್ಗೆ ಯೋಚಿಸ ತೊಡಗುತ್ತೇವೆ. ಆದರೆ ಆ ರಹಸ್ಯಗೆ ಪರಿಹಾರ ಸಿಗದೆ, ಅಲ್ಲಿಗೇ ಆ ಕುತೂಹಲವು ನಿಂತುಹೋಗುತ್ತದೆ. ಈ ಮೃತ್ಯುವಿನ ರಹಸ್ಯವನ್ನು ತಿಳಿಯಲು ಪ್ರತಿಯೊಬ್ಬರೂ ಉತ್ಸುಕರಾಗಿಯೇ ಇರುತ್ತಾರೆ. ಅಲ್ಲದೆ ಅದರ ವಿಷಯವಾಗಿ ಬಹಳಷ್ಟು ಕೇಳಲು ಮತ್ತು ಓದಲು ಸಿಗುತ್ತದೆಯಾದರೂ, ಅವೆಲ್ಲವೂ ಲೋಕವ್ಯವಹಾರದ ಮಾತುಗಳಾಗಿದ್ದು, ಕೇವಲ ಬುದ್ಧಿಯ ಊಹಾಪೋಹಗಳಾಗಿವೆ.

ಮೃತ್ಯು ಅಂದರೆ ಏನಿರಬಹುದು? ಮೃತ್ಯುವಿನ ಮೊದಲು ಹೇಗಿರಬಹುದು? ಮೃತ್ಯುವಿನ, ಆ ವೇಳೆಯು ಹೇಗಿರಬಹುದು? ಮೃತ್ಯುವಿನ ನಂತರ ಏನಿರಬಹುದು? ಹೀಗೆ ಮೃತ್ಯುವಿನ ಅನುಭವವನ್ನು ಹೇಳುವವರಾದರೂ ಯಾರು? ಯಾರು ಮೃತ್ಯು ಹೊಂದಿದ್ದಾರೆ, ಅವರು ಅವರ ಅನುಭವವನ್ನು ಹೇಳಲು ಸಾಧ್ಯವಿಲ್ಲ. ಯಾರು ಜನ್ಮ ತೆಗೆದುಕೊಳ್ಳುತ್ತಾರೆ, ಅವರಿಗೆ ಅವರ ಹಿಂದಿನ ಅವಸ್ಥೆ, ಸ್ಥಿತಿಯು ತಿಳಿದಿರುವುದಿಲ್ಲ. ಜನ್ಮದ ಮೊದಲು, ಮೃತ್ಯುವಿನ ನಂತರದ ಅವಸ್ಥೆಯನ್ನು ಯಾರಿಗೂ ತಿಳಿಯಲಾಗುವುದಿಲ್ಲ. ಹಾಗಾಗಿ ಮೃತ್ಯುವಿನ ಮೊದಲು, ಮೃತ್ಯುವಿನ ವೇಳೆಯಲ್ಲಿ ಹಾಗು ಮೃತ್ಯುವಿನ ನಂತರ ಯಾವ ದಿಕ್ಕಿನೆಡೆಗೆ ಸಾಗಬೇಕಾಗುತ್ತದೆ ಎನ್ನುವುದರ ರಹಸ್ಯವು ಸರಿಯಾಗಿ ತಿಳಿಯಲು ಸಿಗುವುದಿಲ್ಲ. ದಾದಾಶ್ರೀಯವರು ತಮ್ಮ ಜ್ಞಾನದಿಂದ ಅವಲೋಕನೆ ಮಾಡಿ ಈ ಎಲ್ಲಾ ರಹಸ್ಯಗಳನ್ನು ಹೇಗಿದೆಯೋ ಹಾಗೆ ಯಥಾರ್ಥವಾಗಿ ಬಹಿರಂಗಪಡಿಸಿದ್ದಾರೆ. ಅವುಗಳ ಸಂಕಲನವನ್ನು ಇಲ್ಲಿ ಪ್ರಕಟಿಸಲಾಗಿದೆ.

ಮೃತ್ಯುವಿನ ರಹಸ್ಯವನ್ನು ತಿಳಿಯುತ್ತಿದ್ದಂತೆಯೇ, ಮೃತ್ಯುವಿನ ಭಯವು ಓಡಿಹೋಗುತ್ತದೆ!

ಪ್ರೀತಿಗೆ ಪಾತ್ರರಾದವರ, ಆತ್ಮೀಯರ ಮರಣಾವಸ್ಥೆಯ ಸಮಯದಲ್ಲಿ ನಾವು ಏನು ಮಾಡಬೇಕು? ನಮ್ಮ ನಿಜವಾದ ಜವಾಬ್ದಾರಿ ಏನು? ಅವರ ಮುಂದಿನ ಅವಸ್ಥೆಯನ್ನು ಯಾವ ರೀತಿಯಲ್ಲಿ ಸುಧಾರಿಸಬಹುದು? ಪ್ರೀಯ ಆತ್ಮೀಯರ ಮರಣದ ನಂತರ ನಾವು ಏನು ಮಾಡಬೇಕು? ಯಾವ ತಿಳುವಳಿಕೆಯೊಂದಿಗೆ ನಾವು ಸಮಾಧಾನದಲ್ಲಿ ಇರಬೇಕು?

ಯಾವ ಲೋಕಾಭಿಪ್ರಾಯಗಳಿವೆಯೋ, ಅದು ಶ್ರಾದ್ಧವಾಗಿರಬಹುದು, ಅವಶೇಷಗಳು, ಬ್ರಾಹ್ಮಣರಿಗೆ ಭೋಜನ, ದಾನ, ಗರುಡಪುರಾಣ ಮತ್ತು ಇನ್ನಿತರೇ ಆಚರಣೆಗಳಲ್ಲಿನ ಸತ್ಯತೆ ಎಷ್ಟಿದೆ? ಮರಣ ಹೊಂದಿರುವವರಿಗೆ ಏನೇನು ತಲುಪುತ್ತದೆ? ಇವೆಲ್ಲವನ್ನೂ ಮಾಡಬೇಕೋ ಬೇಡವೋ? ಮೃತ್ಯುವಿನ ನಂತರದ ಗತಿ, ಸ್ಥಿತಿ ಹಾಗು ಇನ್ನು ಅನೇಕ ವಿಚಾರಗಳ ಬಗ್ಗೆ ಇಲ್ಲಿ ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಭಯಭೀತಿಗೆ ಒಳಪಡಿಸುವಂತಹ ಮೃತ್ಯುವಿನ ರಹಸ್ಯವನ್ನು ತೆರೆದಿಡುವುದರಿಂದ ಮನುಷ್ಯನಿಗೆ, ಜೀವಿತಕಾಲದಲ್ಲಿನ ವ್ಯವಹಾರಗಳಲ್ಲಿ ಅಂತಹ ಪರಿಸ್ಥಿತಿ ಎದುರಾದಾಗ ಈ ತಿಳುವಳಿಕೆಯು ಅವನಿಗೆ ಖಂಡಿತವಾಗಿ ಸಾಂತ್ವನವನ್ನು ನೀಡುತ್ತದೆ.

'ಜ್ಞಾನಿ ಪುರುಷರು' ಮಾತ್ರ ಈ ದೇಹದಿಂದ, ದೇಹದ ಎಲ್ಲಾ ಅವಸ್ಥೆಗಳಿಂದ, ಹುಟ್ಟಿನಿಂದ ಹಾಗೂ ಮೃತ್ಯುವಿನಿಂದ ಸಂಪೂರ್ಣ ಪ್ರತ್ಯೇಕವಾಗಿ ಇದ್ದು, ನಿರಂತರವಾಗಿ ಇವೆಲ್ಲದರ ಜ್ಞಾತಾ-ದೃಷ್ಟಾ (ನೋಡುವವ-ತಿಳಿಯುವವರಾಗಿ) ಇರುತ್ತಾರೆ. ಅಲ್ಲದೆ, ಅವರು ಆಜನ್ಮ-ಅಮರ ಆತ್ಮನ ಅನುಭವದ ದೃಷ್ಟಿಯಿಂದ ವ್ಯವಹರಿಸುತ್ತಾರೆ! ಜೀವನದ ಪೂರ್ವದಲ್ಲಿ, ಜೀವನದ ನಂತರದಲ್ಲಿ ಹಾಗೂ ದೇಹದ ಅಂತಿಮ ಅವಸ್ಥೆಯಲ್ಲಿ, ಅಜನ್ಮವೂ-ಅಮರವೂ ಆಗಿರುವಂತಹ ಆತ್ಮದ ವಾಸ್ತವಿಕತೆ ಏನಿದೆ? ಎನ್ನುವುದನ್ನು, ಜ್ಞಾನಿ ಪುರುಷರು ಜ್ಞಾನದ ದೃಷ್ಟಿಯಿಂದ ತಿಳಿದು, ಅದನ್ನು ವ್ಯಕ್ತಪಡಿಸುತ್ತಾರೆ.

ಆತ್ಮವಂತೂ ಸದಾ ಕಾಲವು ಜನನ-ಮರಣದಿಂದ ಹೊರಗೆಯೇ ಉಳಿದಿರುವುದಾಗಿದೆ, ಅದಂತೂ ಕೇವಲಜ್ಞಾನ ಸ್ವರೂಪವೇ ಆಗಿದೆ. ಕೇವಲ ಜ್ಞಾತಾ-ದೃಷ್ಟವೇ ಆಗಿದೆ. ಜನನ-ಮರಣವು ಆತ್ಮಕ್ಕೆ ಅಲ್ಲವೇ ಅಲ್ಲ! ಆದರೆ, ಬುದ್ಧಿಜ್ಞಾನದಿಂದ ಜನನ-ಮರಣದ ಪರಂಪರೆಯು ನಡೆಯುತ್ತಲೇ ಇರುತ್ತದೆ, ಎನ್ನುವುದು ಜನರ ಅನುಭವವಾಗಿದೆ. ಹಾಗಾಗಿ ಸ್ವಾಭಾವಿಕವಾಗಿ ಪ್ರಶ್ನೆ ಉದ್ಭವಿಸುತ್ತದೆ, ಈ ಜನ್ಮ-ಮರಣವು ಯಾವ ರೀತಿಯಿಂದ ನಡೆಯುತ್ತದೆ? ಎಂದು. ಮೃತ್ಯು ಸಮಯದಲ್ಲಿ ಆತ್ಮದ ಜೊತೆ-ಜೊತೆಯಲ್ಲಿ ಯಾವ ಯಾವ ವಸ್ತುಗಳು ಸೇರಿಕೊಂಡಿರುತ್ತವೆ, ನಂತರ ಅವುಗಗಳೆಲ್ಲಾ ಏನಾಗುತ್ತವೆ? ಪುನರ್ಜನ್ಮ ಯಾರಿಗಾಗುತ್ತದೆ? ಯಾವ ರೀತಿಯಲ್ಲಿ ಆಗುತ್ತದೆ? ಬರುವವರು-ಹೋಗುವವರು ಯಾರು? ಕರ್ತನಿಂದಾಗಿ ಕಾರಣ ಹಾಗೂ ಕಾರಣದಿಂದಾಗಿ ಕಾರ್ಯದ ಪರಂಪರೆಯನ್ನು ಯಾವ ರೀತಿಯಿಂದ ರಚಿಸಲಾಗಿದೆ? ಅದನ್ನು ಯಾವ ರೀತಿಯಿಂದ ಸ್ಥಗಿತಗೊಳಿಸಬಹುದು? ಆಯುಷ್ಯದ ಬಂಧನವು ಯಾವ ರೀತಿಯಿಂದ ಕಟ್ಟಿಕೊಳ್ಳುತ್ತದೆ? ಆಯುಷ್ಯವು ಯಾವುದರ ಆಧಾರದಿಂದಾಗಿದೆ? ಇಂತಹ ಹಲವಾರು ಸನಾತನ ಪ್ರಶ್ನೆಗಳಿಗೆ ನಿಖರವಾದ, ಸಮಾಧಾನಕರವಾದ ವೈಜ್ಞಾನಿಕ ತಿಳುವಳಿಕೆಯನ್ನು ಜ್ಞಾನಿ ಪುರುಷರ ವಿನಃ ಬೇರೆ ಯಾರಾದರೂ ನೀಡಲು ಶಕ್ಯರಿರುವರೇ?

ಅಷ್ಟೇ ಅಲ್ಲದೆ, ಇದರಿಂದಾಚೆಗಿನ ಗತಿಗಳಿಗೆ ಪ್ರವೇಶಿಸಲು ಕಾನೂನುಗಳು ಏನಿರಬಹುದು? ಅಪಘಾತಕ್ಕೆ ಕಾರಣಗಳು ಹಾಗೂ ಅದರ ಪರಿಣಾಮಗಳೇನು? ಪ್ರೇತ ಯೋನಿ ಅಂದರೇನು? ಭೂತ ಯೋನಿ ಇದೆಯೇ? ಕ್ಷೇತ್ರ ಬದಲಾವಣೆಯ ಕಾನೂನುಗಳು ಏನಿರಬಹುದು? ಭಿನ್ನ-ಭಿನ್ನ ಗತಿಗಳಿಗೆ ಆಧಾರವೇನು? ಗತಿಗಳಿಂದ ಮುಕ್ತಿ ಯಾವ ರೀತಿಯಿಂದ ಸಿಗುತ್ತದೆ? ಮೋಕ್ಷಗತಿಯನ್ನು ಪಡೆದ ಆತ್ಮವು ಎಲ್ಲಿಗೆ ಹೋಗುತ್ತದೆ? ಸಿದ್ಧಗತಿ ಅಂದರೆ ಏನು? ಈ ಎಲ್ಲಾ ವಿಚಾರಗಳ ಇಲ್ಲಿ ವಿವರಿಸಲಾಗಿದೆ.

ಆತ್ಮದ ಸ್ವರೂಪ ಹಾಗೂ ಅಹಂಕಾರದ ಸ್ವರೂಪದ ಬಗೆಗಿನ ಅತಿ ಸೂಕ್ಷ್ಮವಾದ ತಿಳುವಳಿಕೆಯನ್ನು ಜ್ಞಾನಿಯ ಹೊರತಾಗಿ ಬೇರೆ ಯಾರೂ ತಿಳಿಸಲಾರರು!

ಮೃತ್ಯುವಿನ ನಂತರ ಮತ್ತೆಂದೂ ಮರಣ ಹೊಂದಬೇಕಾಗಿಲ್ಲ; ಮತ್ತೆಂದೂ ಜನಿಸ ಬೇಕಾಗಿಲ್ಲ, ಅಂತಹ ದೆಸೆಯು ಪ್ರಾಪ್ತವಾಗುವ ಎಲ್ಲಾ ವಿವರಗಳನ್ನು ಇಲ್ಲಿ ಸೂಕ್ಷ್ಮವಾಗಿ ಸಂಕಲನೆಯನ್ನು ಮಾಡಲಾಗಿದೆ. ಇದನ್ನು ವಾಚಿಸುವ ವಾಚಕರು ಸಂಸಾರದ ವ್ಯವಹಾರವನ್ನು ಸಂಪೂರ್ಣವಾಗಿ ನಿರ್ವಹಿಸುತ್ತಾ ಆಧ್ಯಾತ್ಮಿಕದಲ್ಲಿ ಮುಂದುವರಿಯಲು ಹಿತಕಾರಿಯಾಗಿದೆ.

-ಡಾ. ನಿರುಬೇನ್ ಅಮೀನ್

# ಮೃತ್ಯು ಸಮಯದಲ್ಲಿ, ಮೊದಲು ಹಾಗು ನಂತರ...

## ಮುಕ್ತಿ, ಜನನ-ಮರಣದಿಂದ!

**ಪ್ರಶ್ನಕರ್ತ:** ಜನನ-ಮರಣದ ಜಂಜಾಟದಿಂದ ತಪ್ಪಿಸಿಕೊಳ್ಳುವುದು ಹೇಗೆ?

**ದಾದಾಶ್ರೀ:** ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳುತ್ತಿದ್ದೀರಿ, ನಿಮ್ಮ ಹೆಸರು ಏನು?

**ಪ್ರಶ್ನಕರ್ತ:** ಚಂದುಭಾಯ್

**ದಾದಾಶ್ರೀ:** ನಿಜವಾಗಿ ನೀವು ಚಂದುಭಾಯ್, ಹೌದಾ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಚಂದುಭಾಯ್ ನಿಮ್ಮ ಹೆಸರಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ**: ಹಾಗಾದರೆ ನೀವು ಯಾರು? ನಿಮ್ಮ ಹೆಸರು ಚಂದುಭಾಯ್ ಎಂದು ನಮ್ಮೆಲ್ಲರಿಗೂ ತಿಳಿದಿದೆ, ಆದರೆ ನೀವು ಯಾರು?

**ಪ್ರಶ್ನಕರ್ತ:** ಅದನ್ನು ಅರಿಯುವುದಕ್ಕಾಗಿಯೇ ಬಂದಿರುವುದಲ್ಲವೇ?

**ದಾದಾಶ್ರೀ:** ಈಗ ಅದನ್ನು ಅರಿತು ಬಿಟ್ಟರೆ, ಜನನ-ಮರಣದ ಜಂಜಾಟದಿಂದ ಬಿಡುಗಡೆ ಹೊಂದಬಹುದು.

ಇಲ್ಲಿ ಆಗಿರುವ ತಪ್ಪೇನೆಂದರೆ, ಈವರೆಗೆ ಎಲ್ಲವೂ 'ಚಂದುಭಾಯ್'ನ ಹೆಸರಿನ ಮೇಲೆಯೇ ನಡೆಯುತ್ತಿರುವುದಾಗಿದೆ ಅಲ್ಲವೇ? ಎಲ್ಲವೂ ಈ 'ಚಂದುಭಾಯ್'ನ ಹೆಸರಿನ ಮೇಲೆ? 'ಅರೇ ನಿಮಗೆ, ನಿಮ್ಮ ಹೆಸರು ಮೋಸ ಮಾಡಿಬಿಡುತ್ತದೆ! ನಿಮಗಾಗಿ ಸ್ವಲ್ಪ ನಿಮ್ಮದೆಂದು ಏನಾದರೂ ಇಟ್ಟುಕೊಳ್ಳಬೇಕಲ್ಲವೇ?'

ಅನಾಮದೇಯ ಅಂದರೆ ಪ್ರಕೃತಿಯ ಜಪ್ತಿ! ಯಾವ ರೀತಿಯಲ್ಲಿ ಜಪ್ತಿಯಾಗುತ್ತದೆ? ಈ ಹೆಸರಿನ ಮೇಲಿನ ಎಲ್ಲಾ ಬ್ಯಾಂಕ್ ಬ್ಯಾಲೆನ್ಸ್ ಜಪ್ತಿಯಾಗುತ್ತದೆ, ಮಕ್ಕಳು ಜಪ್ತಿಯಾಗುತ್ತದೆ, ಬಂಗಲೆ ಜಪ್ತಿಯಾಗುತ್ತದೆ. ಕೊನೆಗೇನಾದರೂ ಈ ಪಂಚೆ ನಿಮ್ಮ ಹೆಸರಿನಲ್ಲಿ ಉಳಿದಿದ್ದರೆ, ಅದೂ ಕೂಡಾ ಜಪ್ತಿಯಾಗುತ್ತದೆ! ಎಲ್ಲವೂ ಜಪ್ತಿಯಲ್ಲಿ ಹೋಗಿಬಿಡುತ್ತದೆ. ಆಗ, 'ಸಾಹೇಬರೇ, ಈಗ

ನಾನು ನನ್ನೊಡನೆ ಏನ್ನನ್ನು ತೆಗೆದುಕೊಂಡು ಹೋಗುವುದು?' ಎಂದು ಕೇಳಿದಾಗ, ಏನು ಹೇಳುತ್ತಾರೆ, 'ಈ ಲೋಕದ ಜನರೊಂದಿಗೆ ಕಟ್ಟಿ ಕೊಂಡಿರುವ ಕಲಹದ ಗಂಟನ್ನು ಮಾತ್ರ ತೆಗೆದುಕೊಂಡು ಹೋಗಬಹುದು' ಎಂದು ಹೇಳುತ್ತಾರೆ. ಹಾಗಾಗಿ ಈ ಹೆಸರಿನ ಮೇಲಿನ ಎಲ್ಲವೂ ಜಪ್ತಿಯಲ್ಲಿ ಹೋಗುತ್ತದೆ. ಆದುದರಿಂದ ನಮ್ಮ ಸ್ವಂತಕ್ಕಾಗಿ ಏನನ್ನಾದರೂ ಮಾಡಿಕೊಳ್ಳಬೇಕಲ್ಲವೇ? ಮಾಡಿಕೊಳ್ಳಬೇಕೋ,ಬೇಡವೋ?

## ಕಟ್ಟು, ಪರಭವದ ಮೂಟೆ!

ನೀವು, ನಿಮ್ಮ ಹತ್ತಿರದ ಬಂಧುಗಳನ್ನು ಬಿಟ್ಟು ಹೊರಗಿನ ಲೋಕದ ಜನರಿಗೆ ಏನಾದರು ಸಹಾಯವನ್ನು ಮಾಡಿದ್ದರೆ, ಅದಕ್ಕಾಗಿ ಶ್ರಮ ಪಟ್ಟಿದ್ದರೆ, ಮತ್ತೆ ಇನ್ನ್ಯಾವುದಾದರೂ ನೆರವು ನೀಡಿದ್ದರೆ, ಆಗ ಅದು 'ಮುಂದಿನ ಜನ್ಮಕ್ಕೆ' ಬರುತ್ತದೆ. ಸಂಬಂಧಿಗಳಲ್ಲದ ಬೇರೆ ಹೊರಗಿನ ಜನರಿಗೆ ಔಷಧಿಗಾಗಿ ದಾನವನ್ನು ಮಾಡುವುದು, ಔಷಧಿಯ ದಾನವಾಗಿದೆ. ಹಾಗೆಯೇ ಆಹಾರ ದಾನವನ್ನು ಮಾಡಿರುವುದಾಗಲಿ, ವಿದ್ಯಾ ದಾನವನ್ನು ಮಾಡಿರುವುದಾಗಲಿ ಹಾಗೂ ಅಭಯ ದಾನವನ್ನು ನೀಡಿರುವುದು, ಈ ರೀತಿಯಲ್ಲಿ ಸಹಾಯವನ್ನು ಮಾಡಿರುವುದೇನಿದೆ, ಅವುಗಳು ಜೊತೆಯಲ್ಲಿ ಬರುವುದಾಗಿದೆ. ಇವುಗಳಲ್ಲಿ ಯಾವ ಸಹಾಯವನ್ನಾದರೂ ಮಾಡಿದ್ದೀರಾ, ಅಥವಾ ಎಲ್ಲವನ್ನು ಹಾಗೆ ನುಂಗಿಬಿಟ್ಟಿದ್ದೀರಾ?

ಜೊತೆಯಲ್ಲಿ ತೆಗೆದುಕೊಂಡು ಹೋಗುವುದೇನಾದರೂ ಇದ್ದಿದ್ದರೆ, ಮೂರು ಲಕ್ಷ ಸಾಲವನ್ನಾದರೂ ಮಾಡಿ ಕೊಂಡುಹೋಗುತ್ತಿದ್ದರು! ಆಗ ಅವರೇ ಧನ್ಯರು!! ಆದರೆ, ಈ ಜಗತ್ತೇ ಹಾಗಿದೆ; ಇಲ್ಲಿಂದ ಏನ್ನನ್ನೂ ತೆಗೆದುಕೊಂಡುಹೋಗುವ ಹಾಗಿಲ್ಲ, ಅದು ಒಳ್ಳೆಯದೇ ಆಗಿದೆಯಲ್ಲ!

## ಮಾಯೆಯ ಕಲಾಕೃತಿ!

ಹುಟ್ಟು ಮಾಯೆಯಿಂದಾಗಿದೆ, ಲಗ್ನವು ಮಾಯೆಯಿಂದಾಗಿದೆ ಮತ್ತು ಮರಣವೂ ಕೂಡಾ ಮಾಯೆಯಿಂದಲೇ ಆಗಿದೆ. ಇಷ್ಟವಿರಲಿ ಅಥವಾ ಇಷ್ಟವಿಲ್ಲದಿರಲಿ, ಇವುಗಳಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಅಂತಹ ಎಷ್ಟೊಂದು ಷರತ್ತುಗಳನ್ನು ಈ ಜೀವನದಲ್ಲಿ ಹೊಂದಲಾಗಿದೆ. ಅದು ಕೇವಲ ಮಾಯೆಯ ಸಾಮ್ರಾಜ್ಯವಲ್ಲ, ಯಜಮಾನತ್ವವು ನಿಮ್ಮದು; ಹಾಗಾಗಿ ನಿಮ್ಮ ಇಚ್ಛೆಯ ಪ್ರಮಾಣದಂತೆಯೇ ನಡೆದಿರುತ್ತದೆ. ಹಿಂದಿನ ಜನ್ಮದಲ್ಲಿ ನಿಮ್ಮ ಇಚ್ಛೆ ಏನಿದೆಯೋ, ಅದರ ಲೆಕ್ಕಾಚಾರದ (Balance sheet) ಅನುಸಾರವಾಗಿ ಮಾಯೆಯು ನಡೆಸುತ್ತದೆ, ಆದ್ದರಿಂದ, ಈಗ

ಗಲಾಟೆಯನ್ನು ಮಾಡಿದರೆ ಪ್ರಯೋಜನವಿಲ್ಲ. ನಮ್ಮಿಂದಲೇ ಮಾಯೆಗೆ ಹೇಳಲಾಗಿದೆ, ಇದು ನಮ್ಮ ಲೆಕ್ಕಾಚಾರವೆಂದು!

## ಜೀವನವು ಒಂದು ಜೈಲು!

**ಪ್ರಶ್ನಕರ್ತ:** ನಿಮ್ಮ ಪ್ರಕಾರ ಜೀವನವೆಂದರೆ ಏನು?

**ದಾದಾಶ್ರೀ:** ನನ್ನ ಪ್ರಕಾರ ಜೀವನ ಅಂದರೆ, ಜೈಲು! ಅದರಲ್ಲಿ ನಾಲ್ಕು ಪ್ರಕಾರದ ಜೈಲುಗಳಿವೆ.

ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಗೃಹಬಂಧನವು, ದೇವಲೋಕವಾಗಿದೆ. ಎರಡನೆಯದಾಗಿ, ಮನುಷ್ಯನ ಗತಿಯು ಸಾಧಾರಣವಾದ ಸೆರೆಮನೆ. ಮೂರನೆಯದಾಗಿ, ಪಶುವಿನ ಗತಿಯು ಬಹಳ ಶ್ರಮದಾಯಕ ಸೆರೆಮನೆ. ಇನ್ನು ಕೊನೆಯದಾಗಿ, ನರಕವು ಜೀವಾವಧಿಯ ಸೆರೆಮನೆಯಾಗಿದೆ.

## ಹುಟ್ಟಿನಿಂದಲೇ ಪ್ರಾರಂಭ, ಕೊಡಲಿಯ ಪೆಟ್ಟು!

ಈ ಶರೀರವು ಕ್ಷಣ ಕ್ಷಣಕ್ಕೂ ಮರಣ ಹೊಂದುತ್ತಿದೆ, ಆದರೆ ಲೋಕದ ಜನರಿಗೆ ಇದರ ಬಗ್ಗೆ ಏನಾದರೂ ಅರಿವಿದೆಯೇ? ನಮ್ಮ ಜನರಂತು ಹೇಗೆಂದರೆ, ಯಾವಾಗ ಮರವು ಎರಡು ತುಂಡಾಗಿ ಕೆಳಗೆ ಬೀಳುತ್ತದೆಯೋ, ಆಗ ಹೇಳುತ್ತಾರೆ 'ತುಂಡಾಗಿ ಬಿದ್ದಿದೆ' ಎಂದು. ಅಯ್ಯೋ ಮೂಢ, ಅದಕ್ಕೆ ಪ್ರಾರಂಭದಿಂದ ಕೊಡಲಿಯ ಏಟು ಬೀಳುತ್ತಲೇ ಇದೆ.

## ಮೃತ್ಯುವಿನ ಭಯ!

ಈ ಜಗತ್ತು ನಿರಂತರ ಭಯದಿಂದ ಕೂಡಿದೆ. ಒಂದು ಕ್ಷಣವೂ ನಿರ್ಭಯವಾಗಿ ಇರಲು ಸಾಧ್ಯವಾಗದಂತಹ ಜಗತ್ತು! ಹಾಗೂ ಎಷ್ಟು ನಿರ್ಭಯವೆಂದು ಅನ್ನಿಸುತ್ತದೆಯೋ, ಅಷ್ಟು ಮೂರ್ಛೆಯಲ್ಲಿರುವಂತಹ ಜೀವಿಗಳು. ಜನರು ಕಣ್ಣು ತೆರೆದುಕೊಂಡು ನಿದ್ದೆ ಮಾಡುತ್ತಿರುವುದರಿಂದ ಈ ಜಗತ್ತು ನಡೆಯುತಲಿದೆ.

**ಪ್ರಶ್ನಕರ್ತ:** ಹೀಗೆಂದು ಕೇಳಿದ್ದೇನೆ, ಅದೇನೆಂದರೆ, ಆತ್ಮ ಮರಣ ಹೊಂದುವುದಿಲ್ಲ, ಜೀವವು ಮರಣ ಹೊಂದುತ್ತದೆ ಎಂದು.

**ದಾದಾಶ್ರೀ:** ಆತ್ಮವು ಮರಣ ಹೊಂದುವುದೇ ಇಲ್ಲ. ಆದರೆ ಎಲ್ಲಿಯವರೆಗೆ ನೀವು ಆತ್ಮಸ್ವರೂಪರಾಗಿಲ್ಲವೋ, ಅಲ್ಲಿಯವರೆಗೆ ನಿಮಗೆ ಭಯವು ಇದ್ದೇ ಇರುತ್ತದೆ. ಮರಣದ ಭಯವು ಇದ್ದೇ ಇದೆ ಅಲ್ಲವೇ? ಈ ದೇಹಕ್ಕೆ ಏನಾದರೂ ಸ್ವಲ್ಪ ನೋವಾದರೆ ಸಾಕು, 'ಹೊರಟು ಹೋಗುತ್ತೇನೆ, ಮರಣ ಹೊಂದಿಬಿಡುತ್ತೇನೆ' ಎನ್ನುವ ಭಯ ಪ್ರಾರಂಭವಾಗುತ್ತದೆ. ದೇಹ ದೃಷ್ಟಿಯೇ ಇಲ್ಲದೆ ಹೋದರೆ, ಆಗ ತಾನು ಮರಣ ಹೊಂದುವುದಿಲ್ಲ. ಆದರೆ ಇಲ್ಲಿ, 'ನಾನೇ ಅದು, ಅದುವೇ ನಾನು' ('ನನ್ನದೇ ದೇಹ, ದೇಹವೇ ನಾನು') ಎಂದು ನಿಮಗೆ ನೂರಕ್ಕೆ ನೂರು ಅಂಶ ನಂಬಿಕೆ ಉಳಿದುಬಿಟ್ಟಿದೆ. 'ನಿಮಗೆ, ನೀವು ಚಂದುಲಾಲ್, ಅವನೇ ನೀವು' ಎಂದು ಶೇಕಡಾ ನೂರರಷ್ಟು ಖಚಿತವಾಗಿದೆ ಅಲ್ಲವೇ?

## ಯಮರಾಜನೋ ಅಥವಾ ನಿಯಮರಾಜನೋ?

ಈ ಹಿಂದೂಸ್ಥಾನದಲ್ಲಿರುವ ಎಲ್ಲಾ ಮೂಢನಂಬಿಕೆಗಳನ್ನು ತೆಗೆದು ಹಾಕಬೇಕು. ಇಡೀ ದೇಶದಲ್ಲಿನ ಬಡಪಾಯಿ ಜನರು ಈ ಮೂಢನಂಬಿಕೆಯಿಂದಾಗಿ ದಣಿದು ಹೋಗಿದ್ದಾರೆ. ಯಮರಾಜ ಎನ್ನುವವರು ಯಾರೂ ಇಲ್ಲವೆಂದು ನಾನು ಖಚಿತವಾಗಿ ಹೇಳುತ್ತೇನೆ. ಆದರೂ ಕೆಲವು ಜನರು ಕೇಳುತ್ತಾರೆ, 'ಏನು ನೀವು ಹೇಳುವುದು? ಯಾರಾದರೂ ಇರಬೇಕಲ್ಲವೇ?' ಎಂದು. ಆಗ ನಾನು ಹೇಳುತ್ತೇನೆ, 'ನಿಯಮರಾಜನು ಇದ್ದಾನೆ' ಅದನ್ನು ನಾನು ನೋಡಿ ಹೇಳುತ್ತಿರುವೆ. ನಾನು ಎಲ್ಲಿಯೋ ಓದಿದ್ದನ್ನು ಹೇಳುತ್ತಿಲ್ಲ. ಅದನ್ನು ನನ್ನ ಆಂತರಿಕ ದರ್ಶದಿಂದ ನೋಡಿದ್ದೇನೆ, ಈ ಹೊರಗಿನ ಕಣ್ಣಿನಿಂದಲ್ಲ. ನನ್ನದು ಯಾವ ಒಳ ದರ್ಶವಿದೆ ಅದರಿಂದ ನಾನು ನೋಡಿ ಈ ಎಲ್ಲವನ್ನು ಹೇಳುತ್ತಿದ್ದೇನೆ.

## ಮೃತ್ಯುವಿನ ನಂತರ ಏನು?

**ಪ್ರಶ್ನಕರ್ತ:** ಮರಣದ ನಂತರ ಯಾವ ಗತಿ ಬರುತ್ತದೆ?

**ದಾದಾಶ್ರೀ:** ಇಡೀ ಜೀವನದಲ್ಲಿ ಯಾವ ಕಾರ್ಯಗಳನ್ನು ಮಾಡಲಾಗಿದೆ, ಯಾವ ಧಂದೆಗಳನ್ನು ಮಾಡಲಾಗಿದೆ, ಅವೆಲ್ಲವುಗಳ ಲೆಕ್ಕಾಚಾರದ ಪಟ್ಟಿ ಮರಣದ ಸಮಯದಲ್ಲಿ ಬರುತ್ತದೆ. ಮರಣ ಕಾಲದ ಒಂದು ಗಂಟೆಯ ಮೊದಲು ಲೆಕ್ಕಾಚಾರದ ಪಟ್ಟಿ ಬರುತ್ತದೆ. ಈ ಮೊದಲು, ತನಗೆ ಹಕ್ಕಿಲ್ಲದಿದ್ದರೂ ಯಾವುದೆಲ್ಲವನ್ನು ಕಸಿದುಕೊಳ್ಳಲಾಗಿತ್ತು, ಮತ್ತೊಬ್ಬರ ಹಣವನ್ನು ಎಗರಿಸಲಾಗಿತ್ತು, ಸ್ತ್ರೀಯರಿಗೆ ಮೋಸಮಾಡಲಾಗಿತ್ತು, ಹೀಗೆ ತನ್ನದಲ್ಲದ್ದನ್ನು ಬಾಚಿಕೊಳ್ಳಲಾಗಿತ್ತು, ಬುದ್ಧಿಯ ಚಾಣಾಕ್ಷದಿಂದ ಹೇಗೆಂದರೆ ಹಾಗೆ ಮೋಸಗೊಳಿಸಲಾಗಿತ್ತು

ಇವೆಲ್ಲಾದರ ಫಲಿತಾಂಶದಿಂದ ಪ್ರಾಣಿಯ ಗತಿಯನ್ನು ಪಡೆಯಬೇಕಾಗುತ್ತದೆ. ಹಾಗು ಇಡೀ ಜೀವನ ಸಜ್ಜನರಾಗಿ ಬಾಳಿದ್ದರೆ, ಆಗ ಮನುಷ್ಯ-ಗತಿ ಹೊಂದುವುದಾಗಿದೆ. ಈ ನಾಲ್ಕು ಪ್ರಕಾರದ ಗತಿಗಳಲ್ಲಿ ಒಂದು ಗತಿಯು ಮರಣದ ನಂತರ ಬರುವುದು. ತನ್ನ ಸ್ವಾರ್ಥಕ್ಕೋಸ್ಕರ ಯಾರು ಇಡೀ ಊರನ್ನೇ ನಾಶಮಾಡಿರುವವರು ಇರುತ್ತಾರೆ, ಅಂಥವರಿಗೆ ಮತ್ತೆ ನರಕಗತಿ ಪ್ರಾಪ್ತಿಯಾಗುತ್ತದೆ. ಅಪಕಾರ ಮಾಡಿದರೂ ಸಹ ಉಪಕಾರ ಮಾಡುವವರು Super Human ಆಗಿರುತ್ತಾರೆ, ಅಂಥವರು ನಂತರ ದೇವಗತಿಯನ್ನು ಪಡೆಯುತ್ತಾರೆ.

## ಯೋಗ ಉಪಯೋಗ, ಪರೋಪಕಾರಕ್ಕಾಗಿ!

ಮನಸ್ಸು-ವಾಣಿ-ವರ್ತನೆ ಹಾಗೂ ಆತ್ಮದ ಉಪಯೋಗವನ್ನು, ಲೋಕದ ಜನರ ಒಳಿತಿಗಾಗಿ ಬಳಸಬೇಕು. ಕೇವಲ ತನ್ನ ಸ್ವಾರ್ಥಕ್ಕಾಗಿ ಬಳಸಿದರೆ, ಆಗ ವೃಕ್ಷವಾಗಿ ಜನ್ಮತಾಳಬೇಕಾಗುತ್ತದೆ. ನಂತರ ಐದು ಸಾವಿರ ವರ್ಷಗಳವರೆಗೆ ಮರವಾಗಿ ಬಳಲಬೇಕಾಗುತ್ತದೆ ಮತ್ತು ಆ ಮರದ ಫಲವನ್ನು ಜನರು ತಿಂದು, ಮರವನ್ನು ಸೌದೆ ಮಾಡಿ ಸುಡುತ್ತಾರೆ. ಅದರ ನಂತರದ ಜೀವನದಲ್ಲಿ, ಲೋಕದ ಜನರು ಅಂಥವರನ್ನು ಖೈದಿಯ ರೀತಿಯಲ್ಲಿ ಕೆಲಸ ಮಾಡಿಸುತ್ತಾರೆ. ಅದ್ದರಿಂದಲೇ ಭಗವಾನರು ಹೇಳಿರುವುದು, 'ನಿನ್ನ ಮನಸ್ಸು-ವಾಣಿ-ವರ್ತನೆ ಹಾಗು ಆತ್ಮದ ಉಪಯೋಗವನ್ನು ಬೇರೆಯವರಿಗಾಗಿ ಬಳಸು. ಅದರ ನಂತರವೂ ನಿನಗೆ ಏನಾದರು ದುಃಖವು ಉಂಟಾದರೆ, ಆಗ ನನಗೆ ಬಂದು ಹೇಳು.'

## ಬೇರೆಡೆಗೆ ಹೋಗುವುದಾದರೂ ಎಲ್ಲಿಗೆ?

**ಪ್ರಶ್ನಕರ್ತ:** ದೇಹವನ್ನು ಬಿಟ್ಟುಹೋದ ನಂತರ ಮತ್ತೆ ಬರುವುದು ಇದೆಯೇ?

**ದಾದಾಶ್ರೀ:** ಬೇರೆಲ್ಲಿಗೂ ಹೋಗುವಂತೆಯೇ ಇಲ್ಲ! ಇಲ್ಲಿಂದ ಇಲ್ಲೇ. ನಮ್ಮ ಅಕ್ಕಪಕ್ಕದಲ್ಲಿ ಯಾವ ಎತ್ತು-ಹಸು ಸಾಕುತ್ತಾರೆ, ಯಾವ ನಾಯಿ ಯಾವಾಗಲು ಜೊತೆಯಲ್ಲಿಯೇ ಇರುತ್ತದೆಯಲ್ಲ, ನಮ್ಮ ಕೈಯಿಂದಲೇ ತಿನ್ನುತ್ತಾ-ಕುಡಿಯುತ್ತಾ ಇರುತ್ತದೆ, ನಮ್ಮನ್ನೇ ನೋಡುತ್ತಿರುತ್ತದೆ, ನಮ್ಮನ್ನು ಗುರುತು ಹಿಡಿಯುತ್ತದೆ, ಅದೇ ನಮ್ಮ ಮಾಮ, ಚಿಕ್ಕಪ್ಪ ಅಥವಾ ಅತ್ತೆ; ಎಲ್ಲರೂ ಅವರುಗಳೇ ಇಲ್ಲೇ ಸುತ್ತಮುತ್ತಲು ಇರುತ್ತಾರೆ. ಆದುದರಿಂದ ಪ್ರಾಣಿಗಳಿಗೆ ಹಿಂಸೆ ಕೊಡಬೇಡಿ, ಒಳ್ಳೆಯ ರೀತಿಯಲ್ಲಿ ಊಟ ತಿಂಡಿಯನ್ನು ಕೊಡಿ. ಅವುಗಳೆಲ್ಲಾ ನಿಮ್ಮ ಹತ್ತಿರದವರೇ, ಹಾಗಾಗಿ ನಿಮಗೆ ಅಂಟಿಕೊಂಡೇ ಓಡಾಡುತ್ತವೆ; ಹೇಗೆ ಎತ್ತು ತನ್ನ ನಾಲಿಗೆಯಿಂದ ನಮ್ಮನ್ನು ನೆಕ್ಕುತ್ತದೆ!

## ರಿಟರ್ನ್ ಟಿಕೆಟ್!

**ಪ್ರಶ್ನಕರ್ತ:** ಹಸು-ಎತ್ತುಗಳ ಅವತಾರವು ಈ ಮಧ್ಯದಲ್ಲಿ ಯಾಕೆ ಬಂತು?

**ದಾದಾಶ್ರೀ:** ಅನಂತ ಅವತಾರಗಳಲ್ಲಿ ಬಳಲಿ ಬೆಂಡಾಗಿರುವುದಾಗಿದೆ, ಈ ಲೋಕದ ಜನರೆಲ್ಲಾ ಹಸುಗಳು-ಎಮ್ಮೆಗಳಿಂದಲೇ ಬಂದಿರುವುದಾಗಿದೆ. ಮತ್ತು ಇಲ್ಲಿಂದ ಹೋಗಬೇಕಾದರೆ, ಶೇಕಡಾ ಹದಿನೈದರಷ್ಟು ಜನಸಂಖ್ಯೆಯನ್ನು ಬಿಟ್ಟು ಉಳಿದವರೆಲ್ಲರೂ ಅಲ್ಲಿಗೆಯೇ ವಾಪಸು ಹೋಗುವ 'ಟಿಕೆಟ್' ಹೊಂದಿರುತ್ತಾರೆ. ಯಾರೆಲ್ಲಾ ಅಲ್ಲಿಯ 'ಹಿಂದಿರುಗಿ ಹೋಗುವ ಟಿಕೆಟ್.' ತೆಗೆದುಕೊಂಡು ಬಂದಿರುತ್ತಾರೆಂದರೆ, ಕಲಬೆರಿಕೆ ಮಾಡುವವರು, ತನಗೆ ಹಕ್ಕು ಇಲ್ಲದಿದ್ದರೂ ಕಸಿದುಕೊಳ್ಳುವವರು, ತನ್ನ ಹಕ್ಕು ಇಲ್ಲದಿದ್ದರೂ ಭೋಗಿಸುವವರು. ತನ್ನ ಹಕ್ಕು ಇಲ್ಲದಿರುವಲ್ಲಿ ಪ್ರವೇಶ ಮಾಡಿದರೆ ನಂತರ ಪ್ರಾಣಿಯ ಅವತಾರ ಬಂದೇ ಬರುತ್ತದೆ.

## ಹಿಂದಿನ ಜನ್ಮದ ವಿಸ್ಮೃತಿ!

**ಪ್ರಶ್ನಕರ್ತ:** ನಮಗೆ ಹೋದ ಜನ್ಮದ ನೆನಪು ಯಾಕೆ ಇರುವುದಿಲ್ಲ? ಹಾಗೂ ನೆನಪು ಉಳಿದರೆ ಏನಾಗುತ್ತದೆ?

**ದಾದಾಶ್ರೀ:** ಅದು ಯಾರಿಗೆ ನೆನಪಿಗೆ ಬರುತ್ತದೆಂದರೆ, ಯಾರು ಮರಣದ ಸಮಯದಲ್ಲಿ ಸ್ವಲ್ಪವೂ ದುಃಖವಿಲ್ಲದೆ ಇರುತ್ತಾರೆ ಹಾಗೂ ಇಲ್ಲಿ ಒಳ್ಳೆಯ ಆಚಾರ-ವಿಚಾರಗಳನ್ನು ಹೊಂದಿರುತ್ತಾರೆ, ಅಂಥವರಿಗೆ ನೆನಪಿಗೆ ಬರುತ್ತದೆ. ಇದಕ್ಕೆ ಕಾರಣವೇನೆಂದರೆ, ತಾಯಿಯ ಗರ್ಭದಲ್ಲಿ ಇರುವಾಗ ಹೇಳಲು ಅಸಾಧ್ಯವಾದ ದುಃಖವಿರುತ್ತದೆ. ಆ ದುಃಖದ ಜೊತೆಗೆ ಮರಣದ ಸಮಯಲ್ಲಿ ಪಟ್ಟಂತಹ ತೀವ್ರವಾದ ಸಂಕಟ ಇವೆರಡೂ ಇರುತ್ತವೆ. ಇದರಿಂದಾಗಿ ನಂತರ ಪ್ರಜ್ಞೆ ಇಲ್ಲದಂತಾಗುತ್ತದೆ. ಹೀಗೆ ತೀವ್ರವಾದ ದುಃಖಗಳ ಕಾರಣದಿಂದಾಗಿ ನೆನಪು ಉಳಿಯುವುದಿಲ್ಲ.

## ಅಂತಿಮ ಸಮಯದ ಗಂಟನ್ನು ಶೇಖರಿಸು...

ನಮಗೊಬ್ಬರು ಎಂಬತ್ತು ವರ್ಷದ ಚಿಕ್ಕಪ್ಪ ಇದ್ದರು. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ನನಗೆ ಮೊದಲೇ ತಿಳಿದಿತ್ತು, ಇನ್ನು ಎರಡು-ಮೂರು ದಿನಗಳಲ್ಲಿ ಇಲ್ಲಿಂದ ಹೋಗುವವರಿದ್ದಾರೆ ಎಂದು. ಆದರೂ, ನನಗೆ ಅವರು ಕೇಳಿದರು, 'ಆ ಚಂದು ಭಾಯ್ ನನ್ನನ್ನು ನೋಡಲು ಬರಲೇ ಇಲ್ಲ.' ಅದಕ್ಕೆ ನಾನು, 'ಚಂದು ಭಾಯ್, ಆಗಲೇ ಬಂದು ಹೋದರು' ಎಂದು ಹೇಳಿದೆ. ಮತ್ತೆ ಕೇಳಿದರು, 'ಆ ನಗೀನ್ ದಾಸ್ ಎಲ್ಲಿ?' ಎಂದು. ಹೀಗೆ ಹಾಸಿಗೆಯ ಮೇಲೆ

ಮಲಗಿಕೊಂಡೇ ಎಲ್ಲಾ ನೋಂದಣಿ ಮಾಡಿಕೊಳ್ಳುತ್ತಾ, ಯಾರೆಲ್ಲಾ ನೋಡಲು ಬಂದಿದ್ದರು ಎಂಬ ವಿಚಾರವನ್ನೇ ಮಾಡುತಲಿರುತ್ತಿದ್ದರು. ಅಯ್ಯೋ! ನಿಮ್ಮ ಶರೀರದ ಬಗ್ಗೆ ಕಾಳಜಿ ವಹಿಸಿ! ಇನ್ನೇನು ಎರಡು-ಮೂರು ದಿನಗಳಲ್ಲಿ ಹೋಗಬೇಕಾಗಿದೆ. ಮೊದಲು ನೀವು, ನಿಮ್ಮ ಗಂಟು ಕಟ್ಟಿಕೊಳ್ಳುವುದನ್ನು ನೋಡಿ. ನೀವು ಇಲ್ಲಿಂದ ತೆಗೆದುಕೊಂಡು ಹೋಗಬೇಕಾಗಿರೋ ಕಂಬಳಿಯನ್ನು ಸುತ್ತಿಕೊಳ್ಳಿ. ಆ ನಗೀನ್ ದಾಸ್ ಬಾರದೇ ಇದ್ದರೂ ಏನಾಗಬೇಕಾಗಿದೆ?

## ಜ್ವರ ಬಂತು ಕೂಡಲೇ ಟಪ್!

ಮನೆಯಲ್ಲಿ ವಯಸ್ಸಾಗಿರುವ ಹಿರಿಯರಿಗೆ ಹುಷಾರಿಲ್ಲದೆ ಇರುವಾಗ, ನೀವು 'ಡಾಕ್ಟರ್'ರನ್ನು ಕರೆಸಿ, ಎಲ್ಲಾ ಬಗೆಯ ಔಷಧಿಗಳನ್ನು ಮಾಡಿಯು ಕೂಡಾ ಅವರು ಹೋಗಿಬಿಟ್ಟಾಗ, ಜೊತೆಯಲ್ಲಿ ಉಳಿದುಕೊಳ್ಳಲು ಮತ್ತು ಆಶ್ವಾಸನೆ ಕೊಡಲು ನೆಂಟರು ಬರುತ್ತಾರೆ. ಆಮೇಲೆ ಕೇಳುತ್ತಾರೆ, 'ಏನಾಗಿತ್ತು ಚಿಕ್ಕಪ್ಪನಿಗೆ?' ಆಗ ನೀವು ಹೇಳಲು ಪ್ರಾರಂಭಿಸುತ್ತೀರಿ, 'ಮೊದಲು ಮಲೇರಿಯ ಜ್ವರವೆಂದು ತಿಳಿದಿದ್ದೆವು; ಆದರೆ, ಡಾಕ್ಟರ್ ಹೇಳಿದರು, ಅದೇನಿಲ್ಲ ಸ್ವಲ್ಪ ಫ್ಲೂ ತರಹದ ಜ್ವರ!' ಎಂದು. ಅಲ್ಲಿ ಬಂದವರು ಮತ್ತೆ ಕೇಳುತ್ತಾರೆ, 'ಯಾವ 'ಡಾಕ್ಟರ್'ರನ್ನು ಕರೆಸಲಾಗಿತ್ತು?' ಆಗ ನೀವು ಯಾರೋ ನಿಮ್ಮ 'ಡಾಕ್ಟರ್'ನ ಹೆಸರು ಹೇಳುತ್ತೀರಿ. ಅದಕ್ಕೆ ಅವರು ನಿಮಗೆ ಜೋರುಮಾಡುತ್ತಾರೆ, 'ನೀವು ಮತ್ತೊಬ್ಬರನ್ನು ಕರೆಸಬೇಕಿತ್ತು.' ಆಗ ಇನ್ನೊಬ್ಬರು ಬಂದು ನಿಮಗೆ ಗದರುತ್ತಾರೆ, 'ನೀವು ಹಾಗೆ ಮಾಡಬೇಕಿತ್ತು! ಏನು ತಲೆಯಿಲ್ಲದಂತೆ ಮಾತಾಡುತ್ತೀರಿ?' ಎಂದು. ಹೀಗೆ ಇಡೀ ದಿನ ಬಂದ ಜನರೆಲ್ಲಾ ಗೊಂದಲದ ಮೇಲೆ ಗೊಂದಲ ಉಂಟುಮಾಡುತ್ತಾರೆ! ಅದಲ್ಲದೆ, ಆ ಜನರು ನಿಮ್ಮ ತಲೆಯ ಮೇಲೆ ಕೂರುತ್ತಾರೆ; ನಿಮ್ಮ ಸರಳತೆಯ ಲಾಭವನ್ನು ಉಪಯೋಗಿಸಿಕೊಳ್ಳುತ್ತಾರೆ. ಆದುದರಿಂದ, ನಾನು ನಿಮಗೆ ತಿಳುವಳಿಕೆ ಕೊಡುವುದೇನೆಂದರೆ, ಈ ಜನರು ನಿಮ್ಮನ್ನು ವಿಚಾರಿಸಲು ಬಂದಾಗ, ನೀವು ಏನು ಹೇಳಬೇಕೆಂದರೆ, 'ಚಿಕ್ಕಪ್ಪನಿಗೆ ಸ್ವಲ್ಪ ಜ್ವರ ಬಂತು ಹಾಗೆಯೆ ಟಪ್ ಆಗಿಬಿಟ್ಟರು, ಮತ್ತೇನು ಆಗಿರಲಿಲ್ಲ.' ಅವರುಗಳು ಕೇಳಿದಕ್ಕೆ ಹೀಗೆ ಉತ್ತರ ಕೊಟ್ಟುಬಿಡಿ. ನೀವು ತಿಳಿದಿರಬೇಕೇನೆಂದರೆ, ವಿವರವಾಗಿ ಹೇಳಲು ಹೋದರೆ ನಿರಾಶೆಗೆ ಒಳಪಡಬೇಕಾಗುತ್ತದೆ, ಅದಕ್ಕಿಂತ ರಾತ್ರಿ ಜ್ವರ ಬಂತು ಹಾಗು ಬೆಳಿಗ್ಗೆ ಟಪ್ ಆಗಿಬಿಟ್ಟರು ಎಂದು ಹೇಳಿಬಿಡಿ. ಆಮೇಲೆ ನೀವು ಹತಾಶೆಗೆ ಒಳಪಡಬೇಕಾಗಿಯೇ ಇಲ್ಲವಲ್ಲ!

## ಸಜ್ಜನರ, ಅಂತಿಮ ಸಮಯದ ಸಂರಕ್ಷಣೆ !

**ಪ್ರಶ್ನಕರ್ತ:** ಯಾರಾದರು ಸಜ್ಜನರ ಅಂತಿಮಕಾಲ ಸಮೀಪವಾಗಿದ್ದು, ಆಗ ಅವರ ಅಕ್ಕಪಕ್ಕ ಇರುವ ಬಂಧು-ಬಳಗದವರ ವರ್ತನೆ ಹೇಗಿರಬೇಕು?

**ದಾದಾಶ್ರೀ:** ಯಾರ ಅಂತಿಮ ಸಮಯ ಹತ್ತಿರವಾಗುತ್ತಿದೆಯೋ, ಅಂಥವರನ್ನು ಹೆಚ್ಚಿನ ಮುತುವರ್ಜಿಯಿಂದ ನೋಡಿಕೊಳ್ಳಬೇಕು. ಅವರ ಪ್ರತಿಯೊಂದು ಮಾತುಗಳನ್ನು ಪಾಲಿಸಬೇಕು. ಅವರು ಒಂಟಿಯಾಗಿ ಮರಣಹೊಂದದ ಹಾಗೆ ನೋಡಿಕೊಳ್ಳಬೇಕು. ಎಲ್ಲರೂ ಅವರನ್ನು ಖುಷಿಯಲ್ಲಿ ಇಡಬೇಕು ಹಾಗೂ ಅವರು ಒರಟಾಗಿ ಮಾತನಾಡಿದರೂ ಸಹ ನೀವು ಒಪ್ಪಿಕೊಂಡು ಹೇಳಬೇಕು, 'ನಿಮ್ಮದೇ ಸರಿ!' ಎಂದು. ಅವರು ಹಾಲು ಕೇಳಿದರೆ ತಕ್ಷಣ ಹಾಲು ತಂದುಕೊಡಬೇಕು. ಆಗ ಅವರು 'ಇದು ನೀರು-ನೀರಾಗಿದೆ ಬೇರೆ ಹಾಲು ತಂದುಕೊಡು!' ಎಂದರೆ, ಕೂಡಲೇ ಬೇರೆ ಬಿಸಿ ಹಾಲು ತಂದುಕೊಟ್ಟು ಅವರಿಗೆ ಹೇಳಬೇಕು, 'ಇದು ಚೆನ್ನಾಗಿದೆ-ಗಟ್ಟಿಯಿದೆ!' ಎಂದು. ಹೀಗೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ನೋಡಿಕೊಳ್ಳಬೇಕು, ಅವರಿಗೆ ಇಷ್ಟವಾಗುವಂತೆ ಮಾತನಾಡಬೇಕು.

**ಪ್ರಶ್ನಕರ್ತ:** ಅಂದರೆ, ಅವರ ಸರಿ-ತಪ್ಪುಗಳ ಬಗ್ಗೆ ವಿಮರ್ಶೆ ಮಾಡಲು ಹೋಗಬಾರದು ಅಲ್ಲವೇ?

**ದಾದಾಶ್ರೀ:** ಈ ಸರಿ-ತಪ್ಪು ಅನ್ನುವುದು ಜಗತ್ತಿನಲ್ಲಿ ಇಲ್ಲವೇ ಇಲ್ಲ. ಯಾರಿಗೆ ಏನು ಇಷ್ಟವಾಗುತ್ತದೆ, ಅದನ್ನು ಅವರ ರೀತಿಯಲ್ಲಿ ಮಾಡುತ್ತಾ ಹೋಗುತ್ತಾರೆ. ಹಾಗಾಗಿ ಅಲ್ಲಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ನಡೆದುಕೊಂಡು ಬಿಡಬೇಕು. ಈ ಚಿಕ್ಕ ಮಕ್ಕಳೊಂದಿಗೆ ನಾವು ಯಾವ ರೀತಿಯಲ್ಲಿ ವರ್ತಿಸುತ್ತೇವೆ? ಚಿಕ್ಕ ಮಗು ಗಾಜಿನ ಲೋಟ ಒಡೆದು ಹಾಕಿದಾಗ ನಾವು ಮಗುವನ್ನು ಬೈಯುತ್ತೇವೆಯೇ? ಎರಡು ವರ್ಷದ ಮಗು, ಏನು ಹೇಳುವುದು, ಯಾಕೆ ಒಡೆದು ಹಾಕಿದೆ ಎಂದು ಕೇಳಲಾಗುತ್ತದೆಯೇ? ಹೇಗೆ ಮಗುವಿನ ಜೊತೆ ವರ್ತಿಸುತ್ತೇವೆ ಹಾಗೆ ಇವರೊಂದಿಗೆಯು ವರ್ತಿಸಬೇಕಾಗುತ್ತದೆ.

## ಅಂತಿಮ ಕಾಲದಲ್ಲಿ ಧರ್ಮಧ್ಯಾನ!

**ಪ್ರಶ್ನಕರ್ತ:** ಈ ಕೊನೆ ಘಳಿಗೆಯಲ್ಲಿ ಲಾಮಾಗಳು ಕೆಲವೊಂದು ಕ್ರಿಯೆಗಳನ್ನು ಮಾಡಿಸುತ್ತಾರೆ. ಯಾರು ಮರಣದ ಹಾಸಿಗೆಯನ್ನು ಹಿಡಿದಿರುವ ಮನುಷ್ಯರಿರುತ್ತಾರೆ, ಅಂಥವರಿಗೆ ಆ ಸಮಯದಲ್ಲಿ ಟಿಬೆಟಿಯನ್ ಲಾಮಾರಲ್ಲಿ ಹೀಗೊಂದು ವಾಡಿಕೆ ಇದೆ. ಅದೇನೆಂದರೆ, ಲಾಮಾರು ಮರಣಾವಸ್ಥೆಯಲ್ಲಿರುವ ಮನುಷ್ಯನ ಆತ್ಮಕ್ಕೆ ಹೇಳುತ್ತಾರೆ ಈ ರೀತಿಯಲ್ಲಿ ನೀನು ಹೋಗಬೇಕು

ಎಂದು. ಹಾಗೂ ನಮ್ಮಲ್ಲಿಯೂ ಕೂಡ ಗೀತೆಯ ಪಠಣ ಮಾಡಿಸುತ್ತಾರೆ, ಅಥವಾ ಯಾವುದಾದರು ಒಳ್ಳೆಯ ವಿಚಾರಗಳನ್ನು ಆಲಿಸುವಂತೆ ಮಾಡುತ್ತಾರೆ, ಇವೆಲ್ಲವುಗಳಿಂದ ಕೊನೆ ಘಳಿಗೆಯಲ್ಲಿ ಅವರಿಗೆ ಏನಾದರೂ ಪರಿಣಾಮ ಬೀರುವುದು ನಿಜವೇ?

**ದಾದಾಶ್ರೀ:** ಏನೂ ಬದಲಾವಣೆ ಆಗುವುದಿಲ್ಲ. ನೀವು ವ್ಯವಹಾರದಲ್ಲಿ ಹನ್ನೆರಡು ತಿಂಗಳಿನವರೆಗೂ ಲೆಕ್ಕ ಪುಸ್ತಕ ಬರೆದು ಮತ್ತೆ ಕೇವಲ ಧನ್ತೇರಸ್ (ದೀಪಾವಳಿಯ ಹದಿಮೂರನೆಯ) ದಿನದ ಲಾಭ-ನಷ್ಟವನ್ನು ಲೆಕ್ಕ ಮಾಡಿದರೆ ನಡೆಯುವುದೇ?

**ಪ್ರಶ್ನಕರ್ತ:** ಇಲ್ಲ ಹಾಗೆ ಮಾಡಲಾಗುವುದಿಲ್ಲ.

**ದಾದಾಶ್ರೀ:** ಯಾಕೆ ಹಾಗೆ ಆಗುವುದಿಲ್ಲ?

**ಪ್ರಶ್ನಕರ್ತ:** ಅದರಲ್ಲಿ ಇಡೀ ವರ್ಷದ್ದೆಲ್ಲಾ ಬರುತ್ತದೆಯಲ್ಲವೇ!

**ದಾದಾಶ್ರೀ:** ಹಾಗೆಯೇ ಇಲ್ಲಿಯೂ ಮೊದಲಿನಿಂದ ಇಡೀ ಜೀವನದ ಸರಾಸರಿ (ಬ್ಯಾಲೆನ್ಸ್ ಶೀಟ್) ಬರುತ್ತದೆ. ಕೊನೆಗಳಿಗೆಯ ಸುಧಾರಣೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎಂದೆಲ್ಲಾ ತಿಳಿದು ಜನರು ಮೋಸ ಹೋಗುತ್ತಿದ್ದಾರೆ, ಮತ್ತು ಜನರನ್ನು ಮೂರ್ಖರನ್ನಾಗಿ ಮಾಡಲಾಗುತ್ತಿದೆ.

**ಪ್ರಶ್ನಕರ್ತ:** ದಾದಾ, ಅಂತಿಮ ಗಳಿಗೆಯಲ್ಲಿ ಎಚ್ಚರದ ಅವಸ್ಥೆಯಲ್ಲಿದ್ದರೆ ಅಂಥವರಿಗೆ, ಆ ಸಮಯದಲ್ಲಿ ಭಗವತ್-ಗೀತೆಯನ್ನು ಕೇಳುವಂತೆ ಅಥವಾ ಬೇರೆ ಯಾವುದಾದರೂ ಶಾಸ್ತ್ರವನ್ನು ಆಲಿಸುವಂತೆ, ಅವರ ಕಿವಿಯಲ್ಲಿ ಏನಾದರು ಹೇಳಬಹುದೇ?

**ದಾದಾಶ್ರೀ:** ಅವರಾಗಿಯೇ ಕೇಳಿದರೆ, ಅದರ ಇಚ್ಛೆ ಅವರಿಗಿದ್ದರೆ, ಆಗ ಆಲಿಸುವಂತೆ ಮಾಡಬಹುದು.

## ಮರ್ಸಿ ಕಿಲ್ಲಿಂಗ್ !

**ಪ್ರಶ್ನಕರ್ತ:** ಹೆಚ್ಚು ವೇದನೆಯಿಂದ ನರಳುತ್ತಿರುವವರನ್ನು ಹಾಗೆಯೇ ನರಳುವಂತೆ ಬಿಡುವ ಬದಲಿಗೆ ಮರಣ ಹೊಂದುವಂತೆ ಮಾಡಿದರೆ, ಮತ್ತೆ ಮುಂದಿನ ಜನ್ಮದಲ್ಲಿ ಆ ನರಳುವಿಕೆಯನ್ನು ಅನುಭವಿಸುವುದು ಬಾಕಿ ಉಳಿದಿರುತ್ತದೆ ಎಂದು ಹೇಳುವ ಮಾತು ಸರಿಯೆಂದು ಅನ್ನಿಸುವುದಿಲ್ಲ. ಸಹಿಸಲಾಗದೆ ಬಳಲುತ್ತಿರುವವರಿಗೆ ಅದರಿಂದ ಬಿಡುಗಡೆ ತರುವುದೇ ಯೋಗ್ಯವಲ್ಲವೇ, ಇದರಲ್ಲಿ ತಪ್ಪೇನಿದೆ?

**ದಾದಾಶ್ರೀ:** ಯಾರಿಗೂ ಆ ಅಧಿಕಾರವೇ ಇಲ್ಲ. ನಮಗೆ ಔಷಧಿ ನೀಡುವ ಅಧಿಕಾರವಿದೆ, ಸೇವೆಮಾಡುವ ಅಧಿಕಾರವಿದೆ. ಆದರೆ ಯಾರನ್ನೂ ಸಾಯಿಸುವ ಅಧಿಕಾರವು ಇಲ್ಲವೇ ಇಲ್ಲ.

**ಪ್ರಶ್ನಕರ್ತ:** ಅದರಲ್ಲಿ ತಪ್ಪೇನಿದೆ?

**ದಾದಾಶ್ರೀ:** ಹಾಗಾದರೆ ಸಾಯಿಸುವುದರಿಂದ ಒಳಿತೇನಿದೆ? ನರಳುತ್ತಿರುವವರನ್ನು ಕೊಂದುಹಾಕಿದರೆ, ಆಗ ನಿಮ್ಮಲ್ಲಿ ಮನುಷ್ಯತ್ವವೇ ಇಲ್ಲದಂತೆ ಹಾಗೂ ಇದು ಮಾನವೀಯ ಸಿದ್ಧಾಂತದ ಹೊರತಾಗಿದೆ, ಮಾನವೀಯತೆಗೆ ವಿರುದ್ಧವಾಗಿದೆ.

## ಸಹಕಾರ, ಸ್ಮಶಾನದ ತನಕವಷ್ಟೇ!

ಈ ತಲೆದಿಂಬು ಇರುತ್ತದೆಯಲ್ಲ, ಅದರ ಹೊರಗಿನ ಚೀಲವನ್ನು ಬದಲಾಯಿಸುತ್ತಿರುತ್ತೇವೆ. ಆದರೆ ತಲೆದಿಂಬು ಮಾತ್ರ ಅದೇ ಇರುತ್ತದೆ. ಆ ಚೀಲ ಹರಿದುಹೋದರೆ ಬದಲಿಸುತ್ತೇವೆ. ಹಾಗೆಯೇ, ಈ ಚೀಲ(ದೇಹ)ವು ಕೂಡ ಬದಲಾಯಿಸುತ್ತಿರಬೇಕಾಗುತ್ತದೆ. ಅದುಬಿಟ್ಟರೆ, ಈ ಜಗತ್ತೆಲ್ಲಾ ಬರಿ ಪೊಳ್ಳು, ಆದರೂ ವ್ಯವಹಾರದಲ್ಲಿ ಹೀಗೆಂದು ಯಾರಲ್ಲಿಯೂ ಹೇಳಬಾರದು. ಹಾಗೆ ಹೇಳಿದರೆ ಅವರ ಮನಸ್ಸಿಗೆ ದುಃಖವಾಗುತ್ತದೆ. ಮನೆಯವರೆಲ್ಲಾ ಸ್ಮಶಾನದವರೆಗೆ ಹೋಗುತ್ತಾರೆ ಹೊರತು ಯಾರೂ ಚಿತೆಯಲ್ಲಿ ಬೀಳುವುದಿಲ್ಲ. ಅಲ್ಲಿಂದೆಲ್ಲರೂ ಹಿಂದಿರುಗಿ ಬರುತ್ತಾರೆ. ಇವೆಲ್ಲಾ ಡಂಬಾಚಾರವಾಗಿದೆ. ಅಲ್ಲಿ ಅವನ ಅಮ್ಮನೇ ಆಗಿದ್ದರೂ ಸಹ ರೋಧಿಸುತ್ತಾ ರೋಧಿಸುತ್ತಾ ಮನೆಗೆ ಹಿಂದಿರುಗಿ ಬರುತ್ತಾಳೆ.

**ಪ್ರಶ್ನಕರ್ತ:** ಆಮೇಲೆ ಅವರ ಹೆಸರಿನಲ್ಲಿ ಏನೂ ಇಟ್ಟಿರದೆ ಹೋದರೆ, ಆಗ ಅವರ ಮಾತೇ ಬೇರೆ. ಆದರೆ, ಎರಡು ಲಕ್ಷ ರೂಪಾಯಿ ಇಟ್ಟುಹೋಗಿದ್ದರೆ ಏನೂ ಮಾತನಾಡುವುದಿಲ್ಲ.

**ದಾದಾಶ್ರೀ:** ಹೌದು, ಅದು ಹಾಗೆಯೇ. ಅವನು ಏನೂ ಇಡದೆ ಹೋದರೆ ಅದಕ್ಕೆ ರೋಧಿಸುತ್ತಾರೆ ಏನೆಂದರೆ, 'ಅವನು ತೀರಿಕೊಂಡಿದ್ದಲ್ಲದೆ, ಹೊಡೆತವನ್ನು ಕೊಟ್ಟುಹೋದ' ಎಂದುಕೊಂಡು, ಹಾಗೆಲ್ಲಾ ಒಳಗೊಳಗೆಯೇ ಹೇಳಿಕೊಳ್ಳುತ್ತಾರೆ! 'ಏನೂ ಸಿಗಲಿಲ್ಲ ಮತ್ತು ನಮಗೆ ಹೊಡೆವನ್ನೂ ಕೊಟ್ಟುಹೋದ!' ಎಂದು. ಇಲ್ಲಿ ಹೋದವನು ಏನೂ ಇಟ್ಟುಹೋಗಿಲ್ಲ ಅಂದರೆ, ಅದು ಅವನ ಹಣೆಬರಹದಲ್ಲಿ ಇರಲಿಲ್ಲ ಹಾಗಾಗಿ ಬಿಟ್ಟುಹೋಗಿಲ್ಲ. ಆದರೆ, ಅವನು ದೂಷಣೆಗಳಿಗೆ ಒಳಗಾಗಬೇಕೆಂದು ಬರೆದಿದ್ದರೆ, ಹೋದ ಮೇಲೂ ಬಿಡುವುದಿಲ್ಲ!

ನಮ್ಮ ಜನರು ಸ್ಮಶಾನಕ್ಕೆ ಹೋದವರು, ಎಲ್ಲರೂ ವಾಪಸು ಬರುತ್ತಾರೋ ಇಲ್ಲವೋ? ಇದು ಒಂದು ರೀತಿಯಲ್ಲಿ ನಾಚಿಕೆಗೇಡು! ಅಲ್ಲಿ ವ್ಯಥೆ ಪಡದೆಯಿದ್ದರೂ ಶೋಕವೇ, ಅತ್ತರೂ

ಶೋಕವೇ. ಆದರೆ, ತುಂಬಾ ಅಳುತ್ತಿದ್ದರೆ ಜನರು ಹೇಳುತ್ತಾರೆ, 'ಯಾರು ಪ್ರಪಂಚದಲ್ಲಿ ಸಾಯುವುದೇ ಇಲ್ಲವೇ, ಆ ರೀತಿಯಲ್ಲಿ ರೋಧಿಸುತ್ತಿದ್ದೀರಿ?' ಎಂದು. ಎಂತಹ ತಲೆತಿರುಗಿದ ಜನರೋ ಏನೋ? ರೋಧಿಸದೆ ಇದ್ದರೆ ಹೇಳುತ್ತಾರೆ, 'ನೀವು ಕಲ್ಲಿನಂಥವರು, ನಿಮ್ಮಗೆ ಹೃದಯವೇ ಇಲ್ಲ!' ಎಂದು. ಹೀಗೆ ಯಾವ ರೀತಿಯಲ್ಲಿ ನಡೆದುಕೊಂಡರೂ ತಪ್ಪು! ಎಲ್ಲಾ ಕ್ರಮಗಳನ್ನು ಅನುಸರಿಸಬೇಕೆಂದು ಕೂಡಾ ಹೇಳುತ್ತಾರೆ.

ಮೊದಲು ಸ್ಮಶಾನದಲ್ಲಿ ಸುಡುತ್ತಾರೆ ನಂತರ 'ಹೋಟೆಲ್'ನಲ್ಲಿ ಕುಳಿತು ಚಹಾ-ತಿಂಡಿ ತಿನ್ನುತ್ತಾರೆ, ಹೀಗೆ ಮಾಡುತ್ತಾರಲ್ಲವೇ ಜನರು?

**ಪ್ರಶ್ನಕರ್ತ:** ತಿಂಡಿ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತಾರೆ!

**ದಾದಾಶ್ರೀ:** ಹಾಗೂ ಉಂಟಾ! ಏನು ಅಂತಹ ಮಾತು ಹೇಳುತ್ತಿರುವಿರಿ? ಹಾಗಾದರೆ, ಈ ಜಗತ್ತಿನಲ್ಲಿ ಹೀಗೂ ಇದೆಯೇ! ಇಂತಹ ಜಗತ್ತನ್ನು ಯಾವ ರೀತಿಯಲ್ಲಿ ಮೆಚ್ಚುವುದು?

'ಬನ್ನಿ-ಹೋಗಿ' ಎಂದೆಲ್ಲಾ ಹೇಳುತ್ತಾರೆ ನಿಜ, ಆದರೆ ಯಾರೂ ಯಾವುದನ್ನೂ ತಲೆಗೆ ತೆಗೆದುಕೊಳ್ಳುವುದಿಲ್ಲ, ಎಲ್ಲಾ ತೋರಿಕೆಯಾಗಿದೆ. ಈಗ ನೀವೇ ಹೇಳಿ, ಯಾವುದಾದರೂ ಜವಾಬುದಾರಿಯನ್ನು ನೀವು ತೆಗೆದುಕೊಳ್ಳುವಿರಾ? ಪತ್ನಿಯ ವಿಚಾರದಲ್ಲಾಗಲಿ ಅಥವಾ ಬೇರೆ ಯಾವುದೇ ವಿಚಾರದಲ್ಲಾಗಲಿ, ತಲೆಕೆಡಿಸಿ ಕೊಳ್ಳಲು ಹೋಗುವುದಿಲ್ಲ ಅಲ್ವಾ?

**ಪ್ರಶ್ನಕರ್ತ:** ಇಲ್ಲ.

**ದಾದಾಶ್ರೀ:** ಏನು ಹೇಳುತ್ತಿದ್ದೀರಿ? ಮನೆಯಲ್ಲಿ ಪತ್ನಿಯ ಜೊತೆಯಲ್ಲಿ ಕುಳಿತುಕೊಂಡು ಮಾತಾಡುತ್ತಾ ಹೇಳುತ್ತೀರಾ, 'ನೀನು ಇಲ್ಲದೆ ಹೋದರೆ ನನಗೆ ಇರಲು ಆಗುವುದಿಲ್ಲ,' ಹಾಗೂ ಸ್ಮಶಾನಕ್ಕೆ ಯಾರೂ ಜೊತೆಯಲ್ಲಿ ಬರುವುದಿಲ್ಲ, ಯಾರಾದರು ಬರುತ್ತಾರೆಯೇ?

## ಮೃತ್ಯು ಹೊಂದಿದ ಸಮಯದಲ್ಲಿ!

**ಪ್ರಶ್ನಕರ್ತ:** ಕುಟುಂಬದಲ್ಲಿ ಯಾರಾದರು ಮರಣ ಹೊಂದಿದಾಗ, ಆ ದಿನ ಕುಟುಂಬದ ಜನರು ಏನು ಮಾಡಬೇಕು?

**ದಾದಾಶ್ರೀ:** ಅವರಿಗೆ ಒಳ್ಳೆಯದಾಗಲಿ ಎಂದು ಭಗವಂತನ ಬಳಿ ಪ್ರಾರ್ಥನೆ ಮಾಡಬೇಕು.

# ನಂತರದ ವಾಸ್ತವ್ಯದ ಸುಳಿವೇ ಇಲ್ಲ!

**ಪ್ರಶ್ನಕರ್ತ:** ಯಾವ ವ್ಯಕ್ತಿ ನಿಧನ ಹೊಂದಿರುತ್ತಾರೆ, ಆ ವ್ಯಕ್ತಿ ಈಗ ಎಲ್ಲಿದ್ದಾರೆ ಎಂದು ನಾವು ತಿಳಿದುಕೊಳ್ಳಬೇಕಿದ್ದರೆ, ಅದನ್ನು ಯಾವ ರೀತಿಯಿಂದ ಅರಿಯ ಬಹುದಾಗಿದೆ?

**ದಾದಾಶ್ರೀ:** ಅದನ್ನು ವಿಶೇಷವಾದ ಜ್ಞಾನವಿಲ್ಲದೆ ನೋಡಲಾಗುವುದಿಲ್ಲ! ಅದಕ್ಕೆ ವಿಶೇಷವಾದ ಜ್ಞಾನವು ಬೇಕಾಗುತ್ತದೆ. ಅಲ್ಲದೆ ಅದನ್ನು ತಿಳಿಯುವುದರಿಂದ ಏನೂ ಪ್ರಯೋಜನವಿಲ್ಲ. ಅದರ ಬದಲಿಗೆ ನಾವು ಒಳ್ಳೆಯ ಭಾವನೆಯನ್ನು ಮಾಡಿದರೆ ಆಗ ಆ ಭಾವನೆಯು ತಲುಪುತ್ತದೆ. ನಾವು ಅವರನ್ನು ನೆನಪಿಸಿಕೊಂಡರೆ, ಒಳ್ಳೆಯ ಭಾವನೆಯನ್ನು ಮಾಡಿದರೆ, ಅದು ತಲುಪುತ್ತದೆ. ಇವೆಲ್ಲವನ್ನೂ ಜ್ಞಾನದಿಂದಲ್ಲದೆ ಬೇರೆ ಯಾವ ರೀತಿಯಿಂದಲೂ ತಿಳಿಯಲಾಗುವುದಿಲ್ಲ!

ಈಗ ನೀವು ಯಾವ ವ್ಯಕ್ತಿಯ ಹುಡುಕಾಟದಲ್ಲಿದ್ದೀರಿ? ಎಲ್ಲಿ ಹೋದರು ನಿಮ್ಮ ಜೊತೆಯಲ್ಲಿದ್ದವರು ಎಂದೇ?

**ಪ್ರಶ್ನಕರ್ತ:** ಹೌದು, ನನ್ನ ಸ್ವಂತ ಅಣ್ಣ ಮೃತ್ಯು ಹೊಂದಿಬಿಟ್ಟಿದ್ದಾರೆ.

**ದಾದಾಶ್ರೀ:** ನಿಮ್ಮನ್ನು ಅವರು ನೆನಪಿಸಿಕೊಳ್ಳುವುದಿಲ್ಲ ಆದರೆ ನೀವು ನೆನಪುಮಾಡುತಲಿದ್ದೀರಿ ಅಲ್ಲವೇ? ಅವರು ಮೃತ್ಯು ಹೊಂದಿದ್ದಾರೆ ಎಂದ ಮೇಲೆ, ಆಗ ಏನೆಂದು ತಿಳಿಯಬೇಕು? ಪುಸ್ತಕದ ಲೆಕ್ಕಾಚಾರ ಮುಗಿಯಿತು ಎಂದು. ಆದ್ದರಿಂದ ಆಗ ನಾವು ಏನು ಮಾಡಬೇಕು, ನಮಗೆ ತುಂಬಾ ನೆನಪಿಗೆ ಬರುತ್ತಿದ್ದರೆ, ವಿತರಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡಬೇಕು 'ಅವರಿಗೆ ಶಾಂತಿಯನ್ನು ನೀಡಿ' ಎಂದು. ನೆನಪು ಬಂದಾಗಲೆಲ್ಲಾ ಅವರಿಗೆ ಶಾಂತಿಯು ಸಿಗಲಿ ಎಂದು ಪ್ರಾರ್ಥಿಸಬೇಕು. ಅದಲ್ಲದೆ ನಮ್ಮಿಂದ ಇನ್ನೇನು ಮಾಡಲಾಗುತ್ತದೆ?

# ಅಲ್ಲಾಕಿ ಅಮಾನತ್ (ಭಗವಂತನ ಸ್ವತ್ತು)!

ನಿಮಗೆ ಏನಾದರು ಕೇಳಬೇಕೆಂದಿದ್ದರೆ ಅದನ್ನು ಕೇಳಿ. ಅಲ್ಲಾನ (ಭಗವಂತನ) ಬಳಿಗೆ ಹೋಗುವುದಕ್ಕೆ ಏನೆಲ್ಲಾ ಅಡಚಣೆಗಳು ಬರುತ್ತವೆ ಅದರ ಬಗ್ಗೆ ನಮ್ಮನ್ನು ಕೇಳಿ, ಸಂಶಯಗಳು ಏನೇ ಇದ್ದರು ನಾವು ಅದನ್ನು ಹೋಗಲಾಡಿಸುತ್ತೇವೆ.

**ಪ್ರಶ್ನಕರ್ತ:** ನನ್ನ ಮಗ ಅಕಸ್ಮಾತಾಗಿ ಮರಣ ಹೊಂದಿದ್ದಾನೆ, ಈ ಅನಿರೀಕ್ಷಿತದ ಕಾರಣವಾದರೂ ಏನು?

**ದಾದಾಶ್ರೀ:** ಈ ಜಗತ್ತಿನಲ್ಲಿ ಯಾವುದೆಲ್ಲಾ ಕಣ್ಣಿನಿಂದ ನೋಡಲು ಸಿಗುತ್ತದೆ, ಕಿವಿಯಿಂದ ಕೇಳಲಾಗುತ್ತದೆ, ಇವೆಲ್ಲಾ 'ರಿಲೇಟಿವ್ ಕರೆಕ್ಟ್' ಆಗಿವೆ, ಅವುಗಳು ಪೂರ್ಣವಾಗಿ ನಿಜವಾದ ವಿಚಾರಗಳಲ್ಲ! ಈ ದೇಹವೇ ನಮ್ಮದಲ್ಲ, ಹಾಗಿರುವಾಗ ಮಗ ಹೇಗೆ ನಮ್ಮವನಾಗುತ್ತಾನೆ? ಇದೆಲ್ಲಾ ವ್ಯವಹಾರವಾಗಿದೆ, ಲೋಕದ ವ್ಯವಹಾರದಿಂದಾಗಿ ನಮ್ಮ ಮಗ ಎಂದು ಹೇಳುತ್ತೇವೆ, ನಿಜವಾಗಿಯೂ ಅವನು ನಮ್ಮ ಮಗ ಅಲ್ಲವೇ ಅಲ್ಲ. ಈ ದೇಹವೇ ನಿಜವಾಗಿ ನಮ್ಮದಲ್ಲ. ಅದೇನೆಂದರೆ, ಯಾರು ನಮ್ಮ ಬಳಿ ಇರುತ್ತಾರೆ, ಅವರು ನಮ್ಮವರು ಮತ್ತು ಉಳಿದವರೆಲ್ಲ ಹೊರಗಿನವರಾಗಿಬಿಡುತ್ತಾರೆ! ಹಾಗಾಗಿ ಮಗನನ್ನು ನನ್ನವನೆಂದು ಅಂದುಕೊಂಡು ಊಹಿಸಿಕೊಂಡಿದ್ದರಿಂದ ಉಪಾಧಿಯಾಗಿದೆ ಹಾಗು ಅಶಾಂತಿಯನ್ನು ಹೊಂದಲಾಗಿದೆ! ಆ ನಿಮ್ಮ ಮಗ ಹೊರಟುಹೋದ, ಅದು ಭಗವಂತನ ಇಚ್ಛೆಯಾಗಿರಬಹುದು, ಆದುದರಿಂದ ಈಗ ಅದನ್ನು 'ಲೆಟ್ ಗೋ' ಮಾಡಿಬಿಡಬೇಕು.

**ಪ್ರಶ್ನಕರ್ತ:** ಅದು ಸರಿಯೇ, ಅಲ್ಲಾನ ಅಮಾನತ್ತು (ಭಗವಂತನ ಸ್ವತ್ತು) ನಮ್ಮ ಬಳಿ ಇತ್ತು ಅದನ್ನು ಈಗ ತೆಗೆದುಕೊಂಡ!

**ದಾದಾಶ್ರೀ:** ಹೌದು, ಅಷ್ಟೇ. ಈ ಎಲ್ಲಾ ಸ್ವತ್ತು ಅಲ್ಲಾನದ್ದೇ (ಭಗವಂತನದ್ದೇ) ಆಗಿದೆ.

**ಪ್ರಶ್ನಕರ್ತ:** ಆ ರೀತಿಯಲ್ಲಿ ಮೃತ್ಯು ಹೊಂದಬೇಕಿದ್ದರೆ, ಅದು ನಮ್ಮ ಕುಕರ್ಮವಾಗಿದೆಯೇ?

**ದಾದಾಶ್ರೀ:** ಹೌದು, ಆ ಹುಡುಗನ ಕುಕರ್ಮ ಹಾಗೂ ನಿಮ್ಮದೂ ಸಹ ಕೆಟ್ಟ ಕರ್ಮವಾಗಿದೆ, ಒಳ್ಳೆಯ ಕರ್ಮವಾಗಿದಿದ್ದರೆ, ಅದರ ಬದಲಿಗೆ ಒಳ್ಳೆಯದ್ದೇ ದೊರಕುತ್ತಿತ್ತು.

## ತಲುಪುವುದು ಮಾತ್ರ ಭಾವನೆಯ ಸ್ಪಂದನ!

ಹುಡುಗನ ಮೃತ್ಯುವಿನ ಬಳಿಕ, ಮತ್ತೆ ಮತ್ತೆ ಅವನ ಬಗ್ಗೆ ಚಿಂತೆ ಮಾಡುತಲಿದ್ದರೆ ಅವನಿಗೆ ದುಃಖ ಉಂಟಾಗುತ್ತದೆ. ನಮ್ಮ ಜನರು ಅಜ್ಞಾನದಿಂದಾಗಿ ಹೀಗೆಲ್ಲಾ ಚಿಂತೆ ಮಾಡುತ್ತಾರೆ. ಆದುದರಿಂದ, ಅದನ್ನು ನೀವು ಹೇಗಿದೆಯೋ ಹಾಗೆ ತಿಳಿದುಕೊಂಡು ಶಾಂತಿಪೂರ್ವಕವಾಗಿ ಇರುವುದನ್ನು ಕಲಿಯಬೇಕು. ಸುಮ್ಮನೆ ತಲೆಕೆಡಿಸಿಕೊಳ್ಳುವುದರ ಅರ್ಥವಾದರೂ ಏನಿದೆ ಇಲ್ಲಿ? ಯಾರೂ ನಿಧನ ಹೊಂದದೆ ಇರಲು ಎಂದೂ ಸಾಧ್ಯವಿಲ್ಲ! ಇದು ಸಂಸಾರದ ಋಣಾನುಬಂಧವಾಗಿದೆ, ಕೊಟ್ಟು-ತೆಗೆದುಕೊಳ್ಳುವ ಲೆಕ್ಕಾಚಾರವಾಗಿದೆ. ನಮಗೂ ಮಗ-ಮಗಳು ಇದ್ದರು, ಆದರೆ ಅವರೂ ತೀರಿಕೊಂಡರು; ನೆಂಟರು ಬಂದಿದ್ದರು ಮತ್ತೆ ನೆಂಟರು ಮರಳಿ ಹೋದರು. ಅವರು ನಮ್ಮ ಸ್ವತ್ತು ಎಂದು ಹೇಳುವುದು ಹೇಗೆ? ನಾವು ಎಂದೂ

ಹೋಗುವುದೇ ಇಲ್ಲವೇ? ನಾವು ಕೂಡಾ ಅಲ್ಲಿಗೆಯೇ ಹೋಗಬೇಕಾಗಿರುವಾಗ, ಯಾಕಾಗಿ ಆತಂಕಕ್ಕೆ ಒಳಗಾಗುವುದು? ಈಗ ಇಲ್ಲಿ ನಿಮ್ಮನ್ನು ಆಶ್ರಯಿಸಿ ಜೀವಂತವಾಗಿ ಇರುವವರಿಗೆ ಶಾಂತಿಯನ್ನು ಕೊಡಿ. ಹೋದವರು ಹೋದರು, ಅವರನ್ನು ನೆನಪಿಸಿಕೊಳ್ಳುವುದನ್ನು ಬಿಟ್ಟುಬಿಡಿ. ಇಲ್ಲಿ ಯಾರೆಲ್ಲಾ ಆಶ್ರಿತರಾಗಿದ್ದಾರೆ ಅವರಿಗೆ ಶಾಂತಿಯನ್ನು ಕೊಡುವುದಷ್ಟೇ ನಮ್ಮ ಜವಾಬುದಾರಿಯಾಗಿದೆ. ಹೋದವರನ್ನು ನೆನಪಿಸಿಕೊಳ್ಳುತ್ತಾ ಮತ್ತು ಇಲ್ಲಿ ಇರುವವರಿಗೆ ಶಾಂತಿಯನ್ನು ಕೊಡದೆ ಹೋದರೆ, ಅದು ಹೇಗೆ ಸರಿ? ಇದರಿಂದಾಗಿ ಉಳಿದೆಲ್ಲಾ ಜವಾಬುದಾರಿಗಳನ್ನು ಮರೆತು ಬಿಡುತ್ತೀರಿ. ಅದು ನಿಮಗೆ ಅನ್ನಿಸುವುದಿಲ್ಲವೇ? ಹೋದವರು ಹೋದರು. ಜೇಬಿನಿಂದ ಲಕ್ಷ ರೂಪಾಯಿ ಬೀಳಿಸಿಕೊಂಡ ಬಳಿಕ ಅದು ಸಿಗದೇ ಹೋದರೆ ಆಗ ನಾವು ಏನು ಮಾಡಬೇಕು? ತಲೆ ಹೊಡೆದು ಕೊಳ್ಳುವುದೇ?

ಇದು ನಮ್ಮ ಕೈಯಲ್ಲಿನ ಆಟವಲ್ಲ, ಹಾಗೂ ಅವರಿಗೆ (ಮೃತರಿಗೆ) ಕೂಡಾ ಅಲ್ಲಿ ದುಃಖವಾಗುತ್ತದೆ. ನಾವು ಇಲ್ಲಿ ದುಃಖಿಸಿದರೆ ಅದರ ಪರಿಣಾಮವು ಅವರಿಗೆ ತಲುಪುತ್ತದೆ. ಅಲ್ಲಿ ಅವರಿಗೂ ಸುಖದಲ್ಲಿ ಇರಲು ಬಿಡುವುದಿಲ್ಲ, ಇಲ್ಲಿ ನಾವೂ ನೆಮ್ಮದಿಯಲ್ಲಿ ಇರುವುದಿಲ್ಲ. ಅದಕ್ಕಾಗಿಯೇ ಶಾಸ್ತ್ರಜ್ಞರು ಹೇಳಿದ್ದಾರೆ 'ಹೋದ ಬಳಿಕ ಉಪದ್ರ ಕೊಡಬೇಡ' ಎಂದು. ಹಾಗಾಗಿ ನಮ್ಮ ಜನರು ಏನು ಮಾಡುತ್ತಾರೆ, ಈ ಗರುಡ ಪುರಾಣದ ವಾಚನ, ಇನ್ನೊಂದರ ಪಠಣ, ಪೂಜೆ ಮಾಡಿಸುವುದು, ಹೀಗೆಲ್ಲಾ ಮಾಡಿ ಮನಸ್ಸಿನಿಂದ ಮರೆಯುವಂತೆ ಮಾಡುತ್ತಾರೆ. ನೀವು ಹೀಗೆ ಯಾವುದಾದರೂ ಪಠಣ ಮಾಡಿಸಿದ್ದು ಉಂಟಾ? ಆದರೂ ಮರೆಯಲಾಗಲಿಲ್ಲ ಅಲ್ಲವೇ?

**ಪ್ರಶ್ನಕರ್ತ:** ಆದರೂ ಮರೆಯಲಾಗುತ್ತಿಲ್ಲ. ತಂದೆ ಮತ್ತು ಮಗನ ವ್ಯವಹಾರ ಹೇಗಿತ್ತೆಂದರೆ, ಅದು ಎಲ್ಲಾ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಹಾಗಾಗಿ ಅದನ್ನು ಮರೆಯಲು ಸಾಧ್ಯವಾಗುತ್ತಿಲ್ಲ.

**ದಾದಾಶ್ರೀ:** ಹೌದು, ಮರೆಯಲು ಸಾಧ್ಯವಾಗುವುದಿಲ್ಲ, ಆದರೆ ನಾವು ಮರೆಯದೆ ಹೋದರೆ ಅದರಿಂದ ನಮಗೂ ದುಃಖವಾಗುತ್ತದೆ ಮತ್ತು ಅಲ್ಲಿ ಅವನಿಗೂ ದುಃಖವಾಗುತ್ತದೆ. ಹೀಗೆ ನಮ್ಮ ಮನಸ್ಸಿನಲ್ಲಿ ಅವನಿಗಾಗಿ ದುಃಖಿಸುವುದು, ಈಗ ತಂದೆಯಾಗಿ ನಮಗೆ ಕೆಲಸಕ್ಕೆ ಬರುವುದಿಲ್ಲ.

**ಪ್ರಶ್ನಕರ್ತ:** ಅವನಿಗೆ ಅಲ್ಲಿ ಯಾವ ರೀತಿಯಲ್ಲಿ ದುಃಖ ಉಂಟಾಗುತ್ತದೆ?

**ದಾದಾಶ್ರೀ:** ನಾವು ಇಲ್ಲಿ ದುಃಖಿಸಿದರೆ ಅದರ ಪರಿಣಾಮವು ಅವನಿಗೆ ತಲುಪದೇ ಇರುವುದಿಲ್ಲ. ಜಗತ್ತಿನಲ್ಲಿ ಎಲ್ಲಾವು ಈ ಫೋನಿನ ಹಾಗೆ, ಟೆಲಿವಿಷನ್ ಹಾಗೆ! ನಾವು ಇಲ್ಲಿ ಕೊರಗುವುದರಿಂದ ಅವನು ವಾಪಸು ಬರುತ್ತಾನೆಯೇ?

**ಪ್ರಶ್ನಕರ್ತ:** ಇಲ್ಲ.

**ದಾದಾಶ್ರೀ:** ಯಾಕೆ, ಬರಲು ಯಾವ ದಾರಿಯು ಇಲ್ಲವೇ?

**ಪ್ರಶ್ನಕರ್ತ:** ಇಲ್ಲ.

**ದಾದಾಶ್ರೀ:** ಹಾಗಿದ್ದ ಮೇಲೆ, ಇಲ್ಲಿ ಕೊರಗುತ್ತಿದ್ದರೆ, ಅದು ಅವನಿಗೆ ತಲುಪುತ್ತದೆ ಮತ್ತು ಅವನ ಹೆಸರಿನಲ್ಲಿ ನಾವು ಧರ್ಮವನ್ನೋ-ಭಕ್ತಿಯನ್ನೋ ಮಾಡಿದಾಗ, ನಮ್ಮ ಭಾವನೆಗಳು ಅವನಿಗೆ ತಲುಪುತ್ತದೆ ಮತ್ತು ಅದರಿಂದ ಅವನಿಗೆ ಶಾಂತಿಯು ಸಿಗುತ್ತದೆ. ಅವನಿಗೆ ಶಾಂತಿ ಸಿಗುವ ವಿಚಾರವು ನಿಮಗೆ ಹೇಗೆ ಅನ್ನಿಸುತ್ತದೆ? ಅಲ್ಲದೆ ಅವನಿಗೆ ಶಾಂತಿಯನ್ನು ಸಿಗುವಂತೆ ಮಾಡುವುದು ನಿಮ್ಮ ಜವಾಬುದಾರಿ ಅಲ್ಲವೇ? ಹಾಗಾಗಿ ಅಂಥದ್ದೇನಾದರೂ ಮಾಡಿ, ಅದರಿಂದ ಅವನಿಗೂ ನೆಮ್ಮದಿ ದೊರಕಲಿ. ಶಾಲೆಯ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚುವುದು ಅಥವಾ ಬೇರೇನಾದರೂ ಮಾಡಿ.

ಯಾವಾಗ ನಿಮ್ಮ ಮಗನ ನೆನಪಾಗುವುದೋ, ಆಗ ಅವನ ಆತ್ಮದ ಕಲ್ಯಾಣವಾಗಲಿ ಎಂದು ಪ್ರಾರ್ಥನೆಯನ್ನು ಮಾಡಿ. 'ಕುಲದೇವರ' ಹೆಸರನ್ನು ಸ್ಮರಿಸಿ, 'ದಾದಾ ಭಗವಾನರಲ್ಲಿ' ಪ್ರಾರ್ಥಿಸಿಕೊಂಡರೂ ಕೆಲಸವಾಗುತ್ತದೆ. ಕಾರಣವೇನೆಂದರೆ 'ದಾದಾ ಭಗವಾನರು' ಮತ್ತು 'ಕುಲದೇವರು' ಆತ್ಮ ಸ್ವರೂಪದಿಂದ ಒಂದೇ ಆಗಿದ್ದಾರೆ! ದೇಹದಿಂದ ಬೇರೆ ಬೇರೆಯಾಗಿ ಕಾಣಿಸಬಹುದು, ನೋಡಲು ಬೇರೆಯಾಗಿ ಕಾಣಿಸಬಹುದು ಆದರೆ ವಸ್ತುವಿನ ರೀತಿಯಿಂದ ಒಂದೇ ಆಗಿದ್ದಾರೆ. ಆದುದರಿಂದ ಮಹಾವೀರ್ ಭಗವಾನರ ಹೆಸರನ್ನು ಹೇಳಿದರೂ ಕೂಡಾ ಒಂದೇ ಆಗಿದೆ. ಹಾಗಾಗಿ ಅವನ ಆತ್ಮದ ಕಲ್ಯಾಣವಾಗಲಿ ಎನ್ನುವುದೊಂದೇ ನಮ್ಮ ನಿರಂತರದ ಭಾವನೆಯಾಗಿರಬೇಕು. ಅವರು ಇರುವವರೆಗೂ ನಮ್ಮೊಂದಿಗೆ ಜೊತೆಯಲ್ಲಿ ನಿರಂತರ ಇರಲಾಗಿತ್ತು, ಜೊತೆಯಲ್ಲಿಯೇ ಊಟ-ತಿಂಡಿಯನ್ನು ಮಾಡಲಾಗಿತ್ತು, ಹಾಗಿರುವಾಗ ನಾವು ಅವರ ಕಲ್ಯಾಣವಾಗಲಿ ಎಂಬ ಭಾವನೆಯನ್ನು ಯಾಕೆ ಭಾವಿಸಬಾರದು? ನಾವು ಹೊರಗಿನವರಿಗೆ ಒಳ್ಳೆಯ ಭಾವನೆಯನ್ನು ಭಾವಿಸುವಾಗ, ಇಲ್ಲಿ ನಮ್ಮ ಸ್ವಂತದ ಮನೆಯ ವ್ಯಕ್ತಿಗಾಗಿ ಯಾಕೆ ಒಳ್ಳೆಯ ಭಾವನೆ ಮಾಡಬಾರದು?

# ರೋಧನೆಯು, ಸ್ವಾರ್ಥದ ಸಲುವಾಗಿಯೋ ಅಥವಾ ಹೋದವರ ಸಲುವಾಗಿಯೋ?

**ಪ್ರಶ್ನಕರ್ತ:** ನಮ್ಮ ಜನರಿಗೆ ಪುನರ್ಜನ್ಮದ ಅರಿವಿದೆ ಆದರೂ ಮನೆಯಲ್ಲಿ ಯಾರಾದರೂ ಮರಣ ಹೊಂದಿದ ಸಮಯದಲ್ಲಿ ಜನರು ಯಾಕೆ ರೋಧಿಸುತ್ತಾರೆ?

**ದಾದಾಶ್ರೀ:** ಅದೆಲ್ಲಾ ತನ್ನಯ ಸ್ವಾರ್ಥಕ್ಕಾಗಿಯೇ ರೋಧಿಸುವುದಾಗಿದೆ. ಯಾರಾದರು ಬಹಳ ನಿಕಟ ಸಂಬಂಧಿಗಳಾಗಿದ್ದರೆ ಉಳ್ಳವರಾಗಿದ್ದರೆ, ಆಗ ಅವರು ನಿಜವಾಗಿ ದುಃಖಿಸುತ್ತಾರೆ. ಆದರೆ ಉಳಿದವರೆಲ್ಲಾ ಆ ವೇಳೆಯಲ್ಲಿ ತೋರಿಕೆಗಾಗಿ ರೋಧಿಸುತ್ತಾ, ತಮ್ಮ ಸಂಬಂಧಿಯನ್ನು ನೆನಪಿಸಿಕೊಂಡು ಬಿಕ್ಕಿಬಿಕ್ಕಿ ಅಳುತ್ತಾರೆ, ಏನು ಆಶ್ಚರ್ಯ ಅಲ್ಲವೇ! ಈ ಜನರು ಭೂತಕಾಲವನ್ನು ವರ್ತಮಾನದಲ್ಲಿ ನೆನಪಿಸಿಕೊಳ್ಳುತ್ತಾರೆ, ಈ ಇಂಡಿಯಾದವರು ಧನ್ಯರಲ್ಲವೇ! ಭೂತಕಾಲವನ್ನು ವರ್ತಮಾನದಲ್ಲಿ ತಂದು ಅದರ ಪರಿಣಾಮವನ್ನು ನಮಗೆ ತೋರಿಸುತ್ತಾರೆ!

## ಪರಿಣಾಮವು ಕಾಲ್ಪನಿಕ...

ಒಂದು ಬಾರಿ ಕಲ್ಪಿಸಿಕೊಂಡರೆ, ಆಗ ಆ 'ಕಲ್ಪನೆ'ಯ ಅಂತ್ಯದವರೆಗೂ ಅಲೆದಾಟವು ಶುರುವಾಗುತ್ತದೆ. ಪೂರ್ತಿ ಕಲ್ಪನೆಯ ಅಂತ್ಯದವರೆಗೂ ಅಲೆದಾಡುವುದೇ ಆಗಿದೆ ಇದು!

## ಅದನ್ನು'leakage' ಮಾಡಬಾರದು!

**ಪ್ರಶ್ನಕರ್ತ:** ನರಸಿಂಹ ಮಹೇತಾ ಎನ್ನುವ ಮಹಾ ಪುರುಷರ ಪತ್ನಿ ತೀರಿಕೊಂಡಾಗ ಅವರು, 'ಒಳ್ಳೆಯದ್ದೇ ಆಯಿತು, ಮುರಿಯಿತು ಜಂಜಾಟ' ಎಂದು ಹೇಳಿದ್ದಾರೆ. ಇದಕ್ಕೆ ಏನು ಹೇಳುವುದು?

**ದಾದಾಶ್ರೀ:** ಆದರೆ, ಅವರ ಹುಚ್ಚುತನದಿಂದ ಹೊರಗೆ ವ್ಯಕ್ತ ಪಡಿಸಿಬಿಟ್ಟರು, 'ಒಳ್ಳೆಯದ್ದೇ ಆಯಿತು, ಮುರಿಯಿತು ಜಂಜಾಟ' ಎಂದು. ಆ ಮಾತನ್ನು ಅವರು ಮನಸ್ಸಿನಲ್ಲೇ ಇಟ್ಟುಕೊಳ್ಳಬೇಕಿತ್ತು, 'ಜಂಜಾಟವು ಮುರಿದು ಹೋಯಿತು' ಎಂದು. ಅದನ್ನು ಮನಸ್ಸಿನಿಂದ 'leakage' ಆಗಲು ಬಿಡಬಾರದು. ಆದರೆ ಅಲ್ಲಿ ಅದು ಮನಸ್ಸಿನಿಂದ 'leakage' ಆಗಿ ಹೊರಬಂದಿತ್ತು. ಮನಸ್ಸಿನಲ್ಲಿ ಇಡಬೇಕಾದ ವಸ್ತುವನ್ನು ಎಲ್ಲರ ಮುಂದೆ ಹೊರ ಹಾಕಿದರೆ, ಅವರನ್ನು ಹುಚ್ಚು ಹಿಡಿದ ಮನುಷ್ಯನೆಂದು ಕರೆಯುತ್ತಾರೆ.

## ಜ್ಞಾನಿಗಳು ಬಹಳ ವಿವೇಕವುಳ್ಳವರು!

'ಜ್ಞಾನಿ'ಗಳು ಉನ್ಮಾದಕ್ಕೆ ಒಳಗಾಗುವುದಿಲ್ಲ, 'ಜ್ಞಾನಿ'ಗಳು ಬಹಳ ಬುದ್ಧಿವಂತಿಕೆಯಿಂದ ವರ್ತಿಸುತ್ತಾರೆ. ಮನಸ್ಸಿನೊಳಗೆ 'ಒಳ್ಳೆಯದ್ದೇ ಆಯಿತು, ಮುರಿಯಿತು ಜಂಜಾಟ', ಎನ್ನುವುದೆಲ್ಲವೂ ಇದ್ದರೂ ಸಹ, ಹೊರಗೆ ತೋರಿಕೆಗೆ ಏನು ಹೇಳುತ್ತಾರೆ? 'ಅಯ್ಯಯ್ಯೋ! ಬಹಳ ಅನರ್ಥವಾಯಿತು, ಹೀಗಾಗ ಬಾರದಿತ್ತು, ಇನ್ನು ಮುಂದೆ ನಾನು ಒಂಟಿಯಾಗಿ ಹೇಗೆ ಇರುವುದು?' ಎಂದೆಲ್ಲಾ ಹೇಳಿ, ನಾಟಕೀಯವಾಗಿ ನಟನೆ ಮಾಡುತ್ತಾರೆ! ಸ್ವತಃ ಈ ಜಗತ್ತು ಕೂಡಾ ನಾಟಕವೇ ಆಗಿದೆ. ಹಾಗಾಗಿ ಒಳಗೊಳಗೇ ಅರಿತುಕೊಳ್ಳಬೇಕು, 'ಒಳ್ಳೆಯದ್ದೇ ಆಯಿತು, ಮುರಿಯಿತು ಜಂಜಾಟ' ಎಂದು. ಆದರೆ ಇಲ್ಲಿ ವಿವೇಕದಿಂದ ವರ್ತಿಸಬೇಕು. 'ಒಳ್ಳೆಯದ್ದೇ ಆಯಿತು, ಮುರಿಯಿತು ಜಂಜಾಟ, ನಿಶ್ಚಿಂತೆಯಿಂದ ಭಜಿಸುವೆ ಶ್ರೀ ಗೋಪಾಲನ,' ಹೀಗೆಂದು ಹೊರಲೋಕದಲ್ಲಿ ಹೇಳಬಾರದು. ಇಂತಹ ಅವಿವೇಕಿತನವನ್ನು ಹೊರಗಿನ ಜನರೇ ಯಾರೂ ಮಾಡುವುದಿಲ್ಲ. ಶತ್ರುವಾಗಿದ್ದರೂ ಸಹ ವಿವೇಕದಿಂದ ಸಾವಿನ ಮನೆಯಲ್ಲಿ ಕುಳಿತುಕೊಳ್ಳುತ್ತಾರೆ, ಮುಖದಲ್ಲಿ ಬೇಸರವನ್ನು ವ್ಯಕ್ತಪಡಿಸುತ್ತಾರೆ! ನಮಗೆ (ಜ್ಞಾನಿಗೆ) ಶೋಕವೂ ಇಲ್ಲ ಏನು ಅನ್ನಿಸುವುದೂ ಇಲ್ಲ, ಆದರೂ 'ಬಾತ್-ರೂಮ್'ಗೆ ಹೋಗಿ ಕಣ್ಣಿನ ಕೆಳಗೆ ಒಂದೆರೆಡು ನೀರಿನ ಬಿಂದುಗಳನ್ನು ಇಳಿಸಿಕೊಂಡು ಬಂದು ನಿಶ್ಚಿಂತೆಯಿಂದ ಕುಳಿತುಕೊಳ್ಳುತ್ತೇವೆ. ಇದೆಲ್ಲಾ ಅಭಿನಯವಾಗಿದೆ. The world is the drama itself; ನೀವು ಕೂಡಾ ನಾಟಕವನ್ನಷ್ಟೇ ಮಾಡಬೇಕಾಗಿದೆ, ಅಭಿನಯವನ್ನಷ್ಟೇ ಮಾಡಬೇಕಾಗಿದೆ, ಆದರೆ ಆ ಅಭಿನಯವನ್ನು 'sincerely' ಮಾಡಬೇಕು.

## ಜೀವವು ಅಲೆದಾಡುವುದೆ ಹದಿಮೂರು ದಿವಸ?

**ಪ್ರಶ್ನಕರ್ತ:** ಮೃತ್ಯುವಿನ ನಂತರ ಹದಿಮೂರು ದಿನಗಳ rest-house ಇರುತ್ತದೆ ಎಂದು ಹೇಳುತ್ತಾರೆ?

**ದಾದಾಶ್ರೀ:** ಈ ಹದಿಮೂರು ದಿವಸಗಳೆಲ್ಲಾ ಆ ಬ್ರಾಹ್ಮಣರಿಗೆ ಇರುತ್ತದೆ. ಮರಣಹೊಂದಿದವರಿಗೆ ಅದರಿಂದ ಏನು? ಬ್ರಾಹ್ಮಣರು rest-house ಎಂದು ಹೇಳುತ್ತಾರೆ, ಮನೆಯ ಮೇಲೆ ಕುಳಿತಿರುತ್ತದೆ, ಹೆಬ್ಬೆಟ್ಟು ಗಾತ್ರದ ಜೀವವು ನೋಡುತಲಿರುತ್ತದೆ ಎಂದೆಲ್ಲಾ ಹೇಳುತ್ತಾರೆ. ಅಯ್ಯೋ ಮೂರ್ಖ, ನೋಡಿಕೊಂಡು ಏನು ಮಾಡಲಿಕ್ಕಿದೆ? ಆದರೂ ನೋಡಿ ಆ ರೀತಿಯ ಮೂಢನಂಬಿಕೆಯ ಹಾವಳಿಯೋ ಹಾವಳಿ! ನೋಡಲು ಹೆಬ್ಬೆಟ್ಟಿನ ಗಾತ್ರದ ಜೀವಿಯಾಗಿದ್ದು,

ಅದು ಮನೆಯ ಮೇಲೆ ಕುಳಿತಿರುತ್ತದೆ ಎಂದು ಹೇಳುತ್ತಾರೆ. ಅಲ್ಲದೆ ಅದನ್ನು ನಮ್ಮ ಜನ ಸತ್ಯವೆಂದು ಭಾವಿಸಿದ್ದಾರೆ ಹಾಗೂ ಸತ್ಯವೆಂದು ನಂಬಿಸದೆ ಹೋದರೆ, ಈ ಜನಗಳು ತಿಥಿ-ಶ್ರಾದ್ಧ ಏನೂ ಮಾಡುವುದೇ ಇಲ್ಲ.

**ಪ್ರಶ್ನಕರ್ತ:** ಗರುಡ ಪುರಾಣದಲ್ಲಿ ಬರೆದಿದೆ. ಅದೇನೆಂದರೆ, ಹೆಬ್ಬೆಟ್ಟಿನ ಗಾತ್ರದಷ್ಟೇ ಆತ್ಮ ಇರುತ್ತದೆ ಎಂದು?

**ದಾದಾಶ್ರೀ:** ಹೌದು, ಹಾಗಾಗಿಯೇ ಅದರ ಹೆಸರೇ ಗರುಡ ಪುರಾಣ! ಅಂದರೆ ಪುರಾತನ ಎಂದು ಕರೆಯಲಾಗುತ್ತದೆ. ಹೆಬ್ಬೆಟ್ಟಿನ ಗಾತ್ರದ ಆತ್ಮ ಸಿಗುವುದೂ ಇಲ್ಲ, ಮತ್ತೆ ಅಲ್ಲಿ ದಿನ ಬದಲಾಗುವುದೂ ಇಲ್ಲ. ಶುಕ್ರವಾರ ಬದಲಾಗುವುದೇ ಇಲ್ಲ. ಎವ್ರಿ ಡೇ ಫ್ರೈಡೆ! ಮಾಡಲು ಹೋದರು scientific, ಉದ್ದೇಶವೂ ಕೂಡಾ scientific ಆಗಿತ್ತು, ಆದರೆ thinking ಎಲ್ಲಾ ಕೆಟ್ಟು ಹೋಯಿತು. ಜನರು ಮೃತರ ಹೆಸರಿನಲ್ಲಿ ಕ್ರಿಯೆಗಳನ್ನು ಮಾಡುತ್ತಾರೆ ಹಾಗು ಕ್ರಿಯೆಗಳನ್ನು ಮಾಡಿ ಬ್ರಾಹ್ಮಣರಿಗೆ ದಾನ ಕೊಡುತ್ತಾರೆ. ಆಗಿನ ಸಮಯದಲ್ಲಿ ದಾನವನ್ನು ನೀಡಬಹುದಾದಂಥ ಬ್ರಾಹ್ಮಣರಿದ್ದರು. ಆಗ ಬ್ರಾಹ್ಮಣರಿಗೆ ದಾನ ನೀಡಿದರೆ, ಅದರಿಂದ ಪುಣ್ಯ ಕಟ್ಟಿಕೊಳ್ಳುತ್ತಿದ್ದರು. ಈಗಂತೂ ಅದೆಲ್ಲಾ ಅಪಾಯಕಾರಿ ಆಗಿದೆ. ಬ್ರಾಹ್ಮಣರು ಇಲ್ಲಿಂದ ಹಾಸಿಗೆಯನ್ನು ತೆಗೆದುಕೊಂಡುಹೋಗುತ್ತಾರೆ, ಅಲ್ಲಿ ಹಾಸಿಗೆಯ ಅಂಗಡಿಯವನೊಂದಿಗೆ ವ್ಯವಹಾರ ಇಟ್ಟುಕೊಂಡಿರುತ್ತಾರೆ. ಕಂಬಳಿ ಕೊಟ್ಟರೆ ಅದನ್ನೂ ಮಾರಿಕೊಳ್ಳುತ್ತಾರೆ, ಬೆಡ್-ಶೀಟ್ ಕೊಟ್ಟರೆ ಅದನ್ನೂ ಮಾರಿಕೊಳ್ಳುತ್ತಾರೆ. ನಾವು ಇನ್ನು ಬೇರೆ ಯಾವುದೇ ಸಾಮಾನು-ಬಟ್ಟೆ ಏನೇ ಕೊಟ್ಟರೂ ಎಲ್ಲವನ್ನೂ ಮಾರಿಕೊಂಡು ಬಿಡುತ್ತಾರೆ. ಇದರಿಂದ ಹೇಗೆ ಆ ಆತ್ಮಕ್ಕೆ ತಲುಪುತ್ತದೆ ಎಂದು ನಂಬಿಕೊಂಡಿದ್ದಾರೆ ಈ ಜನರು?

**ಪ್ರಶ್ನಕರ್ತ:** ದಾದಾ, ಈಗಂತೂ ವ್ಯಾಪಾರಿಗಳೇ ಬ್ರಾಹ್ಮಣರಿಗೆ ಹೇಳುತ್ತಾರೆ, 'ನೀವು ತಂದುಕೊಡಿ ನಿಮಗೆ ಅದರ ನಿಜವಾದ ಬೆಲೆಯನ್ನು ಕೊಡುತ್ತೇವೆ' ಎಂದು.

**ದಾದಾಶ್ರೀ:** ಅದು ಈಗಿನಿಂದಲ್ಲ, ಬಹಳ ವರ್ಷಗಳಿಂದಲೂ ನಡೆಯುತ್ತಲೇ ಇದೆ. ಸರಿಯಾದ ಬೆಲೆ ಕೊಡುತ್ತೇವೆ, ನೀವು ತೆಗೆದು ಕೊಂಡು ಬನ್ನಿ ಎಂದು ಹೇಳುವುದು. ಮತ್ತು ಯಾರೋ ಕೊಟ್ಟಿರುವ ಹಾಸಿಗೆ ಅದಾಗಿರುತ್ತದೆ, ಅದೇ ಹಾಸಿಗೆಯನ್ನು ಮತ್ತೊಬ್ಬರು ಖರೀದಿಸಿ ತರುತ್ತಾರೆ! ಏನು ಹೇಳುವುದು, ಇನ್ನೂ ಸಹ ಈ ಜನರ ತಲೆಗೆ ಹೋಗುವುದಿಲ್ಲ, ಈಗಲೂ ಮೂರ್ಖತನದಿಂದ ಅದೇ ರೀತಿಯಲ್ಲಿ ನಡೆಯುತ್ತಲೇ ಇದೆ. ಜೈನ ಧರ್ಮದವರು ಹೀಗೆಲ್ಲಾ ಮಾಡುವುದಿಲ್ಲ. ಜೈನರು ಬಹಳ ಅಭಿವೃದ್ಧಿ ಹೊಂದಿದವರು ಮತ್ತು ಅಂತಿಂಥದ್ದೆಲ್ಲಾ

ಮಾಡುವುದಿಲ್ಲ. ಇವೆಲ್ಲಾ ಏನೂ ಇಲ್ಲ. ಇಲ್ಲಿಂದ ಆತ್ಮ ಹೊರಟಿತೆಂದರೆ ನೇರವಾಗಿ ಅದು ಸಂಚರಿಸಿ ಕೊಂಡುಹೋಗುತ್ತದೆ ಮತ್ತು ಗರ್ಭವು ಪ್ರಾಪ್ತಿಯಾಗುತ್ತದೆ.

## ಮರಣಹೊಂದಿದವರಿಗೆ ಇಲ್ಲ ಯಾವ ಲೇವಾದೇವಿ!

**ಪ್ರಶ್ನಕರ್ತ:** ಮೃತ್ಯುವಿನ ನಂತರ ಏನಾದರು ಭಜನೆ-ಕೀರ್ತನೆ ಮಾಡಬೇಕೋ ಬೇಡವೋ? ಅದರಿಂದ ಏನು ಪ್ರಯೋಜನ?

**ದಾದಾಶ್ರೀ:** ಮೃತ್ಯುಹೊಂದಿದವರಿಗೆ, ಯಾವುದರ ಲೇವಾದೇವಿಯು ಇಲ್ಲ.

**ಪ್ರಶ್ನಕರ್ತ:** ಹಾಗಿದ್ದರೆ ಈ ನಮ್ಮ ಧಾರ್ಮಿಕ ವಿಧಿಗಳಿವೆಯಲ್ಲ ಮತ್ತು ಮರಣದ ಪ್ರಸಂಗದಲ್ಲಿ ಯಾವುದೆಲ್ಲಾ ವಿಧಿ, ಕಾರ್ಯಗಳಿವೆ ಅವು ಸರಿಯೋ ಅಥವಾ ಅಲ್ಲವೋ?

**ದಾದಾಶ್ರೀ:** ಯಾವುದೂ ಇದರಲ್ಲಿ ಒಂದು ಅಂಶ ಕೂಡಾ ಸರಿಯಿಲ್ಲ. ಯಾರು ಹೋಗುವವರಿದ್ದರೋ ಅವರು ಹೋದರು. ಜನರು ಅವರಷ್ಟಕ್ಕೆ ತಿಳಿದಿರುವುದನ್ನು ಮಾಡಿಕೊಂಡಿರುತ್ತಾರೆ ಹಾಗು ಎಲ್ಲಿಯಾದರೂ ಅವರಿಗೆ, 'ನಿಮಗೋಸ್ಕರ ಏನಾದರು ಒಳ್ಳೆಯದನ್ನು ಮಾಡಿಕೊಳ್ಳಿ!' ಎಂದು ಹೇಳಿದರೆ, ಆಗ ಅವರು ಹೇಳುತ್ತಾರೆ, 'ನನಗೆ ಅದಕ್ಕೆಲ್ಲಾ ಸಮಯವೇ ಇಲ್ಲ' ಎಂದು. ಇನ್ನೂ ತಂದೆಯ ಒಳಿತಿಗಾಗಿ ಮಾಡಲು ಹೇಳಿದರೆ, ಆಗಲೂ ಹಿಂದೆ-ಮುಂದೆ ನೋಡುವಂಥವರು. ಆಗ ಅಕ್ಕ ಪಕ್ಕದವರು ಹೇಳಿ ಬಲವಂತ ಮಾಡಿ, ನಿನ್ನ ತಂದೆಗಾಗಿಯಾದರೂ ಮಾಡು, ಎಂದು ಒತ್ತಾಯಪಡಿಸಿ ಅಂತಹ ಕಾರ್ಯಗಳನ್ನೆಲ್ಲಾ ಮಾಡಿಸುತ್ತಾರೆ!

**ಪ್ರಶ್ನಕರ್ತ:** ಹಾಗಿದ್ದರೆ ಈ ಗರುಡ ಪುರಾಣ ಓದಿಸುತ್ತಾರಲ್ಲವೇ ಅದು ಏನು?

**ದಾದಾಶ್ರೀ:** ಈ ಗರುಡ ಪುರಾಣ ಎಲ್ಲಾ ಬಹಳ ದುಃಖದಲ್ಲಿ ಇರುವವರಿಗೆ ಒಂದು ಕಡೆ ಕುಳ್ಳಿರಿಸಿ, ನಂತರ ಅವರಿಗೆ ಸಮಾಧಾನಪಡಿಸಲು ಉಪಾಯ ಮಾಡುವುದಾಗಿದೆ. ಅದಕ್ಕಾಗಿಯೇ ಈ ಎಲ್ಲಾ ಉಪಾಯಗಳಾಗಿವೆ.

## ಇದೆಲ್ಲಾ ಹೊಗಳಿಕೆಗಾಗಿ!

**ಪ್ರಶ್ನಕರ್ತ:** ಈ ಮೃತ್ಯುವಿನ ನಂತರ ಹನ್ನೆರಡನೇ ದಿನದ ಆಚರಣೆ, ಹದಿಮೂರನೇ ದಿನದ ಆಚರಣೆ ಮಾಡುತ್ತಾರೆ, ಪಾತ್ರೆಗಳನ್ನು ಹಂಚುತ್ತಾರೆ, ಊಟ ಹಾಕುತ್ತಾರೆ, ಇದೆಲ್ಲದರ ಮಹತ್ವ ಏನು?

**ದಾದಾಶ್ರೀ:** ಇದೇನು ಮಾಡಲೇ ಬೇಕಾದ ಕೆಲಸವೇನಲ್ಲ. ಇದೆಲ್ಲಾ ಮಾಡುವವರು ಪ್ರಶಂಸೆಯನ್ನು ಪಡೆಯುವುದಕ್ಕಾಗಿಯೇ ಮಾಡುತ್ತಾರೆ. ಅಲ್ಲದೆ ಯಾರು ಯಾವುದಕ್ಕೂ ಖರ್ಚು ಮಾಡುವುದಿಲ್ಲವೋ, ಅವರು ಲೋಭಿಗಳಾಗಿಬಿಡುತ್ತಾರೆ. ಕೆಲವರಂತೂ ಎರಡು ಸಾವಿರ ರೂಪಾಯಿ ಖರ್ಚಾದರೆ, ಊಟ-ತಿಂಡಿಯನ್ನೂ ಮಾಡುವುದಿಲ್ಲ ಮತ್ತು ಆ ಎರಡು ಸಾವಿರ ರೂಪಾಯಿಯನ್ನು ಮತ್ತೆ ಸಂಗ್ರಹಿಸುವುದರಲ್ಲಿ ನಿರತರಾಗುತ್ತಾರೆ. ಆದುದರಿಂದ ಈ ರೀತಿಯ ಪದ್ಧತಿಗಳಿಂದ ಅವರಿಂದ ಖರ್ಚು ಮಾಡಿಸಿದರೆ, ಆಗ ಮನಸ್ಸು ಸ್ವಚ್ಛವಾಗುವುದಲ್ಲದೆ ಲೋಭವು ಹೆಚ್ಚಾಗುವುದಿಲ್ಲ. ಆದರೆ ಎಲ್ಲಿಯೂ ಇದನ್ನು ಕಡ್ಡಾಯವಾಗಿ ಮಾಡಲೇ ಬೇಕೆಂದೇನೂ ಇಲ್ಲ. ನಿಮ್ಮಿಂದ ಆಗುವುದಾದರೆ ಮಾಡಿ, ಇಲ್ಲವಾದರೆ ಬೇಡ.

## ಶ್ರಾದ್ಧದ ಸರಿಯಾದ ತಿಳುವಳಿಕೆ!

**ಪ್ರಶ್ನಕರ್ತ:** ಶ್ರಾದ್ಧದ ಸಮಯದಲ್ಲಿ ಪಿತೃಗಳನ್ನು ಆಹ್ವಾನ ಮಾಡಲಾಗುತ್ತದೆ, ಅದು ಯೋಗ್ಯವಾಗಿದೆಯೇ? ಅಲ್ಲದೆ ಪಿತೃಪಕ್ಷದ ಸಮಯದಲ್ಲಿ ಪಿತೃಗಳು ಬರುತ್ತಾರೆಯೇ? ಹಾಗೂ ಊಟ ಹಾಕುತ್ತಾರಲ್ಲ ಅದು ಏನು?

**ದಾದಾಶ್ರೀ:** ಮಕ್ಕಳೊಂದಿಗೆ ಇನ್ನೂ ಸಂಬಂಧವು ಉಳಿದುಕೊಂಡಿದ್ದರೆ, ಆಗ ಮಾತ್ರ ಬರಬೇಕಾಗುತ್ತದೆ. ಆದರೆ, ಇಲ್ಲಿ ಪೂರ್ತಿ ಸಂಬಂಧಗಳೆಲ್ಲಾ ಕಳಚಿ ಹೋದ ಮೇಲೆಯೇ ದೇಹವನ್ನು ಬಿಟ್ಟುಹೋಗುವುದು. ಯಾವ ರೀತಿಯಲ್ಲೂ ಮನೆಯವರೊಂದಿಗೆ ಸಂಬಂಧವು ಉಳಿಯದೆ ಪೂರ್ಣಗೊಂಡಾಗ ದೇಹವು ಕಳಚಿ ಬೀಳುತ್ತದೆ. ನಂತರ ಎಂದೂ ಸಂಪರ್ಕದಲ್ಲಿ ಬರುವುದಿಲ್ಲ. ಹೊಸದಾಗಿ ಸಂಬಂಧವನ್ನು ಕಟ್ಟಿಕೊಂಡಿದ್ದರೆ, ಆಗ ಮತ್ತೆ ಮುಂದಿನ ಜನ್ಮವಾಗುತ್ತದೆ. ಹಾಗೆ ಸುಮ್ಮನೆ ಯಾರೂ ಬರುವುದಿಲ್ಲ. ಪಿತೃ ಎಂದು ಯಾರನ್ನು ಕರೆಯುವುದು? ಮಕ್ಕಳಿಗೆ ಹೇಳುವುದೋ ಅಥವಾ ಹಿರಿಯರಿಗೆ ಹೇಳುವುದೋ? ಮಕ್ಕಳೂ ಪಿತೃ ಆಗುತ್ತಾರೆ ಹಾಗೆ ತಂದೆಯೂ ಪಿತೃ ಆಗುತ್ತಾರೆ ಅಲ್ಲದೆ ತಾತನೂ ಪಿತೃ ಆಗುತ್ತಾರೆ. ಹಾಗಾದರೆ ಯಾರನ್ನು ಪಿತೃವೆಂದು ಕರೆಯುವುದು?

**ಪ್ರಶ್ನಕರ್ತ**: ನೆನಪಿಸಿ ಕೊಳ್ಳುವುದಕ್ಕಾಗಿಯೇ ಈ ಕ್ರಿಯೆಗಳನ್ನೆಲ್ಲಾ ಮಾಡಿರುವುದಲ್ಲವೇ?

**ದಾದಾಶ್ರೀ:** ಇಲ್ಲ. ನೆನಪಿಸಿಕೊಳ್ಳುವುದಕ್ಕಾಗಿ ಅಲ್ಲ. ಈ ನಮ್ಮ ಜನರು ಮೊದಲಿನಿಂದ ದಾನ ಧರ್ಮಗಳಿಗೆ ನಾಲ್ಕು ಆಣೆ ಕೂಡಾ ಖರ್ಚು ಮಾಡದೇ ಇರುವಂಥವರು. ಹಾಗಾಗಿ ಅವರಿಗೆ ತಿಳುವಳಿಕೆ ನೀಡಬೇಕಾಗಿ ಬಂತು ಏನೆಂದರೆ, ನಿನ್ನ ಪಿತಾಶ್ರೀಯವರ ನಿಧನವಾಗಿದೆ ಹಾಗಾಗಿ ಏನಾದರೂ ಕಾರ್ಯದಲ್ಲಿ ಖರ್ಚು ಮಾಡು, ಪೂಜೆ, ಪುನಸ್ಕಾರ ಏನಾದರು ಮಾಡಿಸು. ಅದು ನಿನ್ನ ಪಿತಾಶ್ರೀಗೆ ತಲುಪುತ್ತದೆ.' ಹೀಗೆ ಲೋಕದ ಜನರು ಒತ್ತಾಯ ಮಾಡಿ ಅವನಿಗೆ ಬೈದು, ಬುದ್ಧಿ ಹೇಳಿ, 'ಏನಾದರು ಮಾಡು ತಂದೆ ನಿನಗೆ ಒಳ್ಳೆಯದನ್ನು ಮಾಡುತ್ತಾರೆ! ಶ್ರಾದ್ಧ ಮಾಡಿಸು! ಏನಾದರೂ ಒಳ್ಳೆಯದನ್ನು ಮಾಡು!' ಎಂದು ಹೇಳಿ ಅವನಿಂದ ಧರ್ಮದಾನದ ಹೆಸರಿನಲ್ಲಿ ಇನ್ನೂರು-ನಾಲ್ಕುನೂರು ಖರ್ಚು ಮಾಡಿಸುತ್ತಿದ್ದರು. ಇದರಿಂದಾಗಿ ದಾನ ಧರ್ಮದ ಫಲವು ಪ್ರಾಪ್ತಿಯಾಗುತಿತ್ತು. ತಂದೆಯ ಹೆಸರಿನಲ್ಲಿ ಮಾಡುವುದರಿಂದ ಅದರ ಫಲವು ದೊರೆಯುತಿತ್ತು. ಅಲ್ಲಿ ತಂದೆಯ ಹೆಸರನ್ನು ಹೇಳದೆ ಹೋಗಿದ್ದರೆ, ಆಗ ಯಾರೂ ಕೂಡಾ ನಾಲ್ಕು ಆಣೆಯನ್ನೂ ಖರ್ಚು ಮಾಡುತ್ತಿರಲಿಲ್ಲ. ಹಾಗಾಗಿ ಇದೆಲ್ಲವೂ ಅಂಧಶ್ರದ್ಧೆಯ ಮೇಲೆಯೇ ನಡೆದುಕೊಂಡು ಬರುತ್ತಿದೆ. ನಿಮಗೆ ಅರ್ಥವಾಯಿತ್ತಲ್ಲವೇ? ತಿಳಿಯಲಿಲ್ಲವೇ?

ಈ ವ್ರತ-ಉಪವಾಸ ಮಾಡುವುದೆಲ್ಲಾ ಆಯುರ್ವೇದದ ದೃಷ್ಟಿಯಿಂದಾಗಿದೆ, ಅದು ಆಯುರ್ವೇದದ ವಿಷಯವಾಗಿದೆ. ವ್ರತ-ಉಪವಾಸ ಮಾಡುವುದರಿಂದ ಏನೆಲ್ಲಾ ಲಾಭವಿದೆ ಎನ್ನುವುದರ ವಿವರಣೆಯನ್ನು ಆಯುರ್ವೇದದಲ್ಲಿ ಮಾಡಲಾಗಿದೆ. ಹಿಂದಿನವರು ಈ ರೀತಿಯಿಂದ ನಿಯೋಜಿಸಿರುವುದು ಒಳ್ಳೆಯದೇ ಆಗಿದೆ. ಈ ಮೂರ್ಖ ಮನುಷ್ಯರಿಗೂ ಕೂಡ ಲಾಭವಾಗಲಿ ಎಂದೇ, ಈ ಎಂಟನೇ ದಿನದ, ಹನ್ನೊಂದನೇ ದಿನದ, ಐದನೇ ದಿನದ ಆಚರಣೆ ಎಂದೆಲ್ಲಾ ಮಾಡಿರುವುದು ಹಾಗೂ ಅದೇ ಈ ಶ್ರಾದ್ಧವಾಗಿದೆ! ಹಾಗಾಗಿ ಈ ಶ್ರಾದ್ಧವು ಕೂಡಾ ಬಹಳ ಒಳ್ಳೆಯದಕ್ಕಾಗಿಯೇ ಕಾರ್ಯವನ್ನು ಮಾಡುವುದಾಗಿದೆ.

**ಪ್ರಶ್ನಕರ್ತ:** ದಾದಾ, ಇನ್ನು ಈ ಊಟ ಹಾಕುವುದು ಇದರ ಅರ್ಥವೇನು? ಅದನ್ನು ಕೂಡಾ ಅಜ್ಞಾನವೆಂದು ಹೇಳಬಹುದೇ?

**ದಾದಾಶ್ರೀ:** ಹಾಗಲ್ಲ, ಅದು ಅಜ್ಞಾನವಲ್ಲ. ಅದೊಂದು ಪದ್ಧತಿ ಜನರು ರೂಢಿಸಿಕೊಂಡಿದ್ದಾರೆ, ಆ ರೀತಿಯಲ್ಲಿ ಶ್ರಾದ್ಧವನ್ನು ಮಾಡುತ್ತಾರೆ. ನಮ್ಮಲ್ಲಿ ಈ ಶ್ರಾದ್ಧವನ್ನು ಮಾಡುವುದರ ಹಿಂದೆ ಬಹು ದೊಡ್ಡ ಇತಿಹಾಸವೇ ಇದೆ. ಇದನ್ನು ನಡೆಸಿಕೊಂಡು ಬರಲು ಏನು ಕಾರಣ? ಈ ಶ್ರಾದ್ಧವು ಯಾವಾಗಲಿಂದ ಪ್ರಾರಂಭವಾಗುತ್ತದೆ? ಭಾದ್ರಪಧ ಶುದ್ಧ ಹುಣ್ಣಿಮೆಯಿಂದ ಪ್ರಾರಂಭವಾಗಿ

ಭಾದ್ರಪಥ ಪೂರ್ಣ ಅಮಾವಾಸ್ಯೆಯವರೆಗೆ ಶ್ರಾದ್ಧದ ಋತುವೆಂದು ಕರೆಯಲಾಗಿದೆ. ಹದಿನಾರು ದಿನದ ಶ್ರಾದ್ಧವಾಗಿದೆ! ಈ ಶ್ರಾದ್ಧವನ್ನು ಯಾಕಾಗಿ ಜನರು ನಿರ್ಮಿಸಿದರು? ಅವರೆಲ್ಲಾ ಬಹು ಬುದ್ಧಿವಂತ ಜನರು! ಹಾಗಾಗಿ ಅದರ ಒಳಿತನ್ನು ತಿಳಿದು ಶ್ರಾದ್ಧ ಎಂದು ಮಾಡಲು ಪ್ರಾರಂಭಿಸಿದರು. ಇದೆಲ್ಲಾ ವೈಜ್ಞಾನಿಕವೇ ಆಗಿದೆ. ಈ ನಮ್ಮ ಹಿಂದೂಸ್ಥಾನದಲ್ಲಿ ಬಹಳ ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಪ್ರತಿಯೊಂದು ಮನೆಯಲ್ಲಿ ಯಾರಾದರೊಬ್ಬರು ಹಾಸಿಗೆ ಹಿಡಿದಿರುತ್ತಿದ್ದರು, ಮಲೇರಿಯದಿಂದ ನರಳುತ್ತಾ ಹಾಸಿಗೆ ಹಿಡಿದಿರುವವರು ಒಬ್ಬರು-ಇಬ್ಬರು ಇದ್ದೇಇರುತ್ತಿದ್ದರು. ಅದು ಯಾವ ತಿಂಗಳಲ್ಲಿ? ಎಂದು ಕೇಳಿದರೆ, ಅದು ಈ ಭಾದ್ರಪಥದ ತಿಂಗಳು. ಆ ಸಮಯದಲ್ಲಿ ನಮ್ಮ ಹಳ್ಳಿಗಳಿಗೆ ಹೋದರೆ ಪ್ರತಿಯೊಂದು ಮನೆಯ ಹೊರಗೆ ಒಂದಾದರೂ ಹಾಸಿಗೆ ಬಿದ್ದಿರುತ್ತಿತು ಹಾಗೂ ಅದರಮೇಲೆ ಕಂಬಳಿಯನ್ನು ಸುತ್ತಿಕೊಂಡು ಮಲಗಿರುತ್ತಿದ್ದರು. ಜ್ವರದ ತಾಪ ಇರುತ್ತಿತ್ತು, ಮಲೇರಿಯ ಜ್ವರದ ಎಲ್ಲಾ ಲಕ್ಷಣಗಳು ಕಂಡು ಬರುತ್ತಿತ್ತು. ಭಾದ್ರಪಥದ ತಿಂಗಳಲ್ಲಿ ಸೊಳ್ಳೆಗಳು ಬಹಳವಾಗಿ ಇರುತ್ತವೆ. ಹಾಗಾಗಿ ಎಲ್ಲಾ ಕಡೆ ಮಲೇರಿಯ ಹರಡಿಬಿಡುತ್ತದೆ, ಮಲೇರಿಯ ಎಂದರೆ ಪಿತ್ತ ಜ್ವರವಾಗಿದೆ. ಇದು ವಾಯು ಅಥವಾ ಕಫದ ಜ್ವರವಲ್ಲ. ಪಿತ್ತ ಜ್ವರವೆಂದರೆ, ದೇಹದಲ್ಲಿ ಬಹಳಷ್ಟು ಪಿತ್ತ ಹೆಚ್ಚಾಗಿರುತ್ತದೆ. ಅದರ ಜೊತೆಗೆ, ಮಳೆಗಾಲದ ದಿನಗಳು ಹಾಗೂ ಈ ಸೊಳ್ಳೆಗಳ ಕಾಟ. ಯಾರಿಗೆ ಪಿತ್ತವು ಹೆಚ್ಚಾಗಿರುವುದೋ ಅವರನ್ನೇ ಸೊಳ್ಳೆಗಳು ಕಡಿಯುವುದು. ಅದಕ್ಕಾಗಿ ಏನನ್ನಾದರು ಕಂಡುಹುಡುಕಲೇ ಬೇಕಾಗಿತ್ತು ಹಾಗೂ ಹಿಂದೂಸ್ಥಾನದಲ್ಲಿನ ಜನರಿಗೆ ಏನಾದರೊಂದು ಮಾರ್ಗವನ್ನು ಮಾಡಲೇ ಬೇಕಾಗಿತ್ತು. ಇಲ್ಲವಾಗಿದ್ದರೆ ಇಲ್ಲಿನ ಜನಸಂಖ್ಯೆ ಅರ್ಧಕ್ಕೆ ಇಳಿದುಬಿಡುತಿತ್ತು. ಆದರೆ, ಈಗ ಸೊಳ್ಳೆಗಳು ಕಡಿಮೆಯಾಗಿವೆ, ಇಲ್ಲದಿದ್ದರೆ ಜನರು ಜೀವಿಸಲು ಸಾಧ್ಯವಾಗುತಿರಲಿಲ್ಲ. ಹಾಗಾಗಿ, ಈ ಪಿತ್ತದ ಜ್ವರವನ್ನು ಶಮನ ಮಾಡುವುದಕ್ಕಾಗಿ, ಗುಣಪಡಿಸುವ ಕ್ರಿಯೆಯನ್ನು ಪತ್ತೆಹಚ್ಚಲಾಯಿತು. ಈ ಜನರು ಹಾಲಿನಿಂದ ತಯಾರಿಸಿದ ತಿನಿಸು, ಪಾಯಸ, ಹಾಲು ಹಾಗೂ ಸಕ್ಕರೆಯನ್ನು ತಿಂದರೆ, ಪಿತ್ತವು ಶಮನವಾಗುವುದಲ್ಲದೆ ಮಲೇರಿಯ ರೋಗವು ಇಳಿಮುಖವಾಗುತ್ತದೆ ಎಂದು ಪತ್ತೆಹಚ್ಚಲಾಯಿತು. ಆಗಿನ ಕಾಲದಲ್ಲಿ ಜನರ ಮನೆಯಲ್ಲಿ ಹಾಲು ಹೆಚ್ಚಾಗಿ ಇದ್ದರೂ, ಪಾಯಸ ಅಥವಾ ಹಾಲಿನ ತಿಂಡಿ ತಿನಿಸು ಏನು ಮಾಡುತ್ತಲೂ ಇರಲಿಲ್ಲ ಹಾಗೂ ತಿನ್ನುತ್ತಲೂ ಇರಲಿಲ್ಲ! ಬಹಳ normal ಅಲ್ಲವೇ (!) ಹಾಗಿದ್ದಾಗ, ಏನು ಮಾಡುವುದು ನೀವೇ ಯೋಚಿಸಿ? ಅಂಥವರಿಗೆ ಈ ಹಾಲಿನ ತಿನಿಸುಗಳನ್ನು ದಿನಾಲೂ ತಿನ್ನಿಸುವುದು ಹೇಗೆ?

ಇದ್ಯಾವುದೂ ಯಾವ ತಂದೆಗೂ ಒಂದು ಚೂರೂ ತಲುಪುವುದಿಲ್ಲ. ಆದರೆ, ಇದು ಆಗಿನ ಜನರು ಕಂಡುಕೊಂಡ ರೀತಿಯಾಗಿದೆ, ಇಲ್ಲದಿದ್ದರೆ ಈ ಹಿಂದೂಸ್ಥಾನದ ಜನರು ನಾಲ್ಕು ಆಣೆ

ಸಹ ದಾನ, ಮಾಡುವಂಥವರಲ್ಲ. ಅಂಥ ಲೋಭಿಗಳು! ಎರಡು ಆಣೆ ಕೂಡಾ ದಾನ ಮಾಡುವುದಿಲ್ಲ. ಹಾಗಾಗಿ, ಹೀಗೋ ಹಾಗೋ ಮಾಡಿ ಕುತ್ತಿಗೆಯ ಪಟ್ಟಿ ಹಿಡಿದು ಹೇಳಬೇಕಾಯಿತು, 'ನಿನ್ನ ತಂದೆಯ ಶ್ರಾದ್ಧವನ್ನಾದರೂ ಮಾಡಬಾರದೇ?' ಹೀಗೆಂದು ಎಲ್ಲರು ಹೇಳುವ ವಾಡಿಕೆಯಾಗಿಹೋಯಿತು! ಅಂದಿನಿಂದ ಶ್ರಾದ್ಧದ ಹೆಸರಿನಲ್ಲಿ ಈ ಪದ್ಧತಿಯನ್ನು ಮಾಡಿಬಿಟ್ಟರು. ಕೂಡಾ ಅದೇ ಹೆಸರನ್ನು ಇಟ್ಟರು, 'ಹಿರಿಯರ ಶ್ರಾದ್ಧ ಮಾಡಬೇಕಲ್ಲವೇ!' ಎಂದು, ಅದರಲ್ಲಿಯೂ ನನ್ನಂತಹ ಮೊಂಡರು ಮಾಡದೇ ಹೋದರೆ ಆಗ ಏನು ಹೇಳುತ್ತಾರೆ? 'ತಂದೆಯ ಶ್ರಾದ್ಧವನ್ನು ಮಾಡದವನು' ಎಂದು. ಈ ಅಕ್ಕಪಕ್ಕದವರ ಉಪದ್ರದಿಂದ ತಪ್ಪಿಸಿಕೊಳ್ಳಲು ಶ್ರಾದ್ಧದ ಊಟ ಇಟ್ಟುಕೊಳ್ಳುತ್ತಾರೆ. ನಂತರ ಎಲ್ಲರಿಗೂ ಊಟ ಮಾಡಿಸಿಬಿಡುತ್ತಾರೆ.

ಹಾಗಾಗಿ, ಆ ಹುಣ್ಣಿಮೆಯ ದಿನದಿಂದ ಹಾಲಿನ ಕೋವಾ ತಿನ್ನಲು ಪ್ರಾರಂಭವಾದರೆ, ಇನ್ನು ಹದಿನೈದು ದಿನಗಳವರೆಗೆ ತಿನ್ನುತ್ತಲೇ ಇರುವುದಾಗಿದೆ. ಅದು ಹೇಗೆಂದರೆ, 'ಇವತ್ತು ಒಬ್ಬರ ಮನೆಯಲ್ಲಿ ಶ್ರಾದ್ಧದ ಊಟವಾದರೆ, ನಾಳೆ ಮತ್ತೊಬ್ಬರ ಮನೆಯಲ್ಲಿ.' ಹೀಗೆ ಜನರು ಮೊದಲೇ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದರು, 'ಇವತ್ತು ಎಲ್ಲಿಗೆ ಹೋಗಬೇಕು ಹಾಗೂ ಪ್ರತಿ ದಿನ ಒಂದಲ್ಲ ಒಂದು ಕಡೆ ಹೋಗಬೇಕು, ತಪ್ಪಿಸುವ ಹಾಗಿಲ್ಲ' ಎಂದು. ಜೊತೆಗೆ ಕಾಗೆಗೆ ಕೂಡಾ ಊಟ ಇಡುವುದು, ಈ ರೀತಿಯಲ್ಲಿ ಪದ್ಧತಿಯನ್ನು ರೂಢಿಸಿಕೊಂಡರು. ಇದರಿಂದಾಗಿ ಪಿತ್ತವು ಶಮನವಾಯಿತು. ಅದಕ್ಕೆ ಜನರು ಆಗಿನ ಕಾಲದಲ್ಲಿ ಏನು ಹೇಳುತ್ತಿದ್ದರೆಂದರೆ, ಹದಿನಾರು ದಿನದ ಶ್ರಾದ್ಧದ ಋತುವಿನಲ್ಲಿ ಆರೋಗ್ಯವು ಸುಧಾರಿಸಿದರಿಂದ, ಈಗ ನವರಾತ್ರಿಗೆ ಬರಲಾಯಿತು! ಎಂದು.

## ಸಹಿ ವಿನಃ ಮರಣವು ಕೂಡಾ ಇಲ್ಲ!

ಈ ಪ್ರಕೃತಿಯ ನಿಯಮವು ಏನೆಂದರೆ, ಯಾವ ಮನುಷ್ಯನನ್ನೂ ಇಲ್ಲಿಂದ (ಈ ಲೋಕದಿಂದ) ಕರೆದುಕೊಂಡು ಹೋಗುವಂತಿಲ್ಲ. ಅವನ ಸಹಿ ಇಲ್ಲದೆ ಅವನನ್ನು ಇಲ್ಲಿಂದ ಕರೆದುಕೊಂಡು ಹೋಗುವಂತಿಲ್ಲ. ಜನರು ಸಹಿ ಮಾಡುತ್ತಾರೆಯೋ ಇಲ್ಲವೋ? ಅದು ಹೇಗೆಂದರೆ, ಕೆಲವೊಮ್ಮೆ ಹೇಳುತ್ತಾರಲ್ಲವೇ, 'ಭಗವಂತ, ಇಲ್ಲಿಂದ ಹೋದರೆ ಸಾಕು' ಎಂದು. ಯಾಕಾಗಿ ಹೀಗೆ ಹೇಳುತ್ತಾರೆ? ಎಂದಾದರೂ ತಡೆಯಲಾರದ ದುಃಖವಾದಾಗ ಹಾಗೆ ಹೇಳಿಬಿಡುತ್ತಾರೆ, 'ಈ ದೇಹದಿಂದ ಬಿಡುಗಡೆ ಸಿಕ್ಕಿದರೆ ಸಾಕು' ಎಂದು. ಆಗ ಆ ಸಮಯದಲ್ಲಿ ಸಹಿ ಮಾಡಿಬಿಡುತ್ತಾರೆ.

# ಅದರ ಮೊದಲು ಮಾಡು 'ನನ್ನ' ನೆನಪು!

**ಪ್ರಶ್ನಕರ್ತ:** ದಾದಾ, ಹೀಗೆಂದು ಕೇಳಿದ್ದೇನೆ, ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೋ ಅವರಿಗೆ ನಂತರ ಅದೇ ರೀತಿಯಲ್ಲಿ ಏಳು ಜನ್ಮ ಉಂಟಾಗುತ್ತದೆ ಎಂದು, ಈ ಮಾತು ಸತ್ಯವೇ?

**ದಾದಾಶ್ರೀ :** ಯಾವ ಸಂಸ್ಕಾರಕ್ಕೆ ಒಳಗಾಗಿರುವುದೋ, ಅದು ಏಳು-ಎಂಟು ಜನ್ಮಗಳ ನಂತರ ಹೋಗುತ್ತದೆ. ಆದುದರಿಂದ ಅಂತಹ ಕೆಟ್ಟ ಸಂಸ್ಕಾರಕ್ಕೆ ಬೀಳದಂತೆ ನೋಡಿಕೊಳ್ಳಬೇಕು. ಕೆಟ್ಟ ಸಂಸ್ಕಾರದಿಂದ ದೂರ ಉಳಿದುಬಿಡಬೇಕು. ಹೌದು, ಈ ಜೀವನದಲ್ಲಿ ಎಷ್ಟು ಬೇಕಾದರೂ ದುಃಖ ಬಂದರೂ ಕೂಡಾ ಸಹಿಸಿಕೊಳ್ಳಿ ಆದರೆ ಗುಂಡು ಹಾರಿಸಿಕೊಂಡು ಸಾಯಬೇಡಿ, ಆತ್ಮಹತ್ಯೆ ಮಾಡಿಕೊಳ್ಳಬೇಡಿ. ಆದ್ದರಿಂದಲೇ ವಡೋದರಾ ಪಟ್ಟಣದಲ್ಲಿ ಕೆಲವು ವರ್ಷಗಳ ಹಿಂದೆ ಎಲ್ಲರಿಗೂ ಹೇಳಲಾಗಿತ್ತು ಏನೆಂದರೆ, ಆತ್ಮಹತ್ಯೆ ಮಾಡಿಕೊಳ್ಳುವಂತೆ ಅನ್ನಿಸಿದಾಗ ನನ್ನನ್ನು ನೆನಪು ಮಾಡಿಕೊಳ್ಳಿ ಹಾಗೂ ನನ್ನ ಬಳಿಗೆ ಬಂದು ಬಿಡಿ. ಕೆಲವು ಮನುಷ್ಯರು ಇರುತ್ತಾರಲ್ಲವೇ, ಅಪಾಯಕಾರಿ ಮನುಷ್ಯರು, ಅವರಿಗೆ ಮೊದಲೇ ಹೇಳಿರಬೇಕು. ಆಗ ಅವರು ನನ್ನ ಬಳಿಗೆ ಬಂದರೆ, ಅವರಿಗೆ ತಿಳುವಳಿಕೆ ಹೇಳಬಹುದು. ಇದರಿಂದ ಮುಂದಿನ ದಿನಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿರುವವರನ್ನು ನಿಲ್ಲಿಸಬಹುದು. 1951ರ ನಂತರ ಎಲ್ಲರಿಗೂ ಸೂಚನೆ ನೀಡಲಾಗಿತ್ತು ಅದೇನೆಂದರೆ, ಯಾರಿಗಾದರು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಸಂದರ್ಭ ಬಂದಾಗ ನನ್ನನ್ನು ಭೇಟಿಮಾಡಿ, ನಂತರ ಮಾಡಿಕೊಳ್ಳುವ ವಿಚಾರಮಾಡಿ. ಯಾರಾದರು ನನಗೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಉಂಟಾಗಿದೆ ಎಂದು ಹೇಳಲು ಬಂದರೆ ಅವರಿಗೆ ನಾವು, ಅಕ್ಕಪಕ್ಕದ 'Circle', 'Causes'ಗಳಿಂದಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕಾದ ಅವಶ್ಯಕತೆಯಾದರೂ ಏನಿದೆ? ಎಂದು, ಎಲ್ಲಾ ಒಳಿತು-ಕೆಡಕುಗಳನ್ನು ಅವರಿಗೆ ಅರ್ಥವಾಗುವಂತೆ ತಿಳಿಸಿಕೊಟ್ಟು, ಅವರನ್ನು ಆ ವಿಚಾರದಿಂದ ಹೊರಬರುವಂತೆ ಮಾಡಲಾಗುತ್ತಿತ್ತು.

# ಆತ್ಮಹತ್ಯೆಯ ಫಲ!

**ಪ್ರಶ್ನಕರ್ತ:** ಯಾರಾದರು ಆತ್ಮಹತ್ಯೆ ಮಾಡಿಕೊಂಡರೆ, ಆಗ ಅವರು ಯಾವ ಗತಿಗೆ ಹೋಗುತ್ತಾರೆ? ಭೂತ, ಪ್ರೇತಗಳಾಗುತ್ತಾರೆಯೇ?

**ದಾದಾಶ್ರೀ:** ಆತ್ಮಹತ್ಯೆ ಮಾಡಿಕೊಂಡರೆ ಆಗ ಪ್ರೇತವಾಗುತ್ತಾರೆ ಹಾಗೂ ಪ್ರೇತವಾಗಿ ಅಲೆದಾಡ ಬೇಕಾಗುತ್ತದೆ. ಆದುದರಿಂದ, ಆತ್ಮಹತ್ಯೆಯನ್ನು ಮಾಡಿಕೊಂಡರೆ ಇನ್ನು ಹೆಚ್ಚಿನ

ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಒಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವುದರಿಂದ, ಅದರ ನಂತರ ಎಷ್ಟೋ ಜನ್ಮಗಳವರೆಗೆ ಪುನರಾವರ್ತನೆ ಆಗುತ್ತಲೇ ಇರುತ್ತದೆ! ಅಲ್ಲದೆ ಈಗ ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಅವರು ಅದೇನೂ ಹೊಸದಾಗಿ ಮಾಡುತ್ತಿಲ್ಲ. ಹಿಂದೆಯೂ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ, ಅದು ಮತ್ತೆ ಈಗ ಮರುಕಳಿಸಿದೆ. ಈಗ ಯಾರು ಆತ್ಮಹತ್ಯೆ ಮಾಡಿ ಕೊಳ್ಳುತ್ತಾರೆ, ಅವರಿಗೆ ಅದು ಹಿಂದಿನ ಆತ್ಮಹತ್ಯೆಯ ಕರ್ಮದ ಫಲವಾಗಿ ಬಂದಿದೆ. ಹಾಗಾಗಿ ತನ್ನಿಂದ ತಾನೇ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಾರೆ. ಅದು ಯಾವ ರೀತಿಯಲ್ಲಿ ಮರುಕಳಿಸುತ್ತದೆ ಎಂದರೆ, ಮತ್ತೆ-ಮತ್ತೆ ಹಾಗೆಯೇ ಮಾಡುತ್ತಾ ಬರುತ್ತಿರುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುವುದಲ್ಲದೆ, ಆತ್ಮಹತ್ಯೆಯ ನಂತರ ಅವಗತಿಯು ಪ್ರಾಪ್ತಿಯಾಗುವುದು. ಅವಗತಿ (ಅಂತರಪಿಶಾಚಿ) ಎಂದರೆ ದೇಹವಿಲ್ಲದೆ ಅಲೆದಾಡುತ್ತಿರುವುದು. ಆದರೆ ಭೂತ ಬೇರೆ, ಭೂತವಾಗುವುದು ಅಷ್ಟು ಸುಲಭವಿಲ್ಲ. ಭೂತ ಎಂದರೆ ದೇವಗತಿಯ ಅವತಾರವಾಗಿದೆ, ಅದು ಅಷ್ಟು ಸುಲಭವಾದ ವಿಷಯವಲ್ಲ. ಭೂತ ಅಂದರೆ, ಯಾರು ಇಲ್ಲಿ ಮೊದಲು ಕಠೋರ ತಪಸ್ಸನ್ನು ಮಾಡಿರುತ್ತಾರೆ, ಆದರೆ ಅದನ್ನು ಅಜ್ಞಾನದಿಂದ ಮಾಡಿರುತ್ತಾರೆ. ಅಂಥವರು ಭೂತವಾಗುತ್ತಾರೆ. ಅದೇ ಪ್ರೇತ ಎನ್ನುವುದು ಬೇರೆಯೇ ವಿಚಾರವಾಗಿದೆ.

## ವಿಕಲ್ಪ ಇಲ್ಲದೆ ಜೀವಿಸಲು ಸಾಧ್ಯವಿಲ್ಲ!

**ಪ್ರಶ್ನಕರ್ತ:** ಆತ್ಮಹತ್ಯೆಯ ವಿಚಾರವು ಯಾಕೆ ಬರುತ್ತದೆ?

**ದಾದಾಶ್ರೀ:** ಅದೇನೆಂದರೆ ಒಳಗೆ ವಿಕಲ್ಪವು ಅಂತ್ಯವಾಗಿಬಿಟ್ಟಿರುತ್ತದೆ. ಎಲ್ಲವೂ ವಿಕಲ್ಪದ ಆಧಾರದ ಮೇಲೆ ಜೀವಿಸುವುದಾಗಿದೆ. ವಿಕಲ್ಪವು ಅಂತ್ಯಗೊಂಡರೆ ನಂತರ ಇನ್ನು ಏನು ಮಾಡಬೇಕು ಎಂದು ಗೋಚರಿಸುವುದಿಲ್ಲ, ಇದರಿಂದಾಗಿ ಆತ್ಮಹತ್ಯೆಯ ವಿಚಾರವನ್ನು ಮಾಡುತ್ತಾರೆ. ಹಾಗಾಗಿ ಈ ವಿಕಲ್ಪವೂ ಕೂಡಾ ಉಪಯೋಗಕ್ಕೆ ಬರುವಂತದ್ದೇ ಆಗಿದೆ!

ಸಹಜವಾಗಿ ಬರುವಂತಹ ವಿಚಾರಗಳು ನಿಂತು ಹೋದರೆ, ಆಗ ಇಂತಹದೆಲ್ಲಾ ಕೆಟ್ಟ ವಿಚಾರಗಳು ಬರುತ್ತವೆ. ವಿಕಲ್ಪವು ನಿಂತು ಹೋಯಿತೆಂದರೆ ಸಹಜವಾಗಿಯೇ ಬರುತ್ತಿದ್ದ ವಿಚಾರಗಳು ನಿಂತು ಹೋಗುತ್ತವೆ, ಗಾಢವಾದ ಕತ್ತಲು ಆವರಿಸಿಬಿಡುತ್ತದೆ, ನಂತರ ಏನೂ ಗೋಚರಿಸುವುದಿಲ್ಲ! ಸಂಕಲ್ಪ ಎಂದರೆ 'ನನ್ನದು' ಹಾಗೂ ವಿಕಲ್ಪ ಎಂದರೆ 'ನಾನು', ಈ ಎರಡೂ ಮರೆಯಾದರೆ, ಆಗ ಸಾಯುವ ವಿಚಾರವು ಬರುತ್ತದೆ.

## ಆತ್ಮಹತ್ಯೆಗೆ ಕಾರಣಗಳು!

**ಪ್ರಶ್ನಕರ್ತ:** ಇದು ಅಭ್ಯಾಸವಾಗಿ ಬಿಟ್ಟಿರುವುದೇ, ಆತ್ಮಹತ್ಯೆಯನ್ನು ಮಾಡಿಕೊಳ್ಳುವುದರ root-cause (ಮೂಲ ಕಾರಣ) ಏನು?

**ದಾದಾಶ್ರೀ:** ಆತ್ಮಹತ್ಯೆಯ root-cause (ಮೂಲ ಕಾರಣ), ಅವರು ಯಾವುದೋ ಜನ್ಮದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ಅದರ ಪುನರಾವರ್ತನೆ ಏಳು ಜನ್ಮಗಳವರೆಗೆ ಇರುತ್ತದೆ. ಹೇಗೆ ನಾವು ಚೆಂಡನ್ನು ಮೂರು ಅಡಿ ಎತ್ತರದಿಂದ ಕೆಳಗೆ ಹಾಕಿದರೆ ಅದು ಎರಡೂವರೆ ಅಡಿಯಷ್ಟು ಜಿಗಿದು, ಮತ್ತೆ ಒಂದು ಅಡಿ ಎತ್ತರಕ್ಕೆ ಇಳಿದು, ನಂತರ ಪುಟಿಯುತ್ತಾ ಕೆಳಗೆ ಬರುತ್ತದೆಯಲ್ಲಾ, ಹಾಗೆ. ಈ ರೀತಿಯಲ್ಲಿ ಆಗುವುದೋ ಇಲ್ಲವೋ? ಅಲ್ಲಿ ಚೆಂಡು ಮತ್ತೆ ಮೂರು ಅಡಿಯ ಎತ್ತರಕ್ಕೆ ಪುಟಿಯುವುದಿಲ್ಲ. ಆದರೆ, ಎರಡನೇ ಬಾರಿಗೆ ತನ್ನಷ್ಟಕ್ಕೆ ಸ್ವಾಭಾವಿಕವಾಗಿಯೇ ಎರಡೂವರೆ ಅಡಿಯಷ್ಟು ಮೇಲೆ ಬರುತ್ತದೆ, ಮೂರನೆಯ ಬಾರಿ ಎರಡು ಅಡಿಯಷ್ಟು ಮೇಲೆಕ್ಕೆ ಪುಟಿದು ಬೀಳುತ್ತದೆ, ನಾಲ್ಕನೆಯ ಬಾರಿ ಒಂದೂವರೆ ಅಡಿಯಷ್ಟು ಪುಟಿಯುವುದು. ನಂತರ ಒಂದು ಅಡಿ ಎತ್ತರದಿಂದ ಪುಟಿದು ಬೀಳುವುದು. ಹೀಗೆ ಗತಿಯು ನಿಯಮಕ್ಕೆ ಬರುತ್ತದೆ. ಇದೆಲ್ಲಾ ಪ್ರಕೃತಿಯ ನಿಯಮವಾಗಿದೆ. ಮೊದಲಿಗೆ ಆತ್ಮಹತ್ಯೆ ಮಾಡಿಕೊಂಡಾಗ, ಅದು ಇನ್ನೂ ಏಳು ಜನ್ಮಗಳವರೆಗೆ ಹೀಗೆ ನಡೆಯುತ್ತಲೇ ಇರುತ್ತದೆ. ಮೊದಲ ಬಾರಿಗೆ ಮಾಡಿಕೊಂಡ ಬಳಿಕ ನಡೆಯುವುದೆಲ್ಲವನ್ನು ಉಳಿದಿರುವ ಹೆಚ್ಚು-ಕಡಿಮೆಯ ಪರಿಣಾಮಗಳ ಪರಿಸ್ಥಿತಿಗೆ ಆಧರಿಸಿ ಕೊಂಡಿರುವುದನ್ನು ನಾವು ಕಾಣಬಹುದು, ಸಣ್ಣ ರೀತಿಯ ಪರಿಣಾಮದ್ದಾಗಿದ್ದರೆ, ಆಗ ಅನಾವಶ್ಯಕವಾದ ಸಣ್ಣ ಪ್ರಸಂಗಕ್ಕೆ ಒಳಪಟ್ಟು ಅಂತ್ಯಗೊಳ್ಳುತ್ತದೆ.

## ಅಂತಿಮ ಕ್ಷಣಗಳಲ್ಲಿ...

ಮರಣದ ಸಮಯದಲ್ಲಿ, ಜೀವನವಿಡೀ ಏನೆಲ್ಲಾ ಮಾಡಲಾಗಿತ್ತೋ, ಅದರ ಬ್ಯಾಲೆನ್ಸ್ ಶೀಟ್ ಬರುತ್ತದೆ. ಆ ಬ್ಯಾಲೆನ್ಸ್ ಶೀಟ್, ಇನ್ನೂ ಕಾಲು ಗಂಟೆ ಉಳಿದಿರುವಲ್ಲಿಯವರೆಗೂ ಲೆಕ್ಕಾಚಾರವನ್ನು ಮಾಡಿ-ಮಾಡಿ, ನಂತರ ದೇಹದ ಬಂಧನವಾಗುತ್ತದೆ. ಆಗ ಎರಡು ಕಾಲಿನಿಂದ ನಾಲ್ಕು ಕಾಲುಗಳಾಗಿ ಆಗಿಬಿಡುತ್ತದೆ. ಇಲ್ಲಿ ರೊಟ್ಟಿ ತಿನ್ನುತ್ತಿದ್ದವರು, ಅಲ್ಲಿ ರೆಂಬೆ-ಕೊಂಬೆಗಳನ್ನು ತಿನ್ನಬೇಕಾಗಿ ಬರುತ್ತದೆ. ಇದೆಲ್ಲಾ ಕಲಿಯುಗದ ಮಹಿಮೆಯಾಗಿದೆ. ಅಲ್ಲದೆ ಈ ಕಲಿಯುಗ, ಮನುಷ್ಯ ಜೀವನ ಮತ್ತೆ ಸಿಗುವುದು ಬಹಳ ಕಷ್ಟವಾಗಿರುವಂತಹ ಕಾಲವಾಗಿದೆ...!

**ಪ್ರಶ್ನಕರ್ತ:** ಅಂತಿಮ ಸಮಯದಲ್ಲಿ ಯಾರಿಗೆ ಗೊತ್ತಿರುತ್ತದೆ, ಯಾವಾಗ ಈ ಕಿವಿ ಕೇಳುವುದು ನಿಂತುಹೋಗುತ್ತದೆ ಎಂದು?

**ದಾದಾಶ್ರೀ:** ಅಂತ್ಯಕಾಲದಲ್ಲಿ ಏನೇನು ಪುಸ್ತಕದಲ್ಲಿ ಜಮಾವಾಗಿರುವುದೋ, ಅದೆಲ್ಲವೂ ಬರುತ್ತದೆ. ಜೀವನದ ಕೊನೆಗಳಿಗೆಯಲ್ಲಿ ಯಾವ ಗುಣ ಸ್ಥಾನವನ್ನು ಹೊಂದಲಾಗುತ್ತದೆ, ಎನ್ನುವುದೇ ಆ ಬ್ಯಾಲೆನ್ಸ್ ಶೀಟ್ ಆಗಿದೆ. ಅಲ್ಲದೆ ಈ ಬ್ಯಾಲೆನ್ಸ್ ಶೀಟ್ ಸಂಪೂರ್ಣ ಜೀವನದ್ದಲ್ಲ, ಅದು ಜನಿಸಿದ ನಂತರ, ಅದೇ ಜನ್ಮದ ಮಧ್ಯಭಾಗ (ಆಯುಷ್ಯದ ಮಧ್ಯಾವಧಿ ಭಾಗ) ಬ್ಯಾಲೆನ್ಸ್ ಶೀಟ್ ಆಗಿರುತ್ತದೆ. ಆದರೆ, ನಮ್ಮಲ್ಲಿ ಬಹಳ ಮಂದಿ ಮರಣದ ಗಳಿಗೆಯಲ್ಲಿ ಅವರ ಕಿವಿಯ ಹತ್ತಿರ ಹೋಗಿ 'ರಾಮ, ರಾಮ ಹೇಳಿ' ಎಂದು ಹೇಳಿಸಲು ಪ್ರಯತ್ನಿಸುತ್ತಾರೆ. ಅಯ್ಯೋ ಮೂರ್ಖ! ರಾಮ ಎಂದು ಯಾರಿಗೆ ಹೇಳಿಸಲು ಹೋಗುವೆ? ಆ ರಾಮನಂತೂ ಯಾವಾಗಲೋ ಹೋಗಿಯಾಗಿದೆ!

ಜನರಿಗೆ ತಿಳಿಸಿಕೊಡಲಾಗಿದೆ, ಕೊನೆಗಳಿಗೆಯಲ್ಲಿರುವವರಿಗೆ ದೇವರ ಸ್ಮರಣೆಯಂತಹ ಏನ್ನನ್ನಾದರೂ ಮಾಡಿ ಎಂದು. ಆದರೆ, ಆ ಸಮಯದಲ್ಲಿ ಅವರಗೆ ಪುಣ್ಯವಿದ್ದರೆ, ಆಗ (ದೇವರ ಸ್ಮರಣೆಯಲ್ಲಿ ತೊಡಗಿಕೊಳ್ಳುತ್ತಾರೆ) ಅಡ್ಜಸ್ಟ್ ಆಗುತ್ತದೆ. ಇಲ್ಲದೆ ಹೋದರೆ, ಇನ್ನೂ ಮಗಳ ಮದುವೆಯ ಚಿಂತೆಯಲ್ಲೇ ಇರುತ್ತಾರೆ; ಮೂವರು ಹೆಣ್ಣುಮಕ್ಕಳಿಗೆ ಮದುವೆಯಾಗಿದೆ ಆದರೆ ನಾಲ್ಕನೆಯ ಚಿಕ್ಕಮಗಳ ಮದುವೆ ಮಾಡುವುದು ಬಾಕಿ ಉಳಿಯಿತು ಎಂಬ ಯೋಚಯಲ್ಲಿ ಇರುತ್ತಾರೆ. ಹೀಗೆ ಏನು ಸಂಗ್ರಹಣೆ ಮಾಡಿಕೊಳ್ಳಲಾಗಿತ್ತು ಅದು ಆಗ ಎದುರಿಗೆ ಬಂದು ನಿಲ್ಲುತ್ತದೆ ಹಾಗೂ ಚಿಕ್ಕಂದಿನಲ್ಲಿ ಮಾಡಿರುವ ಒಳಿತು ಜೊತೆಯಲ್ಲಿ ಬರುವುದಿಲ್ಲ, ಆದರೆ ಇಳಿವಯಸ್ಸಿನಲ್ಲಿ ಮಾಡಿದ ಒಳ್ಳೆಯ ಕೆಲಸಗಳು ಜೊತೆಯಲ್ಲಿ ಬರುತ್ತವೆ.

## ಕ್ಷಣ, ಕ್ಷಣವೂ ಭಾವ ಮರಣ!

**ಪ್ರಶ್ನಕರ್ತ:** ದೇಹದ ಮರಣವೆಂದು ಹೇಳಬಹುದಲ್ಲವೇ?

**ದಾದಾಶ್ರೀ:** ಅಜ್ಞಾನಿ ಮನುಷ್ಯರಿಗೆ ಎರಡು ರೀತಿಯ ಮರಣವಾಗುತ್ತದೆ. ನಿತ್ಯವೂ ಭಾವ ಮರಣವಾಗುತ್ತಲೇ ಇರುತ್ತದೆ. ಕ್ಷಣ-ಕ್ಷಣವೂ ಭಾವ ಮರಣವಾಗಿದೆ ಹಾಗೂ ಕೊನೆಗೆ ದೇಹದ ಮರಣವಾಗುತ್ತದೆ. ಆದರೆ ಅಲ್ಲಿ ಪ್ರತಿ ನಿತ್ಯವೂ ಅವರ ಮರಣವಾಗಿದೆ, ರೋಧನೆಯು ಪ್ರತಿನಿತ್ಯದ್ದಾಗಿದೆ. ಕ್ಷಣ-ಕ್ಷಣವೂ ಭಾವ ಮರಣವಾಗಿದೆ. ಹಾಗಾಗಿಯೇ ಕೃಪಾಲುದೇವರು ಬರೆದಿರುವುದು ಏನೆಂದರೆ;

'ಕ್ಷಣ ಕ್ಷಣ ಭಯಂಕರ ಭಾವ ಮರನೆ ಕ ಅಹೋ ರಾಚಿ ರಾಹ್ಯೋ!'

ಎಲ್ಲರೂ ಜೀವಿಸುತ್ತಿರುವುದು ಮರಣ ಹೊಂದಲಿಕ್ಕಾಗಿಯೋ ಅಥವಾ ಯಾಕಾಗಿ?

## ಸಮಾಧಿ ಮರಣ!

ಆದುದರಿಂದ, ಮೃತ್ಯುವಿಗೆ ಹೇಳಬೇಕೇನೆಂದರೆ, 'ನಿನಗೆ ಬೇಗ ಬರಬೇಕಿದ್ದರೆ ಬೇಗ ಬಾ, ತಡವಾಗಿ ಬರಬೇಕಿದ್ದರೆ ತಡವಾಗಿ ಬಾ ಆದರೆ, 'ಸಮಾಧಿ ಮರಣ'ವಾಗುವಂತೆ ಬಾ!'

ಸಮಾಧಿ ಮರಣ ಅಂದರೆ, ಆ ಸಮಯದಲ್ಲಿ ಆತ್ಮ ಬಿಟ್ಟು ಬೇರಾವುದೂ ನೆನಪೇ ಇರುವುದಿಲ್ಲ. ತನ್ನಯ ಸ್ವರೂಪ ಶುದ್ಧಾತ್ಮ ಎನ್ನುವುದು ಬಿಟ್ಟು ಬೇರೆಡೆಗೆ ದೃಷ್ಟಿಯೇ ಹೊರಳುವುದಿಲ್ಲ; ಮನಸ್ಸು-ಬುದ್ಧಿ-ಚಿತ್ತ-ಅಹಂಕಾರ, ಇವು ಯಾವುದರ ಅಡಚಣೆಯೂ ಇರುವುದಿಲ್ಲ! ನಿರಂತರ ಸಮಾಧಿ! ದೇಹದ ಉಪಾಧಿ ಇದ್ದರೂ, ಆ ಉಪಾಧಿಯು ತಾಗುವುದಿಲ್ಲ. ಆದರೆ ದೇಹವಂತೂ ಬಾಧಿಸದೆ ಇರುವುದಿಲ್ಲ ಅಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಕೇವಲ ಬಾಧೆ ನೀಡುವುದಷ್ಟೇ ಅಲ್ಲಾ ವ್ಯಾಧಿ ಕೂಡಾ ಇರುವುದು ಅಲ್ಲವೇ? ಜ್ಞಾನಿಗೆ ಉಪಾಧಿ ತಾಗುವುದಿಲ್ಲ, ವ್ಯಾಧಿ ಬಂದರೂ ಅದು ಸಹ ತಾಗುವುದಿಲ್ಲ. ಆದರೆ, ಅಜ್ಞಾನಿಗಳು ವ್ಯಾಧಿ ಇಲ್ಲದೆ ಹೋದರೂ, ವ್ಯಾಧಿಯನ್ನು ಆಹ್ವಾನಿಸುತ್ತಾರೆ! ಸಮಾಧಿ ಮರಣ ಎಂದರೆ, 'ನಾನು ಶುದ್ಧಾತ್ಮ' ಎಂಬ ಅರಿವು ಇರುವುದು! ನಮ್ಮ ಎಷ್ಟೋ ಮಹಾತ್ಮರಿಗೆ ಮರಣ ಹೊಂದುವ ಸಮಯದಲ್ಲಿ, 'ನಾನು ಶುದ್ಧಾತ್ಮ' ಎಂಬ ಅರಿವು ಸತತವಾಗಿ ಇರುವುದುಂಟು.

## ಗತಿಯ ಲಕ್ಷಣ!

**ಪ್ರಶ್ನಕರ್ತ:** ಮೃತ್ಯು ಸಮಯದಲ್ಲಿ ಅಂತಹದ್ದೇನಾದರೂ ಲಕ್ಷಣವಿದೆಯೇ ಅಥವಾ ಜೀವದ ಮುಂದಿನ ಗತಿ ಒಳ್ಳೆಯದಿದೆಯೋ ಇಲ್ಲವೋ ಎಂದು ಏನಾದರು ತಿಳಿಯಲಾಗುವುದೇ?

**ದಾದಾಶ್ರೀ:** ಆ ಸಮಯದಲ್ಲಿ ಏನಾದರು, 'ನನ್ನ ಮಗಳ ಮದುವೆ ಆಗುವುದೋ ಇಲ್ಲವೋ? ಇನ್ನೂ ಆಗಲಿಲ್ಲ.' ಹೀಗೆಲ್ಲಾ ಮನೆಯ ವಿಚಾರದಲ್ಲಿ ತಲೆಕೆಡಿಸಿಕೊಳ್ಳುತ್ತಾ ಉಪಾಧಿಗೆ ಒಳಗಾಗುತ್ತಿದ್ದರೆ, ಆಗ ತಿಳಿಯಬೇಕು ಅವರ ಗತಿಯಾಗಲಿದೆ ಅಧೋಗತಿ. ಅಲ್ಲದೆ, ಆತ್ಮದಲ್ಲಿ ಇರುವುದೆಂದರೆ ಭಗವಂತನೊಂದಿಗೆ ಇರುವುದಾಗಿದೆ, ಆಗ ಒಳ್ಳೆಯ ಗತಿಯು ಪ್ರಾಪ್ತಿಯಾಗುತ್ತದೆ.

**ಪ್ರಶ್ನಕರ್ತ:** ಆದರೆ, ಪ್ರಜ್ಞಾಹೀನರಾಗಿದ್ದರೆ ಆಗ?

**ದಾದಾಶ್ರೀ:** ಪ್ರಜ್ಞಾಹೀನರಾಗಿದ್ದರೂ, ಒಳಗೆ ಜ್ಞಾನವಿದ್ದರೆ ಸಾಕು, ನಡೆಯುತ್ತದೆ. ಈ ಜ್ಞಾನವನ್ನು ತೆಗೆದುಕೊಂಡಿರಬೇಕು. ಆಗ ಪ್ರಜ್ಞಾಹೀನರಾಗಿದ್ದರೂ ಸಹ ನಡೆಯುತ್ತದೆ.

## ಮೃತ್ಯುವಿನ ಭಯ!

**ಪ್ರಶ್ನಕರ್ತ:** ಯಾಕೆ ಎಲ್ಲರಲ್ಲಿಯೂ ಈ ಮೃತ್ಯುವಿನ ಭಯವು ಇರುತ್ತದೆ?

**ದಾದಾಶ್ರೀ:** ಮೃತ್ಯುವಿನ ಭಯವು ಅಹಂಕಾರಕ್ಕೆ ಇರುತ್ತದೆ, ಆತ್ಮಕ್ಕೆ ಎಂದೂ ಇರುವುದಿಲ್ಲ. ಅಹಂಕಾರಕ್ಕೆ ಭಯವಿರುತ್ತದೆ ಅದೇನೆಂದರೆ, ನಾನು ಮರಣ ಹೊಂದುತ್ತೇನೆ, ನಾನು ನಿಧನ ಹೊಂದುತ್ತೇನೆ ಎಂದು.

## ಆ ದೃಷ್ಟಿಯಿಂದ ನೋಡಿ ಸರಿಯಾಗಿ!

ಭಗವಂತನ ದೃಷ್ಟಿಯಲ್ಲಿ ಈ ಜಗತ್ತು ಹೇಗೆ ನಡೆಯುತ್ತದೆ? ಎಂದಾಗ, ಏನು ಹೇಳಲಾಗುವುದೆಂದರೆ, ಅವನ ದೃಷ್ಟಿಯಿಂದಂತೂ ಯಾರೂ ಮರಣ ಹೊಂದುವುದೇ ಇಲ್ಲ. ಭಗವಂತನ ಯಾವ ದೃಷ್ಟಿ ಇದೆಯೋ ಆ ದೃಷ್ಟಿಯು ನಿಮಗೆ ಪ್ರಾಪ್ತಿಯಾದರೆ, ಆ ದೃಷ್ಟಿಯನ್ನು ಒಂದು ದಿನದ ಮಟ್ಟಿಗೆ ನಿಮಗೆ ನೀಡಿದರೆ, ಆಗಿಲ್ಲಿ ಎಷ್ಟೇ ಜನರು ಮರಣ ಹೊಂದಿದರೂ ಕೂಡಾ, ನಿಮ್ಮಲ್ಲಿ ಯಾವ ಪರಿಣಾಮವೂ ಉಂಟಾಗುವುದಿಲ್ಲ. ಅದಕ್ಕೆ ಕಾರಣವೇನೆಂದರೆ, ಭಗವಂತನ ದೃಷ್ಟಿಯಲ್ಲಿ ಯಾರೂ ಮರಣ ಹೊಂದುವುದೇ ಇಲ್ಲ.

## ಜೀವವಾಗಿದ್ದರೆ ಮರಣ, ಶಿವನಾಗಿದ್ದರೆ ಅಮರ!

ಎಲ್ಲರೂ ಎಂದಾದರೊಮ್ಮೆ ಸೊಲ್ಯೂಷನ್ ತಂದುಕೊಳ್ಳಲೇ ಬೇಕಲ್ಲವೇ? ಜೀವನ-ಮರಣದ ಸೊಲ್ಯೂಷನ್ ದೊರಕಿಸಿಕೊಳ್ಳುವುದು ಬೇಡವೇ? ನಿಜವಾಗಿ ನೋಡಿದರೆ, 'ತಾನು ಮರಣ ಹೊಂದುವುದೂ ಇಲ್ಲ ಹಾಗೂ ತಾನು ಜೀವಿಸುವುದೂ ಇಲ್ಲ.' ಇದೆಲ್ಲವೂ ಭಾವನೆಯಿಂದಾಗಿರುವ ದೋಷವಾಗಿದೆ. ಅಲ್ಲದೆ, 'ತನ್ನನು ಸ್ವತಃ ಜೀವವೆಂದು ನಂಬಿಕೊಂಡು ಕುಳಿತಿರುವುದಾಗಿದೆ. ತನ್ನಯ ಸ್ವರೂಪ, ಶಿವ ಸ್ವರೂಪವಾಗಿದೆ.' ಆದರೆ ಅದು ತನಗೆ ತಿಳಿಯಲಾಗದೆ, ತಾನು ಜೀವ ಸ್ವರೂಪವೆಂದು ನಂಬಿಕೊಂಡಿರುವುದಾಗಿದೆ.

**ಪ್ರಶ್ನಕರ್ತ:** ಹೀಗೆಂದು ಪ್ರತಿಯೊಂದು ಜೀವಿಗೂ ತಿಳಿದುಬಿಟ್ಟರೆ ಆಗ ಈ ಜಗತ್ತು ನಡೆಯುವುದಿಲ್ಲ ಅಲ್ಲವೇ?

**ದಾದಾಶ್ರೀ:** ಹೌದು, ನಡೆಯುವುದೇ ಇಲ್ಲ! ಆದರೆ ಪ್ರತಿಯೊಬ್ಬರಿಗೂ ತಿಳಿಯಲು ಹಾಗೂ ಅರಿತುಕೊಳ್ಳಲಾಗುವಂಥದ್ದಲ್ಲ! ಇದೆಲ್ಲವೂ puzzle ಆಗಿದೆ. ಎಲ್ಲಾ ಅತ್ಯಂತ ಗೂಢ, ಅತ್ಯಂತ ನಿಗೂಢವಾಗಿದೆ (ಗುಪ್ತತಮ್). ಇದು ಗುಪ್ತತಮ್ ಆಗಿರುವುದರಿಂದಲೇ, ಈ ಎಲ್ಲವೂ ಹೇಗೆಂದರೆ ಹಾಗೆ, ಪೊಳ್ಳು ಜಗತ್ತಿನಲ್ಲಿ ನಡೆಯುತ್ತಾ ಸಾಗುತಲಿದೆ.

## ಜೀವಿಸುವವ-ನಿಧನ ಹೊಂದುವವ, ಯಾರು?

ಜೀವಿಸುವುದು-ನಿಧನಹೊಂದುವುದು ಆತ್ಮವಲ್ಲ. ಆತ್ಮ ಪರ್ಮನೆಂಟ್ ವಸ್ತುವಾಗಿದೆ. ಈ ಜನ್ಮ-ಮರಣವು 'egoism'ಗೆ ಆಗಿದೆ. ಇಗೋಯಿಸಮ್ ಜನ್ಮ ಪಡೆಯುತ್ತದೆ ಹಾಗೂ ಇಗೋಯಿಸಮ್ ಮರಣ ಹೊಂದುತ್ತದೆ. ನಿಜವಾದ ರೀತಿಯಲ್ಲಿ ಆತ್ಮವು ಮರಣ ಹೊಂದುವುದೇ ಇಲ್ಲ. ಈ ಅಹಂಕಾರದ ಜನ್ಮವಾಗುತ್ತದೆ ಮತ್ತು ಅಹಂಕಾರದ ಮರಣವಾಗುತ್ತದೆ.

## ಮೃತ್ಯು ಸಮಯದಲ್ಲಿ,ಮೊದಲು ಹಾಗು ನಂತರ... ಆತ್ಮದ ಸ್ಥಿತಿ

### ಜನ್ಮ-ಮರಣ ಎಂದರೆ ಏನು?

**ಪ್ರಶ್ನಕರ್ತ:** ಜನ್ಮ-ಮರಣ ಎಂದರೇನು?

**ದಾದಾಶ್ರೀ:** ಜನ್ಮ-ಮರಣವನ್ನು ಹೊಂದಲಾಗುತ್ತದೆ, ನಾವು ನೋಡುವವರಾಗಿದ್ದೇವೆ ಅದು ಕೇಳಿ ತಿಳಿಯುವಂಥದ್ದಲ್ಲ. ಜನ್ಮ-ಮರಣ ಅಂದರೆ, ಅದು ಅವರವರ ಕರ್ಮದ ಲೆಕ್ಕಾಚಾರವನ್ನು ಪೂರ್ಣಗೊಳಿಸುವುದಾಗಿದೆ. ಒಂದು ಅವತಾರದಲ್ಲಿ ಯಾವ ಲೆಕ್ಕಾಚಾರವನ್ನು ಕಟ್ಟಿಕೊಳ್ಳಲಾಗಿತ್ತೋ, ಅವು ಪೂರ್ಣವಾಯಿತೆಂದರೆ, ಆಗ ಮರಣಹೊಂದಲಾಗುತ್ತದೆ.

## ಮೃತ್ಯು ಅಂದರೆ ಏನು?

**ಪ್ರಶ್ನಕರ್ತ:** ಈ ಮೃತ್ಯು ಅಂದರೆ ಏನು?

**ದಾದಾಶ್ರೀ:** ಮೃತ್ಯು ಅಂದರೆ, ಈ ಹೊಸ ಅಂಗಿಯನ್ನು ಹೊಲಿಸಿಕೊಂಡರೆ, ಆಗ ಅದರ ಜನ್ಮವಾದಂತೆ ಹಾಗೂ ಹೊಲಿಸಿದ ಹೊಸ ಅಂಗಿಯು ಹಳೆಯದಾಗಿ ಹರಿದುಹೋದರೆ ಮೃತ್ಯುಹೊಂದಿದಂತೆ! ಯಾವುದೇ ವಸ್ತು ಜನಿಸಿದರೆ ಅದರ ಮೃತ್ಯು ಅವಶ್ಯವಾಗಿ ಆಗಲೇ ಬೇಕಾಗಿದೆ. ಅಲ್ಲದೆ, ಆತ್ಮವು ಅಜನ್ಮ-ಅಮರವಾಗಿದೆ. ಅದಕ್ಕೆ ಮೃತ್ಯು ಎನ್ನುವುದೇ ಇರುವುದಿಲ್ಲ. ಆದುದರಿಂದ ಯಾವುದೆಲ್ಲಾ ವಸ್ತುಗಳ ಜನ್ಮವಾಗುತ್ತದೆ, ಅವುಗಳ ಮೃತ್ಯು ಅಗತ್ಯವಾಗಿ ಆಗುತ್ತದೆ ಹಾಗೂ ಎಲ್ಲಿ ಮೃತ್ಯು ಉಂಟಾಗುವುದೋ, ಅಲ್ಲಿ ಮತ್ತೆ ಜನ್ಮ ಉಂಟಾಗುತ್ತದೆ. ಹಾಗಾಗಿ ಜನ್ಮದ ಜೊತೆಯಲ್ಲಿ ಮೃತ್ಯು joint ಆಗಿದೆ. ಜನ್ಮವಾದರೆ, ಆಗ ಅಲ್ಲಿ ಮೃತ್ಯು ಅಗತ್ಯವಾಗಿ ಆಗಲೇ ಬೇಕಾಗಿದೆ!

**ಪ್ರಶ್ನಕರ್ತ:** ಮೃತ್ಯು ಯಾಕಾಗಿ ಆಗುತ್ತದೆ?

**ದಾದಾಶ್ರೀ:** ಮೃತ್ಯು ಹೇಗೆಂದರೆ, ಈ ದೇಹದ ಜನ್ಮವಾಗುವುದು, ಒಂದು ಸಂಯೋಗವಾಗಿದೆ ಹಾಗೂ ಅದರ ವಿಯೋಗವಾದೆ ಇರಲು ಸಾಧ್ಯವೇ ಇಲ್ಲ! ಸಂಯೋಗವು ಸದಾ ವಿಯೋಗದ ಸ್ವಭಾವದ್ದೇ ಆಗಿರುತ್ತದೆ. ನಾವು ಸ್ಕೂಲಿಗೆ ಕಲಿಯಲು ಹೋಗಬೇಕೆಂದಾಗ, ಸ್ಕೂಲಿಗೆ ಹೋಗಲು ಪ್ರಾರಂಭ ಮಾಡುತ್ತೇವೋ ಇಲ್ಲವೋ, beginning? ನಂತರ ಅದರ end ಬರುತ್ತದೋ ಇಲ್ಲವೋ? ಹಾಗೆಯೇ ಪ್ರತಿಯೊಂದು ವಸ್ತುವೂ beginning ಹಾಗೂ end ಹೊಂದಿರಲೇ ಬೇಕಾಗಿದೆ. ಅರ್ಥವಾಗಲಿಲ್ಲವೇ ನಿಮಗೆ?

**ಪ್ರಶ್ನಕರ್ತ:** ಅರ್ಥವಾಯಿತು!

**ದಾದಾಶ್ರೀ:** ಈ ಎಲ್ಲಾ ವಸ್ತುಗಳು beginning-end ಹೊಂದಿರುತ್ತವೆ. ಅಲ್ಲದೆ, ಈ beginning ಹಾಗೂ end ಇರುವುದನ್ನು ತಿಳಿಯಲಾಗುತ್ತದೆ. ಹಾಗಾದರೆ ಇದನ್ನು ತಿಳಿಯುವವ ಯಾರು?

Beginning-end ಆಗುವ ವಸ್ತುಗಳು ಯಾವುದೆಲ್ಲಾ ಇವೆ, ಅವೆಲ್ಲವೂ Temporary ವಸ್ತುಗಳಾಗಿವೆ. ಯಾವುದರ beginning ಇರುವುದೋ, ಅದರ end ಕೂಡಾ ಇರುತ್ತದೆ, beginning ಆಯಿತೆಂದರೆ, ಅಲ್ಲಿ ಖಂಡಿತವಾಗಿ end ಇರಲೇ ಬೇಕು. ಇವೆಲ್ಲವೂ Temporary ವಸ್ತುಗಳಾಗಿವೆ, ಆದರೆ ಈ Temporary ಅನ್ನು ಅರಿಯುವವ ಯಾರು? ನೀವು, Permanent (ಶಾಶ್ವತ) ಆಗಿದ್ದೀರಿ. ಏಕೆಂದರೆ, ಆ ವಸ್ತುಗಳನ್ನು ನೋಡಿ ಅರಿತು,

Temporary ಎಂದು ಹೇಳುತ್ತಿರುವ ಕಾರಣದಿಂದಾಗಿ, ನೀವು Permanent ಆಗಿದ್ದೀರಿ. Temporary ವಸ್ತುಗಳನ್ನು Temporary ಎಂದು ಹೇಳಬೇಕಾದ ಅವಶ್ಯಕತೆಯೇ ಇರುವುದಿಲ್ಲ. Temporary ಸಾಪೇಕ್ಷ ಶಬ್ದವಾಗಿದೆ. Permanent ಅನ್ನುವುದು ಇದೆ ಎಂದಮೇಲೆ, Temporary ಕೂಡಾ ಇರಲೇ ಬೇಕು.

## ಮೃತ್ಯುವಿನ ಕಾರಣ!

**ಪ್ರಶ್ನಕರ್ತ:** ಹಾಗಾದರೆ ಮೃತ್ಯು ಯಾಕಾಗಿ ಬರುತ್ತದೆ?

**ದಾದಾಶ್ರೀ:** ಅದು ಬಂದೇ ಬರುತ್ತದೆ. ಜನ್ಮವಾದ ಬಳಿಕ, ಈ ಮನಸ್ಸು-ವಚನ-ಕಾಯ ಎಂಬ ಮೂರು battery ಗಳು ಇರುತ್ತವೆ, ಅವು ಗರ್ಭದಲ್ಲಿರುವಾಗಲಿಂದಲೇ effect (ಪರಿಣಾಮವನ್ನು) ತೋರುತಲಿರುತ್ತವೆ. ಆ effect ಪೂರ್ಣಗೊಳ್ಳುವುದು ಹೇಗೆಂದರೆ, 'battery'ಯಲ್ಲಿನ power (ಲೆಕ್ಕಾಚಾರ) ಬರಿದಾಗುವ ತನಕ ಆ 'battery'ಗಳು ಇರುತ್ತವೆ. ಆ ನಂತರ ಅವುಗಳು ನಿಷ್ಪ್ರಯೋಜಕವಾಗುತ್ತವೆ, ಇದನ್ನೇ ಮೃತ್ಯುವೆಂದು ಕರೆಯುವುದು. ಆದರೆ, ತನ್ನೊಳಗೆ ಮುಂದಿನ ಜನ್ಮಕ್ಕಾಗಿ ಹೊಸ 'battery'ಗಳನ್ನು charge ಮಾಡಿಕೊಳ್ಳಲಾಗುತ್ತದೆ. ಈ ರೀತಿಯಲ್ಲಿ, ಮುಂದಿನ ಜನ್ಮಕ್ಕಾಗಿ ಒಳಗೆ ಹೊಸ 'battery'ಗಳು, 'charge' ಆಗುತ್ತಲೇ ಇರುತ್ತವೆ ಹಾಗೂ ಹಳೆ 'battery'ಗಳು 'discharge' ಆಗುತಲಿರುತ್ತವೆ. ಇಲ್ಲಿ, 'charge–discharge' (ತುಂಬಿಸುವುದು-ಖಾಲಿಮಾಡುವುದು) ನಡೆಯುತ್ತಲೇ ಇರುತ್ತದೆ. ಇದಕ್ಕೆ ಕಾರಣವೇನೆಂದರೆ, ಅದು ಅವರ 'wrong belief' ಆಗಿರುತ್ತದೆ. ಅದರಿಂದಾಗಿ 'causes' (ಕಾರಣಗಳು) ಉತ್ಪನ್ನವಾಗುತ್ತವೆ. ಎಲ್ಲಿಯವರೆಗೆ 'wrong belief' ಇರುತ್ತದೆಯೋ, ಅಲ್ಲಿಯವರೆಗೆ ರಾಗ-ದ್ವೇಷಗಳಿಂದ 'causes' ಉತ್ಪನ್ನವಾಗುತ್ತವೆ ಹಾಗೂ ಆ 'wrong belief' ಬದಲಾಗಿ ಅಲ್ಲಿ 'right belief' ಕುಳಿತಾಗ, ರಾಗ-ದ್ವೇಷಗಳ 'causes' ಉತ್ಪನ್ನವಾಗುವುದಿಲ್ಲ.

## ಪುನರ್ಜನ್ಮ!

**ಪ್ರಶ್ನಕರ್ತ:** ಜೀವಾತ್ಮ ಮರಣ ಹೊಂದಿದ ಮೇಲೆ ಮತ್ತೆ ಬರುತ್ತದೆ ಅಲ್ಲವೇ?

**ದಾದಾಶ್ರೀ:** ಅದೇನೆಂದರೆ, Foreign ಜನರಲ್ಲಿ ತಿರುಗಿ ಬರುವುದು ಇಲ್ಲ, ಮುಸಲ್ಮಾನರಲ್ಲಿಯೂ ವಾಪಸು ಬರುವುದು ಇಲ್ಲ. ಆದರೆ ನಿಮಗೆ ಪುನಃ ಬರಬೇಕಾಗಿದೆ. ನಿಮ್ಮ ಭಗವಂತನಿಗೆ ಅದೆಷ್ಟು ಕರುಣೆ ಇರಬೇಕು, ಹಾಗಾಗಿ ನಿಮಗೆ ಮತ್ತೆ ಬರಬೇಕಾಗಿದೆ. ಇಲ್ಲಿ ಮೃತ್ಯು ಹೊಂದುತ್ತಲೇ ಅಲ್ಲಿ ಇನ್ನೊಂದು ಯೋನಿಯಲ್ಲಿ ಕುಳಿತು ಬಿಡುವುದು. ಆದರೆ, ಅವರಲ್ಲಿ ಪುನಃ ಬರುವುದಿಲ್ಲ.

ಅವರಲ್ಲಿಯೂ ಕೂಡಾ ನಿಜವಾಗಿ ಪುನಃ ಬರುವುದಿಲ್ಲ ಎಂದೇನೂ ಇಲ್ಲ. ಆದರೆ ಅವರ ಮಾನ್ಯತೆಯು ಹಾಗಿದೆ, ಮರಣವಾಯಿತೆಂದರೆ ಮುಗಿಯಿತು ಎಂದು. ನಿಜವಾಗಿ ಪುನಃ ಬರುತ್ತಾರೆ. ಅದು ಅವರ ಅರಿವಿಗೆ ಇನ್ನೂ ಬಂದಿಲ್ಲ. ಅವರು ಪುನರ್ಜನ್ಮವನ್ನೇ ತಿಳಿದಿಲ್ಲ. ನೀವು ಪುನರ್ಜನ್ಮವನ್ನು ತಿಳಿದಿದ್ದೀರಿ!

ಶರೀರವು ಮೃತ್ಯು ಹೊಂದಿತೆಂದರೆ ಆಗ ಜಡವಾಗಿ ಬಿಡುತ್ತದೆ, ಇದರಿಂದಾಗಿ ಸಾಭೀತಾಗುವುದೇನೆಂದರೆ, ಅದರಲ್ಲಿ ಜೀವವು ಇರುವುದಿಲ್ಲ, ಜೀವವು ಅದರಿಂದ ಹೊರಬಂದು ಇನ್ನೊಂದೆಡೆಗೆ ಹೋಗಿರುತ್ತದೆ. Foreign ಜನರು ಏನು ಹೇಳುತ್ತಾರೆ, ಯಾವ ಜೀವ ಎನ್ನುವುದಿತ್ತೋ, ಅದೇ ಜೀವವು ಮರಣ ಹೊಂದಿದೆ ಎಂದು. ನಮ್ಮಲ್ಲಿ ಇದನ್ನು ಒಪ್ಪುವುದಿಲ್ಲ. ನಮ್ಮ ಜನರು ಪುನರ್ಜನ್ಮವನ್ನು ನಂಬುತ್ತಾರೆ. ನಮ್ಮ ಜನರು ವಿಕಾಸಗೊಂಡಿದ್ದಾರೆ (develop). ನಾವು ವಿತರಾಗ ವಿಜ್ಞಾನವನ್ನು ತಿಳಿದಿದ್ದೇವೆ. ವಿತರಾಗ ವಿಜ್ಞಾನವು ಹೇಳುತ್ತದೇನೆಂದರೆ, ಪುನರ್ಜನ್ಮದ ಆಧಾರದ ಮೇಲೆ ನಮಗೆಲ್ಲವೂ ದೊರಕುವುದಾಗಿದೆ. ಇದನ್ನು ಹಿಂದೂಸ್ಥಾನದಲ್ಲಿ ತಿಳಿದಿದ್ದಾರೆ. ಅದರ ಆಧಾರದಿಂದ ನಾವು ಆತ್ಮವನ್ನು ನಂಬಿದ್ದೇವೆ. ಒಂದುವೇಳೆ ಪುನರ್ಜನ್ಮದ ಆಧಾರವು ಇಲ್ಲದೆ ಹೋಗಿದ್ದರೆ, ಆಗ ಆತ್ಮವನ್ನು ನಂಬಲು ಶಕ್ಯವಾಗುವುದಾದರೂ ಹೇಗೆ?

ಹಾಗಾದರೆ, ಪುನರ್ಜನ್ಮವು ಯಾರಿಗಾಗುತ್ತದೆ? ಆಗ ಏನೆಂದು ಹೇಳುತ್ತಾರೆ, ಆತ್ಮ ಇದ್ದರೆ, ಪುನರ್ಜನ್ಮವು ಉಂಟಾಗುತ್ತದೆ. ಹಾಗಾಗಿ, ಕೇವಲ ಈ ದೇಹವು ಮರಣ ಹೊಂದುತ್ತದೆ, ನಂತರ ಅದನ್ನು ಸುಟ್ಟುಬಿಡಲಾಗುತ್ತದೆ. ಇದನ್ನು ನಾವು ನೋಡಿ ತಿಳಿದುಕೊಂಡಿರುತೇವೆ. ಅದರಿಂದಾಗಿ ಆತ್ಮದ ಅರಿವು ಮೂಡಿತಲ್ಲದೆ, ಪರಿಹಾರವೂ ದೊರಕಿದೆ! ಆದರೆ ಈ ತಿಳುವಳಿಕೆ ಅಷ್ಟೊಂದು ಸುಲಭದಲ್ಲಿ ಉಂಟಾಗುವುದಿಲ್ಲವಲ್ಲ! ಹಾಗಾಗಿ ಎಲ್ಲಾ ಶಾಸ್ತ್ರಗಳು ಹೇಳಿರುವುದೇನೆಂದರೆ, 'ಆತ್ಮವನ್ನು ಅರಿತುಕೊ!' ಅದನ್ನು ತಿಳಿದುಕೊಳ್ಳದ ಹೊರತು ಏನೆಲ್ಲಾ ಮಾಡಲಾಗುತ್ತಿದೆಯೋ, ಅದು ಯಾವುದೂ ಉಪಯೋಗವಾಗುವುದಿಲ್ಲ; ಏನೂ helping

ಆಗುವುದಿಲ್ಲ. ಮೊದಲು ಆತ್ಮವನ್ನು ತಿಳಿದುಕೊಳ್ಳಬೇಕು, ಆಗ ಎಲ್ಲದಕ್ಕೂ ಸೊಲ್ಯೂಷನ್ (ಉಪಾಯವು) ದೊರಕಿಕೊಂಡು ಬರುತ್ತದೆ!

## ಪುನರ್ಜನ್ಮ ಯಾರಿಗೆ?

**ಪ್ರಶ್ನಕರ್ತ:** ಪುನರ್ಜನ್ಮವನ್ನು ಯಾರು ತೆಗೆದುಕೊಳ್ಳುತ್ತಾರೆ? ಜೀವ ತೆಗೆದುಕೊಳ್ಳುತ್ತದೆಯೋ ಅಥವಾ ಆತ್ಮ ತೆಗೆದುಕೊಳ್ಳುತ್ತದೆಯೋ?

**ದಾದಾಶ್ರೀ:** ಇಲ್ಲ, ಯಾರಿಗೂ ತೆಗೆದುಕೊಳ್ಳಲು ಬರುವುದಿಲ್ಲ, ಅದು ತನ್ನಷ್ಟಕ್ಕೇ ಆಗಿಹೋಗುತ್ತದೆ. ಈ ಸಮಗ್ರ ಜಗತ್ತಿನಲ್ಲಿ, 'it happens' ( ತನ್ನಷ್ಟಕ್ಕೆ ನಡೆಯುತ್ತದೆ)!

**ಪ್ರಶ್ನಕರ್ತ:** ಹೌದು, ಆದರೆ ಅದು ಯಾವುದರಿಂದ ಆಗುತಲಿದೆ? ಜೀವದಿಂದ ಆಗುವುದೋ ಅಥವಾ ಆತ್ಮದಿಂದ ಆಗುವುದೋ?

**ದಾದಾಶ್ರೀ:** ಇಲ್ಲ, ಆತ್ಮದ ಯಾವ ಲೇವಾದೇವಿಯು ಇಲ್ಲ, ಎಲ್ಲವೂ ಜೀವದಿಂದಲೇ ಆಗಿದೆ. ಯಾರಿಗೆ ಭೌತಿಕ ಸುಖವು ಬೇಕಾಗಿದೆ, ಅವರಿಗೆ ಗರ್ಭಯಲ್ಲಿ ಪ್ರವೇಶ ಮಾಡಲು 'right' (ಅವಕಾಶ) ಇದೆ. ಭೌತಿಕ ಸುಖವು ಬೇಡವೆಂದಿದ್ದರೆ, ಗರ್ಭಯಲ್ಲಿ ಪ್ರವೇಶವಾಗುವ 'right' ಹೊರಟು ಹೋಗುತ್ತದೆ.

## ಸಂಬಂಧ ಜನ್ಮ-ಜನ್ಮಗಳದ್ದು!

**ಪ್ರಶ್ನಕರ್ತ:** ಮನುಷ್ಯನ ಪ್ರತಿಯೊಂದು ಜನ್ಮವೂ, ಪುನರ್ಜನ್ಮದ ಜೊತೆಗೆ ಸಂಬಂಧವಿರುವುದು ನಿಜವೇ?

**ದಾದಾಶ್ರೀ:** ಪ್ರತಿ ಜನ್ಮವು ಪೂರ್ವಜನ್ಮದ್ದೇ ಆಗಿದೆ. ಹಾಗಾಗಿ ಪ್ರತಿಯೊಂದು ಜನ್ಮದ ಸಂಬಂಧವು ಪೂರ್ವಜನ್ಮದಿಂದಲೇ ಆಗಿರುತ್ತದೆ.

**ಪ್ರಶ್ನಕರ್ತ:** ಆದರೆ ಪೂರ್ವಜನ್ಮ ಹಾಗೂ ಈ ಜನ್ಮದೊಂದಿಗೆ ಏನು ಲೇವಾದೇವಿ ಇದೆ?

**ದಾದಾಶ್ರೀ:** ಅರೇ, ಮುಂಬರುವ ಅವತಾರಕ್ಕಾಗಿ ಇದು ಪೂರ್ವಜನ್ಮವಾಗಿದೆ. ಹೋದ ಅವತಾರವು ಈಗಿನ ಜನ್ಮಕ್ಕೆ ಅದು ಪೂರ್ವಜನ್ಮವಾಗಿದೆ ಮತ್ತು ಬರುವ ಅವತಾರಕ್ಕೆ ಈ ಜನ್ಮವು ಪೂರ್ವಜನ್ಮವೆಂದು. ಕರೆಯಲಾಗುತ್ತದೆ.

**ಪ್ರಶ್ನಕರ್ತ:** ಹೌದು, ಈ ಮಾತು ಸತ್ಯವಾಗಿದೆ. ಆದರೆ, ಪೂರ್ವಜನ್ಮದಲ್ಲಿ ಅಂಥದ್ದೇನೋ ಆಗಿರುವುದರಿಂದಾಗಿ ಈ ಜನ್ಮದೊಂದಿಗೆ ಸಂಬಂಧವಿರುತ್ತದೆ ನಿಜವೇ?

**ದಾದಾಶ್ರೀ**: ಬಹಳಷ್ಟು ಸಂಬಂಧವಿದೆ, ಗರಿಷ್ಟ ಮಟ್ಟದಲ್ಲಿ! ಪೂರ್ವಜನ್ಮದಲ್ಲಿ ಬೀಜವು ಬೀಳುತ್ತದೆ ಹಾಗೂ ಈಗಿನ ಜನ್ಮದಲ್ಲಿ ಫಲ ಕೊಡುತ್ತದೆ. ಆದುದರಿಂದಲೇ, ಈ ಬೀಜದಲ್ಲಿ ಅಥವಾ ಫಲದಲ್ಲಿ ವ್ಯತ್ಯಾಸವಿರುವುದಿಲ್ಲವಲ್ಲ? ಸಂಬಂಧವು ನಿಜ, ಹೌದೋ ಅಲ್ಲವೋ? ನಾವು ರಾಗಿಯ ಕಾಳನ್ನು ಬಿತ್ತಿದ್ದು ಪೂರ್ವಜನ್ಮದಲ್ಲಿ ಮತ್ತು ತೆನೆ ಬಂದಿದ್ದು ಈ ಜನ್ಮದಲ್ಲಿ, ಪುನಃ ಆ ತೆನೆಯಿಂದ ಬೀಜರೂಪದ ಕಾಳು ನೆಲದ ಮೇಲೆ ಬಿದ್ದರೆ ಅದು ಪೂರ್ವಜನ್ಮವಾಗುತ್ತದೆ ಹಾಗೂ ಅದರಿಂದ ತೆನೆ ಬರುವುದು ಮುಂದಿನ ಹೊಸ ಜನ್ಮ, ಅರ್ಥವಾಯಿತೋ ಇಲ್ಲವೋ?

**ಪ್ರಶ್ನಕರ್ತ:** ಒಬ್ಬ ವ್ಯಕ್ತಿ ರಸ್ತೆಯ ಮೇಲೆ ಹೀಗೆ ನಡೆದುಕೊಂಡು ಹೋಗುತಲಿರುತ್ತಾನೆ ಹಾಗು ಬಹಳಷ್ಟು ಜನರು ಅದೇ ರಸ್ತೆಯ ಮೇಲೆ ನಡೆದುಕೊಂಡು ಹೋಗುತಲಿರುತ್ತಾರೆ, ಆದರೂ ಅಲ್ಲಿರುವ ಹಾವು ಅವನಿಗೆ ಮಾತ್ರ ತೊಂದರೆ ಕೊಡುತ್ತದೆ, ಇದಕ್ಕೆ ಕಾರಣವೇನು?

**ದಾದಾಶ್ರೀ:** ಹೌದು, ನಾವು ಸಹ ಅದನ್ನೇ ಹೇಳಲು ಇಚ್ಛಿಸುತ್ತಿರುವುದಲ್ಲವೇ, ಅದು ಪುನರ್ಜನ್ಮವಾಗಿದೆ ಎಂದು. ಅದರಿಂದಾಗಿ ಆ ಹಾವು ನಿಮಗೆ ಕಚ್ಚುತ್ತದೆ, ಪುನರ್ಜನ್ಮವು ಇಲ್ಲದೆ ಹೋಗಿದ್ದರೆ, ನಿಮಗೆ ಆ ಹಾವು ಕಚ್ಚುತ್ತಿರಲಿಲ್ಲ. ಪುನರ್ಜನ್ಮವಿದೆ. ಹಾಗಾಗಿ ನಿನ್ನಯ ಲೆಕ್ಕವನ್ನು ನಿನಗೆ ಪಾವತಿಸಲಾಗುತ್ತಿದೆ. ಈ ಎಲ್ಲಾ ಲೆಕ್ಕಾಚಾರವನ್ನು ಚುಕ್ತಾ ಮಾಡಲಾಗುತ್ತಿದೆ. ಯಾವ ರೀತಿಯಲ್ಲಿ ಪುಸ್ತಕದಲ್ಲಿನ ಲೆಕ್ಕಾಚಾರದ ಪಾವತಿಯನ್ನು ಮಾಡಲಾಗುತ್ತದೆ, ಅದೇ ರೀತಿ ಎಲ್ಲಾ ಲೆಕ್ಕಗಳು ಚುಕ್ತವಾಗಲಿವೆ. ಇದನ್ನು ನಮಗೆ 'ಡೆವಲಪ್ಮೆಂಟ್'ನಿಂದಾಗಿ ಎಲ್ಲಾ ಲೆಕ್ಕಾಚಾರಗಳನ್ನು ಸರಿಯಾಗಿ ತಿಳಿಯಲು ಸಾಧ್ಯವಾಗುತ್ತಿದೆ. ಹಾಗಾಗಿ ನಮ್ಮಲ್ಲಿ ಬಹಳಷ್ಟು ಜನರು 'ಪುನರ್ಜನ್ಮವಿದೆ' ಎಂಬ ನಂಬಿಕೆಯನ್ನು ಹೊಂದಿದ್ದಾರೆ! ಆದರೆ ಅಲ್ಲಿ ಪುನರ್ಜನ್ಮವು ಇದ್ದೇ ಇದೆ ಎಂದು ತೋರಿಸಲು ಸಾಧ್ಯವಿಲ್ಲ. 'ಇದ್ದೇ ಇದೆ' ಎನ್ನುವುದಕ್ಕೆ ಯಾವ ಪುರಾವೆಯಿಂದಲೂ ತೋರಿಸಲು ಸಾಧ್ಯವಿಲ್ಲ. ಆದರೆ, ಸ್ವತಃ ತನಗೆ ಶ್ರದ್ಧೆಯನ್ನು ಮೂಡಿಸುವಂತಹ ಈ ಎಲ್ಲಾ ದಾಖಲಾತಿಗಳಿಂದ ಪುನರ್ಜನ್ಮವು ಇದೆಯೆಂದು ಸಾಬೀತಾಗುತ್ತದೆ!

ಹೆಣ್ಣುಮಗಳು ಕೇಳುತ್ತಾಳೆ, ನನಗೆ ಯಾಕೆ ಒಳ್ಳೆಯ ಅತ್ತೆ ಸಿಗಲಿಲ್ಲ ಹಾಗೂ ನನಗೇ ಯಾಕೆ ಅಂಥ ಅತ್ತೆ ಸಿಗಬೇಕಿತ್ತು? ಹೀಗೆ ವಿಧವಿಧವಾದ ಸಂಯೋಗಗಳೆಲ್ಲಾ ಸೇರುತಲಿರುತ್ತವೆ.

# ಮತ್ತೇನು ಜೊತೆಯಲ್ಲಿ ಹೋಗುತ್ತದೆ?

**ಪ್ರಶ್ನಕರ್ತ:** ಒಂದು ಜೀವ ಮತ್ತೊಂದು ಗರ್ಭವನ್ನು ಸೇರುತ್ತದೆ. ಅಲ್ಲಿ ಪಂಚೇಂದ್ರಿಯ ಹಾಗೂ ಮನಸ್ಸು, ಈ ಎಲ್ಲವನ್ನು ಪ್ರತಿಯೊಂದು ಜೀವವು ತನ್ನೊಟ್ಟಿಗೆ ತೆಗೆದುಕೊಂಡು ಹೋಗುತ್ತದೆಯೇ?

**ದಾದಾಶ್ರೀ:** ಇಲ್ಲ,ಇಲ್ಲ. ಏನ್ನನೂ ತೆಗೆದುಕೊಂಡು ಹೋಗುವುದಿಲ್ಲ. ಇಂದ್ರಿಯಗಳೆಲ್ಲಾ exhaust (ಕೆಲಸಕ್ಕೆ ಬಾರದ ಹಾಗೆ) ಆಗಿ, ಅಂತ್ಯಗೊಳ್ಳುತ್ತವೆ, ಇಂದ್ರಿಯಗಳು ಇಲ್ಲೇ ಸತ್ತುಹೋಗುತ್ತವೆ. ಹಾಗಾಗಿ ಅದರ ಜೊತೆಯಲ್ಲಿ ಇಂದ್ರಿಯಗಳು ಯಾವುದೂ ಹೋಗುವುದಿಲ್ಲ. ಕೇವಲ ಈ ಕ್ರೋಧ-ಮಾನ-ಮಾಯಾ-ಲೋಭಗಳು ಜೊತೆಯಲ್ಲಿ ಹೋಗುತ್ತವೆ. ಕಾರಣ ಶರೀರದಲ್ಲಿ ಕ್ರೋಧ-ಮಾನ-ಮಾಯಾ-ಲೋಭಗಳೆಲ್ಲವೂ ಸೇರಿಕೊಂಡಿರುತ್ತವೆ ಹಾಗೂ ಇನ್ನು ಸೂಕ್ಷ್ಮ ಶರೀರ, ಅದಂತೂ ಎಲ್ಲಿಯವರೆಗೆ ಮೋಕ್ಷಕ್ಕೆ ಹೋಗುವುದಿಲ್ಲವೋ, ಅಲ್ಲಿಯವರೆಗೆ ಕಾರಣ ಶರೀರದೊಂದಿಗೆ ಹೋಗುತಲಿರುತ್ತದೆ. ಎಂಥದ್ದೇ ಅವತಾರ ಪಡೆದರೂ ಈ ಸೂಕ್ಷ್ಮ ಶರೀರವು ಅದರ ಜೊತೆಯಲ್ಲಿಯೇ ಹೋಗುತ್ತದೆ.

## ತೇಜಸ್-ಶರೀರ (Electrical Body)!

ಆತ್ಮ ಒಂದೇ ದೇಹವನ್ನು ಬಿಟ್ಟು ಹೋಗುವುದಿಲ್ಲ. ಆತ್ಮದೊಂದಿಗೆ ಎಲ್ಲಾ ಕರ್ಮಗಳು (ಇದನ್ನು ಕಾರಣ ದೇಹವೆಂದು ಕರೆಯಲಾಗುತ್ತದೆ) ಹಾಗೂ ಮೂರನೆಯದಾಗಿ 'ಎಲೆಕ್ಟ್ರಿಕಲ್ ಬೊಡಿ' (ತೇಜಸ್-ಶರೀರ), ಈ ಮೂರೂ (ಆತ್ಮ, ಕಾರಣ-ಶರೀರ ಹಾಗೂ ತೇಜಸ್-ಶರೀರ) ಜೊತೆಯಲ್ಲಿ ಹೋಗುತ್ತವೆ. ಎಲ್ಲಿಯವರೆಗೆ ಸಂಸಾರವಿರುವುದೋ ಅಲ್ಲಿಯವರೆಗೆ ಪ್ರತಿಯೊಂದು ಜೀವಿಯಲ್ಲಿ ಈ ಎಲೆಕ್ಟ್ರಿಕಲ್ ಬೊಡಿ ಇದ್ದೇ ಇರುತ್ತದೆ! ಕಾರಣವೇನೆಂದರೆ, ಶರೀರದ ನಿರ್ಮಾಣದ ಸಮಯದಲ್ಲಿ, ಕೂಡಾ ಜೊತೆಗೆ ಇರುತ್ತದೆ. ಎಲೆಕ್ಟ್ರಿಕಲ್ ಬೊಡಿ ಪ್ರತಿಯೊಂದು ಜೀವದಲ್ಲೂ ಸಾಮಾನ್ಯ ಭಾವದಲ್ಲಿ ಇರುತ್ತದೆ ಹಾಗೂ ಅದರ ಆಧಾರದಿಂದ ನಮ್ಮ ಚಟುವಟಿಕೆ ನಡೆಯುತಲಿರುತ್ತದೆ. ಊಟ ಮಾಡಿದ್ದನ್ನು ಪಚನವಾಗಿಸುವ ಕೆಲಸ ಈ ಎಲೆಕ್ಟ್ರಿಕಲ್ ಬೊಡಿ ಮಾಡುತ್ತದೆ. ಮತ್ತು ರಕ್ತದ ಉತ್ಪನ್ನವಾಗುತ್ತದೆ ಹಾಗೂ ರಕ್ತವನ್ನು ಶರೀರದಲ್ಲಿ ಮೇಲೇರಿಸುವ, ಕೆಳಗಿಳಿಸುವ, ಈ ಎಲ್ಲಾ ಒಳಗಿನ ಕೆಲಸಗಳನ್ನು ಮಾಡುತಲಿರುತ್ತದೆ. ಕಣ್ಣಿನಿಂದ ನೋಡುವಾಗ ಅಲ್ಲಿ ಆ ಲೈಟ್ (ಬೆಳಕು), ಈ ಎಲ್ಲವೂ ಎಲೆಕ್ಟ್ರಿಕಲ್ ಬೊಡಿಯಿಂದಾಗಿದೆ. ಹಾಗೂ ಈ ಕ್ರೋಧ-ಮಾನ-ಮಾಯಾ-ಲೋಭಗಳೂ ಕೂಡಾ ಈ ಎಲೆಕ್ಟ್ರಿಕಲ್ ಬೊಡಿಯಿಂದಲೇ ಆಗುತ್ತದೆ.

ಆತ್ಮದಲ್ಲಿ ಕ್ರೋಧ-ಮಾನ-ಮಾಯಾ-ಲೋಭಗಳು ಇಲ್ಲವೇ ಇಲ್ಲ. ಕೋಪ, ಸಿಟ್ಟು ಬರುವುದೆಲ್ಲವೂ ಈ 'ಎಲೆಕ್ಟ್ರಿಕಲ್ ಬೊಡಿ'ಯ 'shock'ನಿಂದಾಗಿದೆ.

**ಪ್ರಶ್ನಕರ್ತ:** ಹಾಗಾದರೆ, 'ಚಾರ್ಜ್' ಮಾಡುವಲ್ಲಿ 'ಎಲೆಕ್ಟ್ರಿಕಲ್ ಬೊಡಿ'ಯು ಕೆಲಸ ಮಾಡುತ್ತದೆ ಅಲ್ಲವೇ?

**ದಾದಾಶ್ರೀ:** ಎಲೆಕ್ಟ್ರಿಕಲ್ ಬೊಡಿ ಇದ್ದರೇನೇ ಚಾರ್ಜ್ ಆಗಲು ಸಾಧ್ಯವಾಗುವುದು. ಎಲೆಕ್ಟ್ರಿಕಲ್ ಬೊಡಿ ಇಲ್ಲದೆ ಹೋದರೆ, ಏನೂ ನಡೆಯುವುದಿಲ್ಲ. ಅಲ್ಲದೆ, 'ಎಲೆಕ್ಟ್ರಿಕಲ್ ಬೊಡಿ' ಇದ್ದರೂ, ಅಲ್ಲಿ ಆತ್ಮ ಇಲ್ಲದೆ ಹೋದರೆ ಏನೂ ನಡೆಯುವುದಿಲ್ಲ. ಈ ಎಲ್ಲವೂ ಸಮುಚ್ಚಯ 'causes' (ಕಾರಣಗಳು) ಆಗಿವೆ.

## ಗರ್ಭದಲ್ಲಿ ಜೀವವು ಯಾವಾಗ ಪ್ರವೇಶ ಮಾಡುತ್ತದೆ?

**ಪ್ರಶ್ನಕರ್ತ:** ಚಲನೆ ಉಂಟಾದಾಗ ಮಾತ್ರವೇ ಜೀವವು ಪ್ರವೇಶಿಸಿದೆ, ಪ್ರಾಣ ಬಂದಿದೆ ಎಂದು ವೇದಗಳಲ್ಲಿ ಹೇಳುತ್ತಾರೆ.

**ದಾದಾಶ್ರೀ:** ಇಲ್ಲ, ಇವೆಲ್ಲವೂ ಬರಿ ಮಾತಾಗಿದೆ. ಅಲ್ಲಿ ಅದು ಅನುಭವದ ವಿಷಯವಲ್ಲ, ಅವೆಲ್ಲಾ ನಿಜವಾದ ಮಾತಲ್ಲ. ಅದು ಲೌಕಿಕದ ಹೇಳಿಕೆಯಾಗಿದೆ. ಜೀವ ಇಲ್ಲದೆ ಎಂದೂ ಗರ್ಭಧಾರಣೆ ಆಗುವುದಿಲ್ಲ. ಜೀವದ ಹಾಜರಿ ಇದ್ದಾಗ ಮಾತ್ರ ಗರ್ಭಧಾರಣೆಯಾಗುತ್ತದೆ. ಇಲ್ಲವಾದರೆ ಧಾರಣೆಯಾಗುವುದಿಲ್ಲ.

ಅದು ಮೊದಲಿಗೆ ಮೊಟ್ಟೆಯ ರೀತಿಯಲ್ಲಿ ಪ್ರಜ್ಞೆಯಿಲ್ಲದ ಅವಸ್ಥೆಯಲ್ಲಿ ಇರುತ್ತದೆ.

**ಪ್ರಶ್ನಕರ್ತ:** ಕೋಳಿಯ ಮೊಟ್ಟೆಯಲ್ಲಿ ರಂಧ್ರ ಮಾಡಿಕೊಂಡು ಜೀವವು ಒಳಗೆ ಕುಳಿತುಕೊಳ್ಳುತ್ತದೆ?

**ದಾದಾಶ್ರೀ:** ಇಲ್ಲ, ಇದೆಲ್ಲಾ ಲೌಕಿಕದ ಹೇಳಿಕೆಯಾಗಿದೆ. ಲೌಕಿಕದಲ್ಲಿ ಏನು ನೀವು ಹೇಳುತ್ತಿರುವಿರೋ, ಹಾಗೆಯೇ ಬರೆದಿದ್ದಾರೆ. ಆದರೆ, ಅದು ಹೇಗೆಂದರೆ, ಗರ್ಭಧಾರಣೆಯ ಕಾಲದಲ್ಲಿ, 'scientific circumstantial evidence' ಮೇಲೆ, ಆ ಸಮಯಕ್ಕೆ ಅನುಗುಣವಾಗಿ ಎಲ್ಲಾ ಹೊಂದಿಕೊಂಡು ಬಂದಾಗ, ಧಾರಣೆಯಾಗುತ್ತದೆ.

ಒಂಬತ್ತು ತಿಂಗಳು ಜೀವವು ಒಳಗಿದ್ದು ನಂತರ ಹೊರಬರುತ್ತದೆ, ಹಾಗೂ ಏಳು ತಿಂಗಳಲ್ಲಿ ಜೀವವು ಅಪೂರ್ಣವಾಗಿ ಹುಟ್ಟುವುದರಿಂದ ಸರಿಯಾದ ಬೆಳವಣಿಗೆ ಇರುವುದಿಲ್ಲ.

ಅದರ 'ಮೆದುಳು' ಪಕ್ವವಾಗಿರುವುದಿಲ್ಲ. ಎಲ್ಲಾ ಅಂಗಾಂಗಗಳು ಅಪಕ್ವವಾಗಿರುತ್ತವೆ, ಏಕೆಂದರೆ ಅದು ಏಳನೇ ತಿಂಗಳಲ್ಲಿ ಹುಟ್ಟಿರುವುದರಿಂದ. ಮತ್ತು ಹದಿನೆಂಟು ತಿಂಗಳಲ್ಲಿ ಹುಟ್ಟಿದರೆ, ಅದರ ವಿಚಾರವೇ ಬೇರೆ. ಅಲ್ಲಿ ಬಹಳ 'ಹೈ ಲೆವೆಲ್'ನ ಮೆದುಳು ಇರುತ್ತದೆ. ಆದುದರಿಂದ ಒಂಬತ್ತು ತಿಂಗಳಿಗಿಂತ ಎಷ್ಟು ಹೆಚ್ಚು ತಿಂಗಳು ಮುಂದಕ್ಕೆ ಹೋಗುವುದೋ, ಅಷ್ಟು ಟಾಪ್ ಮೆದುಳು ಅವರಿಗೆ ಇರುತ್ತದೆ, ತಿಳಿದಿದೆಯೇ ಇದು?

ಯಾಕೆ ಮಾತನಾಡುತ್ತಿಲ್ಲ? ನೀವು ಕೇಳಿಲ್ಲವೇ, ಹದಿನೆಂಟು ತಿಂಗಳು ಇರುವಂಥದ್ದು! ಕೇಳಿದ್ದೀರಾ? ಈ ಹಿಂದೆ ಎಲ್ಲಿಯೂ ಕೇಳಿಲ್ಲ, ಅಲ್ಲವೇ? ಇದು ಕೆಲವರು ಮಾತಿಗೆ ಹೇಳುತ್ತಾರೆ, 'ಬಿಟ್ಟುಬಿಡಿ, ಅವನು ಅವನ ತಾಯಿಗೆ ಹದಿನೆಂಟು ತಿಂಗಳಿಗೆ ಹುಟ್ಟಿದವನು,' ಎಂದು! ಅಂಥವರು ಬಹಳ ಚುರುಕಾಗಿ ಇರುತ್ತಾರೆ. ಅವನ ತಾಯಿಯ ಹೊಟ್ಟೆಯಿಂದ ಹೊರಗೆ ಬರಲು ಇಚ್ಛಿಸುವುದೇ ಇಲ್ಲ. ಹೆಚ್ಚು ತಿಂಗಳವರೆಗೆ ಅಲ್ಲಿಯೇ ಜಂಬಹೊಡೆದುಕೊಂಡು ಇರುತ್ತಾರೆ.

## ನಡುವಿನ ಸಮಯ ಎಷ್ಟು?

**ಪ್ರಶ್ನಕರ್ತ:** ಈ ದೇಹವನ್ನು ಬಿಟ್ಟುಹೋಗುವುದು ಹಾಗೂ ಮತ್ತೊಂದು ದೇಹವನ್ನು ಧಾರಣೆ ಮಾಡುವುದರ ನಡುವೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ?

**ದಾದಾಶ್ರೀ:** ಏನೂ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇಲ್ಲಿಯೂ ಇರುತ್ತದೆ, ಇನ್ನೇನು ಈ ದೇಹದಿಂದ ಹೊರಡಬೇಕಾಗಿರುವಾಗಲೇ, ಅಲ್ಲಿಯು ಗರ್ಭದೊಳಗೆ ಕೂಡಾ ಹಾಜರಿ ಇರುತ್ತದೆ. ಕಾರಣವೇನೆಂದರೆ, ಅದು ಟೈಮಿಂಗ್ ಅನುಸಾರವಾಗಿದೆ. ವೀರ್ಯ ಹಾಗೂ ರಜದ ಸಂಯೋಗದ ಸಮಯಕ್ಕೆ ಸರಿಯಾಗಿ, ಇಲ್ಲಿಂದ ದೇಹವನ್ನು ಬಿಡುತ್ತಿರುವಾಗಲೇ, ಮೊದಲು ಅಲ್ಲಿ ಸಂಯೋಗ ಉಂಟಾಗುತ್ತದೆ. ಸಂಯೋಗವು ಸಜ್ಜಾಗಿರುತ್ತದೆ, ಹಾಗೆ ಎಲ್ಲಾ ಹೊಂದಾಣಿಕೆಯಾದ ಮೇಲೆ ಇಲ್ಲಿಂದ ದೇಹವನ್ನು ಬಿಟ್ಟುಹೋಗುತ್ತದೆ. ಇಲ್ಲವಾದರೆ ಇಲ್ಲಿಂದ ಹೋಗುವುದೇ ಇಲ್ಲ. ಮನುಷ್ಯನು ಮೃತ್ಯು ಹೊಂದಿದ ಮೇಲೆ, ಆ ಆತ್ಮ ಇಲ್ಲಿಂದ ಸೀದಾ ಇನ್ನೊಂದು ಗರ್ಭದಲ್ಲಿ ಸೇರಿಕೊಳ್ಳುತ್ತದೆ. ಹಾಗಾಗಿ ಮುಂದಕ್ಕೆ ಏನಾಗುತ್ತದೆ, ಎಂಬ ಚಿಂತೆ ಮಾಡಬೇಕಾಗಿಯೇ ಇಲ್ಲ. ಏಕೆಂದರೆ, ಮರಣದ ನಂತರ ಮತ್ತೊಂದು ಗರ್ಭವು ಪ್ರಾಪ್ತಿಯಾಗಿ ಬಿಡುವುದಲ್ಲದೆ, ಆ ಗರ್ಭದಲ್ಲಿ ಕುಳಿತ ಕ್ಷಣದಿಂದಲೇ ತಿನ್ನಲು ಆಹಾರ, ಎಲ್ಲವೂ ದೊರಕುತ್ತದೆ.

## ಅದರಿಂದ ಕಾರಣ ದೇಹದ ರಚನೆ!

ಜಗತ್ತು ಭ್ರಾಂತಿಯಿಂದ ಕೂಡಿದೆ. ಇಲ್ಲಿ ಕ್ರಿಯೆಯನ್ನು ನೋಡಲಾಗುತ್ತದೆ, ಧ್ಯಾನವನ್ನು ನೋಡುವುದಿಲ್ಲ. ಧ್ಯಾನವು ಮುಂದಿನ ಅವತಾರದ ಪುರುಷಾರ್ಥವಾಗಿದೆ ಹಾಗೂ ಕ್ರಿಯೆಯು ಹಿಂದಿನ ಅವತಾರದ ಪುರುಷಾರ್ಥವಾಗಿದೆ. ಧ್ಯಾನವು ಮುಂದಿನ ಅವತಾರದಲ್ಲಿ ಫಲ ನೀಡುವಂಥದ್ದಾಗಿದೆ. ಧ್ಯಾನವಾಯಿತೆಂದರೆ ಆ ಕ್ಷಣದಲ್ಲೇ ಹೊರಗಿನಿಂದ ಪರಮಾಣುವನ್ನು ಸೆಳೆಯಲಾಗುತ್ತದೆ ಹಾಗೂ ಅದು ಧ್ಯಾನ ಸ್ವರೂಪದಿಂದ ಒಳಗೆ ಸೂಕ್ಷ್ಮದಲ್ಲಿ ಒಳಗೆ ಸಂಗ್ರಹವಾಗುತ್ತದೆ. ನಂತರ ಕಾರಣ ದೇಹದ ರಚನೆ ಉಂಟಾಗುತ್ತದೆ. ಯಾವಾಗ ಋಣಾನುಬಂಧದಿಂದ ತಾಯಿಯ ಗರ್ಭದೊಳಗೆ ಜೀವವು ಸೇರುವುದೋ, ಆಗಲಿನಿಂದ ಕಾರ್ಯ ದೇಹದ ನಿರ್ಮಾಣವು ಪ್ರಾರಂಭವಾಗುತ್ತದೆ. ಮನುಷ್ಯನು ಮರಣ ಹೊಂದಿದ ಬಳಿಕ ಆತ್ಮವು, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರದೊಂದಿಗೆ ಹೋಗುವುದು. ಸೂಕ್ಷ್ಮ ಶರೀರ ಪ್ರತಿಯೊಬ್ಬರಲ್ಲಿಯೂ 'common' ಆಗಿ ಇರುತ್ತದೆ, ಆದರೆ ಕಾರಣ ಶರೀರವು ಪ್ರತಿಯೊಬ್ಬನು ಕಟ್ಟಿಕೊಳ್ಳುವ 'causes'ಗಳ ಪ್ರಮಾಣದ ಮೇಲೆ ಬೇರೆ-ಬೇರೆಯಾಗಿರುತ್ತದೆ. ಸೂಕ್ಷ್ಮ ಶರೀರವೆನ್ನುವುದು 'ಎಲೆಕ್ಟ್ರಿಕಲ್ ಬೊಡಿ'ಯಾಗಿದೆ.

## ಕಾರಣ-ಕಾರ್ಯದ ಸಂಕೋಲೆ!

ಮೃತ್ಯುವಿನ ನಂತರ ಜನ್ಮ, ಹಾಗೂ ಜನ್ಮದ ನಂತರ ಮೃತ್ಯು, ಅಷ್ಟೇ, ಇದು ನಿರಂತರ ನಡೆಯುತ್ತಲೇ ಇರುತ್ತದೆ. ಈ ಜನ್ಮ ಮತ್ತು ಮೃತ್ಯು ಯಾಕೆ ಆಗುತ್ತದೆ ಎಂದರೆ, causes and effect, effect and causes ('ಕಾರಣ ಹಾಗು ಕಾರ್ಯ, ಕಾರ್ಯ ಹಾಗು ಕಾರಣ,'), ಇವುಗಳಿಂದಾಗಿ ಆಗುತ್ತದೆ; ಯಾವ ಕಾರಣವಿದೆಯೋ ಅದನ್ನು ನಾಶಮಾಡಲು ಬಂದರೆ ಆಗ ಎಲ್ಲಾ 'effect' ನಿಂತುಹೋಗುತ್ತದೆ, ನಂತರ ಹೊಸ ಜನ್ಮ ಪಡೆಯಬೇಕಾಗಿ ಬರುವುದಿಲ್ಲ!

ಇಡೀ ಜೀವನದಲ್ಲಿ ನಿಮ್ಮಿಂದ ಯಾವ 'causes'ಗಳನ್ನು ಹುಟ್ಟುಹಾಕಲಾಗಿತ್ತೋ, ಆ ನಿಮ್ಮ 'causes' ನಂತರ ಯಾರ ಬಳಿಗೆ ಹೋಗಬೇಕು? ಅಲ್ಲದೆ, ಆ 'causes' ಮಾಡಿರುವುದರಿಂದ, ನಿಮಗೆ ಕಾರ್ಯಫಲವು ಬರದೆ ಇರುವುದಿಲ್ಲ. 'Causes' ಮಾಡಲಾಗಿವೆ ಎಂದು ಸ್ವತಃ ನಿಮಗೆ ತಿಳಿಯುತ್ತದೆಯೇ?

ಪ್ರತಿಯೊಂದು ಕಾರ್ಯದಿಂದಲೂ 'causes' ಹುಟ್ಟಿಕೊಳ್ಳುತ್ತವೆ. ನಿಮಗೆ ಯಾರಾದರು 'ಅಯೋಗ್ಯ' ಎಂದು ಹೇಳಿದರೆ, 'ನಿನ್ನ ಅಪ್ಪ ಅಯೋಗ್ಯ' ಎಂದು ಒಳಗೊಳಗೆ ಅನ್ನಿಸುವುದು. ಅದನ್ನು ನಿಮ್ಮ 'causes' ಎಂದು ಕರೆಯಲಾಗುತ್ತದೆ. ಆಗ ನಿಮ್ಮೊಳಗೆ 'causes' ಹುಟ್ಟಿಕೊಳ್ಳುತ್ತವೆ. ನಿಮ್ಮನ್ನು 'ಅಯೋಗ್ಯ'ರೆಂದು ನಿಂದನೆ ಮಾಡಿರುವುದು, ಅದು ಕಾಯಿದೆಯ ಅನುಸಾರವಾಗಿದೆ, ಆದರೆ ನೀವು ಅವರನ್ನು ನಿಂದಿಸುವುದು ಕಾನೂನುಬಾಹಿರವಾಗಿದೆ. ಇದು ತಿಳಿಯುತ್ತದೆಯೇ ನಿಮಗೆ? ಯಾಕೆ ಉತ್ತರ ಕೊಡುತ್ತಿಲ್ಲ?

**ಪ್ರಶ್ನಕರ್ತ:** ಅದು ಸರಿ.

**ದಾದಾಶ್ರೀ:** ಹಾಗಾಗಿ 'causes' ಈ ಭವದಲ್ಲಿ ಮಾಡಲಾಗುತ್ತವೆ ಹಾಗೂ 'effect' ಮುಂದಿನ ಭವದಲ್ಲಿ ಅನುಭವಿಸಬೇಕಾಗಿ ಬರುತ್ತದೆ!

ಯಾವ 'effective' (ಪರಿಣಾಮದ) ಮೋಹವಿದೆಯೋ,ಅದನ್ನೇ 'causes' (ಕಾರಣದ) ಮೋಹವೆಂದು ಊಹಿಸಿಕೊಳ್ಳುವುದೇ ಆಗಿದೆ. ನೀವು ಕೇವಲ ಏನೆಂದು ಊಹೆ ಮಾಡುವುದಾಗಿದೆ, 'ನಾನು ಕ್ರೋಧ ಮಾಡುತ್ತೇನೆ' ಎಂದು. ಆದರೆ ಅದು ನಿಮ್ಮ ಭ್ರಾಂತಿಯಾಗಿದೆ; ಭ್ರಾಂತಿ ಇರುವವರೆಗೂ ಈ ಕ್ರೋಧವು ಇರುತ್ತದೆ. ಉಳಿದಂತೆ, ಇದು ಕ್ರೋಧವೇ ಅಲ್ಲ, ಇದು ಕೇವಲ 'effect' ಆಗಿದೆ. ಅಲ್ಲಿ, 'causes' ನಿಂತು ಹೋದವೆಂದರೆ, ಆಗ 'effect' ಮಾತ್ರವೇ ಉಳಿಯುತ್ತದೆ. ಹಾಗೂ 'causes'ಗಳನ್ನು ನಿಲ್ಲಿಸಿದರೆ, ಆಗ 'he is not responsible for effect' (ಪರಿಣಾಮದ ಜವಾಬುದಾರ ತಾನಾಗುವುದಿಲ್ಲ) ಮತ್ತು 'effect' ಅದರ ಇಂಗಿತವನ್ನು ತೋರಿಸದೆ ಇರುವುದೂ ಇಲ್ಲ.

## ಕಾರಣವು ನಿಲ್ಲುತ್ತದೆಯೇ?

**ಪ್ರಶ್ನಕರ್ತ:** ದೇಹ ಮತ್ತು ಆತ್ಮದ ನಡುವೆ ಸಂಬಂಧವು ನಿಜವೇ?

**ದಾದಾಶ್ರೀ:** ಈ ದೇಹ ಇರುವುದು ಆತ್ಮದ ಅಜ್ಞಾನಾವಸ್ಥೆಯ ಪರಿಣಾಮದಿಂದಾಗಿದೆ. ಏನೇನು 'causes' ಮಾಡಲಾಗಿತ್ತೋ, ಅದರ 'effect' ಇರುತ್ತದೆ. ಯಾರಾದರು ನಿಮಗೆ ಹಾರ ಹಾಕಿದರೆ ಆಗ ನೀವು ಖುಷಿಯಿಂದ ಹಿಗ್ಗುವಿರಿ ಮತ್ತು ನಿಮ್ಮನ್ನು ತೆಗಳಿದರೆ ನೀವು ಸಿಡಿಮಿಡಿ ಗೊಳ್ಳುವಿರಿ. ಇಲ್ಲಿ ಸಂತಸಗೊಳ್ಳುವ ಹಾಗೂ ಸಿಟ್ಟಾಗುವ ಹೊರಗಿನ ತೋರಿಕೆಯು ಮಹತ್ವದ್ದಲ್ಲ,

ಆದರೆ ಆಂತರಿಕ ಭಾವದಿಂದ ಕರ್ಮವು charge ಆಗುತ್ತದೆ. ನಂತರ ಮುಂದಿನ ಜನ್ಮದಲ್ಲಿ 'discharge' ಆಗುತ್ತದೆ. ಮನಸು-ವಚನ-ಕಾಯ ಈ ಮೂರೂ 'effective' ಆಗಿದೆ. ಈ 'effect' ಅನುಭವಿಸುವ ಸಮಯದಲ್ಲಿ ಇನ್ನೊಂದು ಹೊಸ 'cause' ಹುಟ್ಟಿಕೊಳ್ಳುತ್ತದೆ. ಅದು ಮುಂದಿನ ಜನ್ಮದಲ್ಲಿ 'discharge' ಆಗುತ್ತದೆ. ಹೀಗೆ 'causes' and 'effect', 'effect' and 'causes' ಈ ರೀತಿಯಲ್ಲಿ ಸಂಪುಟವು ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಈ ಮನುಷ್ಯ ಜನ್ಮವೊಂದರಲ್ಲಿಯೇ 'causes'ಗಳನ್ನು ನಿಲ್ಲಿಸಲು ಸಾಧ್ಯವಾಗುವಂಥದ್ದು. ಬೇರೆಲ್ಲಾ ಗತಿಗಳಲ್ಲಿ ಕೇವಲ 'effect' ಮಾತ್ರವೇ ಇರುತ್ತದೆ. ಇಲ್ಲಿ 'causes' and 'effect' ಎರಡೂ ಇರುತ್ತವೆ. ನಾವು ಜ್ಞಾನ ನೀಡಿದ ನಂತರ 'causes'ಗಳನ್ನು ನಿಲ್ಲಿಸಿ ಬಿಡುತ್ತೇವೆ. ಇದರಿಂದಾಗಿ ನಂತರ ಹೊಸ 'effect' ಉಂಟಾಗುವುದಿಲ್ಲ.

## ಎಲ್ಲಿಯವರೆಗೆ ಅಲೆದಾಡುವುದು ...

'Electrical Body' ಅಂದರೆ, ಮನಸ್ಸು-ವಚನ-ಕಾಯಗಳೆಂಬ ಈ ಮೂರು 'ಬ್ಯಾಟರಿ'ಗಳು ಸಿದ್ಧವಾಗಿರುವುದು. ಇದರಿಂದ ಪುನಃ ಹೊಸ 'causes' ಉತ್ಪನ್ನವಾಗುತ್ತಾ ಹೋಗುತ್ತವೆ. ಅದು ಹೇಗೆಂದರೆ, ಈ ಜನ್ಮದಲ್ಲಿನ ಮನಸ್ಸು-ವಚನ-ಕಾಯ 'discharge' ಆಗುತಲಿರುತ್ತವೆ ಹಾಗೂ ಇನ್ನೊಂದೆಡೆ ಒಳಗೆ ಹೊಸದಾಗಿ 'charge' ಆಗುತಲಿರುತ್ತವೆ. ಯಾವ ಮನಸ್ಸು-ವಚನ-ಕಾಯಗಳ ಬ್ಯಾಟರಿಗಳು 'charge' ಆಗುತಲಿರುವವೋ, ಅವು ಮುಂದಿನ ಜನ್ಮಕ್ಕಾಗಿ ಆಗಿವೆ ಹಾಗೂ ಈಗಿರುವವು ಹೋದ ಜನ್ಮದ್ದಾಗಿವೆ, ಅವು ಈಗ 'discharge' ಆಗುತಲಿರುತ್ತವೆ. 'ಜ್ಞಾನಿ ಪುರುಷರು' ಹೊಸದಾಗಿ 'charge' ಆಗುವುದನ್ನು ಸ್ಥಗಿತಗೊಳಿಸಿ ಬಿಡುತ್ತಾರೆ ಹಾಗಾಗಿ ಹಳೆಯದ್ದು ಮಾತ್ರ 'discharge' ಆಗುತಲಿರುತ್ತವೆ.

ಮೃತ್ಯುವಿನ ನಂತರ ಆತ್ಮ ಇನ್ನೊಂದು ಗರ್ಭದೊಳಗೆ ಸೇರಿಕೊಳ್ಳುತ್ತದೆ. ಎಲ್ಲಿಯವರೆಗೆ ತನ್ನಯ 'Self-Realisation' (ಆತ್ಮದ ಸಾಕ್ಷಾತ್ಕಾರ) ಆಗುವುದಿಲ್ಲವೋ, ಅಲ್ಲಿಯವರೆಗೆ ಎಲ್ಲರೂ ಗರ್ಭಗಳಲ್ಲಿ ಅಲೆಯುತ್ತಿರುವುದೇ ಆಗಿದೆ. ಎಲ್ಲಿಯ ತನಕ ಮನಸ್ಸಿನೊಂದಿಗೆ ತನ್ಮಯತೆ, ಬುದ್ಧಿಯೊಂದಿಗೆ ತನ್ಮಯತೆ ಇರುವುದೋ, ಅಲ್ಲಿಯ ತನಕ ಸಂಸಾರವು ಇರುತ್ತದೆ.

ಕಾರಣವೇನೆಂದರೆ, ತನ್ಮಯತೆಯಿಂದಾಗಿ ಗರ್ಭದಲ್ಲಿ ಬೀಜವು ಬೀಳುತ್ತದೆ. ಅದಕ್ಕಾಗಿಯೇ ಶ್ರೀ ಕೃಷ್ಣ ಭಗವಂತನು ಹೇಳಿರುವುದೇನೆಂದರೆ, ಗರ್ಭದಲ್ಲಿ ಬೀಜವು ಬೀಳುವುದರಿಂದಾಗಿ ಈ ಸಂಸಾರವು ಹುಟ್ಟಿದೆ. ಗರ್ಭದಲ್ಲಿ ಬೀಜ ಬೀಳುವುದು ಸ್ಥಗಿತವಾದರೆ, ಆಗ ಸಂಸಾರವು ಅಂತ್ಯಗೊಳ್ಳುತ್ತದೆ!

## ವಿಜ್ಞಾನವು ವಕ್ರಗತಿಯದ್ದು!

**ಪ್ರಶ್ನಕರ್ತ:** 'Theory of evolution' ಹೇಳಿಕೆಯ ಪ್ರಕಾರ (ಉತ್ಕ್ರಾಂತಿವಾದದಲ್ಲಿ) ಜೀವವು ಏಕ ಇಂದ್ರಿಯ, ಎರಡು ಇಂದ್ರಿಯ ಹೀಗೆ 'develop' ಆಗುತ್ತಾ ಆಗುತ್ತಾ ಮನುಷ್ಯನ ಅವತಾರಕ್ಕೆ ಬರುತ್ತದೆ ಹಾಗೂ ಮನುಷ್ಯನಿಂದ ಮತ್ತೆ ಹಿಂದಕ್ಕೆ ಪಶುವಿನ ಅವಸ್ಥೆಗೆ ಹೋಗಲಾಗುತ್ತದೆ. ಹಾಗಿದ್ದರೆ 'evolution theory'ಯಲ್ಲಿ ಏನೋ ವಿರೋಧಾಭಾಸವಿದೆ ಎಂದು ಅನ್ನಿಸುತ್ತದೆ. ಇದನ್ನು ಸ್ವಲ್ಪ ಸ್ಪಷ್ಟವಾಗಿ ವಿವರಿಸಿ ಹೇಳುವಿರಾ?

**ದಾದಾಶ್ರೀ:** ಇಲ್ಲ. ಅದರಲ್ಲಿ ವಿರೋಧಾಭಾಸವೇನೂ ಇಲ್ಲ. 'Evolution'ನ 'theory'ಯೆಲ್ಲಾ ಸರಿಯಾಗಿಯೇ ಇದೆ. ಆದರೆ ಮನುಷ್ಯನವರೆಗೆ ಮಾತ್ರವೇ 'evolution'ನ 'theory'ಯು 'correct' (ಸರಿ) ಆಗಿದೆ, ಅದರ ನಂತರದ ವಿಚಾರವನ್ನು ಜನರು ತಿಳಿದೇ ಇಲ್ಲ.

**ಪ್ರಶ್ನಕರ್ತ:** ಮನುಷ್ಯನಿಂದ ಪಶುವಾಗಿ ಹಿಂದಕ್ಕೆ ಹೋಗುವುದು ನಿಜವೇ, ಎನ್ನುವುದು ಪ್ರಶ್ನೆಯಾಗಿದೆ.

**ದಾದಾಶ್ರೀ:** ಅದೇನೆಂದರೆ, 'Darwin Theory'ಯ ಉತ್ಕ್ರಾಂತಿವಾದದ (ವಿಕಾಸವಾದದ) ಪ್ರಕಾರ 'develop' ಆಗುತ್ತಾ, ಆಗುತ್ತಾ ಮನುಷ್ಯನವರೆಗೆ ಬರಲಾಗಿದೆ ಹಾಗೂ ಮನುಷ್ಯನ ಸ್ಥಿತಿಗೆ ಬಂದಮೇಲೆ 'egoism' (ಅಹಂಕಾರವು) ಉಂಟಾಗುವುದರಿಂದ ಕರ್ತನಾಗುತ್ತಾನೆ; ಕರ್ಮಗಳ ಕರ್ತನಾಗುವುದರಿಂದ ಮತ್ತೆ ಕರ್ಮದ ಪ್ರಮಾಣದಂತೆ ಅವನಿಗೆ ಅನುಭವಿಸಬೇಕಾಗಿ ಬರುತ್ತದೆ. 'Debit' (ಪಾಪ) ಮಾಡಿದ್ದರೆ ಆಗ ಪಶುವಿನ ಗತಿಗೆ ಹೋಗಬೇಕಾಗುತ್ತದೆ ಹಾಗೂ 'credit' (ಪುಣ್ಯ) ಮಾಡಿದ್ದರೆ ಆಗ ದೇವ ಗತಿಗೆ ಹೋಗಬೇಕಾಗಿ ಬರುತ್ತದೆ ಅಥವಾ ಮನುಷ್ಯ ಗತಿಯಲ್ಲಿ ರಾಜನ ಪಟ್ಟ ಸಿಗುತ್ತದೆ. ಆದುದರಿಂದ ಮನುಷ್ಯನಾಗಿ ಬಂದ ನಂತರ 'credit' ಹಾಗೂ 'debit' ಮೇಲೆ ಆಧರಿಸುತ್ತದೆ.

## ನಂತರ ಇಲ್ಲ ಎಂಬತ್ತನಾಲ್ಕು ಲಕ್ಷ ಯೋನಿ!

**ಪ್ರಶ್ನಕರ್ತ:** ಆದರೆ ಹೀಗೆಂದು ಹೇಳುತ್ತಾರಲ್ಲಾ, ಮಾನವ ಜನ್ಮವು ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಅಲೆದಾಡಿದ ನಂತರ ಪ್ರಾಪ್ತಿಯಾಗುತ್ತದೆ, ಹಾಗಾದರೆ ಮತ್ತೆ ಹಿಂದೆ ಹೋದರೆ ಅಷ್ಟು ಅಲೆದಾಡಿದ ನಂತರವೇ ಪುನಃ ಮಾನವ ಜನ್ಮ ಸಿಗುವುದೇ?

**ದಾದಾಶ್ರೀ:** ಹಾಗೆಂದೇನೂ ಇಲ್ಲ. ಒಂದು ಸುತ್ತು ತಿರುಗಿ ಮನುಷ್ಯ ಜನ್ಮದಲ್ಲಿ ಬಂದಮೇಲೆ ಪುನಃ ಎಲ್ಲಾ ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಅಲೆದಾಡಬೇಕಾಗಿ ಬರುವುದಿಲ್ಲ. ಯಾರಲ್ಲಿ ಪಶುವಿನ ಗುಣಗಳಿರುವವೋ, ಅವರು ಗರಿಷ್ಟ ಅಂದರೆ ಎಂಟು ಭವಗಳು ಪಶುವಿನ ಯೋನಿಯಲ್ಲಿ ಹೋಗಬೇಕಾಗಿ ಬರುತ್ತದೆ, ಅದೂ ಕೂಡಾ ನೂರು-ಇನ್ನೂರು ವರ್ಷಗಳ ಮಟ್ಟಿಗೆ ಮಾತ್ರ; ಪುನಃ ಇಲ್ಲಿಗೆಯೇ ಮನುಷ್ಯ ಗತಿಗೆ ಬರುತ್ತಾರೆ. ಒಂದು ಸುತ್ತು ತಿರುಗಿ ಮನುಷ್ಯನಾದ ಮೇಲೆ ಪುನಃ ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಅಲೆದಾಡುವುದು ಇರುವುದಿಲ್ಲ.

**ಪ್ರಶ್ನಕರ್ತ:** ಒಂದೇ ಆತ್ಮ ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಸುತ್ತುವುದು ನಿಜವೇ?

**ದಾದಾಶ್ರೀ:** ಹೌದು, ಒಂದೇ ಆತ್ಮವಾಗಿದೆ.

**ಪ್ರಶ್ನಕರ್ತ:** ಆದರೆ ಆತ್ಮವು ಪವಿತ್ರವಾಗಿದೆ ಅಲ್ಲವೇ?

**ದಾದಾಶ್ರೀ:** ಆತ್ಮವು ಪವಿತ್ರವಾಗಿಯೇ ಇದೆ. ಅದು ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಅಲೆದಾಡಲ್ಪಟ್ಟಿದ್ದರೂ ಪವಿತ್ರವಾಗಿಯೇ ಇರುತ್ತದೆ. ಅದು ಪವಿತ್ರವಾಗಿತ್ತು ಹಾಗೂ ಪವಿತ್ರವಾಗಿಯೇ ಇರುತ್ತದೆ!!

## ಇಚ್ಛೆಯ ಪ್ರಮಾಣದಂತೆ ಗತಿಯು!

**ಪ್ರಶ್ನಕರ್ತ:** ಮರಣದ ಮೊದಲು ಯಾವುದರ ಮೇಲೆ ಇಚ್ಛೆ ಇರುವುದೋ, ಆ ಪ್ರಕಾರದ ಜನ್ಮವು ಉಂಟಾಗುತ್ತದೆ ಅಲ್ಲವೇ?

**ದಾದಾಶ್ರೀ:** ಹೌದು, ನಮ್ಮ ಜನರು ಅದನ್ನು ಇಚ್ಛೆ ಎನ್ನುತ್ತಾರೆ. ಮರಣ ಹೊಂದುವ ಮೊದಲು ಇಂತಹ ಇಚ್ಛೆಗಳಿತ್ತು ಎಂದು, ಆದರೆ ಆ ಇಚ್ಛೆಗಳು ಆಗ ಎಲ್ಲಿಂದಲೋ ಬರುವುದಿಲ್ಲ. ಅದೆಲ್ಲಾ ಲೆಕ್ಕಾಚಾರವೇ ಆಗಿದೆ. ಇಡೀ ಜೀವನದಲ್ಲಿ ಏನೆಲ್ಲಾ ಮಾಡಲಾಗಿತ್ತು, ಅದು ಮರಣ ಹೊಂದುವ

ಕೊನೆಗಳಿಗೆ ಇರುವಾಗ ಅದರ ಸರಾಸರಿಯ balance sheet ಬರುತ್ತದೆ ಹಾಗೂ ಆ ಲೆಕ್ಕಾಚಾರದ ಪ್ರಮಾಣದಂತೆ ಅವರಿಗೆ ಗತಿಯು ಲಭಿಸುತ್ತದೆ.

## ಏನು ಮನುಷ್ಯನಿಂದ ಮನುಷ್ಯನೇ?

**ಪ್ರಶ್ನಕರ್ತ:** ಮನುಷ್ಯನಿಂದ ಮನುಷ್ಯನಾಗಿಯೇ ಹುಟ್ಟಬೇಕಲ್ಲವೇ?

**ದಾದಾಶ್ರೀ:** ಅದು, ತಿಳಿದುಕೊಳ್ಳುವುದರಲ್ಲಿ ತಪ್ಪಾಗಿದೆ. ಅಲ್ಲದೆ, ಸ್ತ್ರೀ ಹೊಟ್ಟೆಯಿಂದ ಮನುಷ್ಯನೇ ಹುಟ್ಟುವುದು, ಅಲ್ಲಿ ಯಾವ ಕತ್ತೆಯೂ ಹುಟ್ಟುವುದಿಲ್ಲವೆಂದು ತಿಳಿದು ಕುಳಿತ್ತಿದ್ದಾರೆ. ಮನುಷ್ಯನು ಮರಣಹೊಂದಿದರೆ ಮತ್ತೆ ಅವನು ಮನುಷ್ಯನಾಗಿಯೇ ಹುಟ್ಟುತ್ತಾನೆ ಎನ್ನುವ ತಪ್ಪು ತಿಳುವಳಿಕೆಯಾಗಿದೆ. 'ಮೂರ್ಖ, ನಿನ್ನ ವಿಚಾರಗಳೆಲ್ಲವೂ ಕತ್ತೆಯ ವಿಚಾರದಂತಿರುವಾಗ ಪುನಃ ಮನುಷ್ಯನಾಗಿ ಬರುವುದಾದರೂ ಹೇಗೆ?' ನಿನ್ನಲ್ಲಿನ ವಿಚಾರಗಳು, 'ಯಾರಿಂದ ಕಸಿದುಕೊಳ್ಳುವುದು, ಯಾರಿಗೆ ಮೋಸಮಾಡುವುದು. ತನ್ನದಲ್ಲದಿದ್ದರೂ ಅನುಭವಿಸಿಬಿಡುವುದು, ಇಂತಹ ವಿಚಾರಗಳಾಗಿದ್ದರೆ, ಆ ವಿಚಾರಗಳೇ ಎಳೆದುಕೊಂಡು ಹೋಗುತ್ತವೆ ಮುಂದಿನ ಗತಿಗೆ!'

**ಪ್ರಶ್ನಕರ್ತ:** ಜೀವಕ್ಕೆ, ಆ ರೀತಿಯ ಯಾವುದಾದರೂ ನಿಯಮವಿದೆಯೇ, 'ಅದು ಮನುಷ್ಯ ಜನ್ಮಕ್ಕೆ ಬಂದ ಮೇಲೆ ಇನ್ನು ಮನುಷ್ಯನಾಗಿಯೇ ಬರಬೇಕೇ ಹೊರತು ಬೇರೆ ಎಲ್ಲಿಗೂ ಹೋಗುವ ಹಾಗಿಲ್ಲ' ಎನ್ನುವುದು ಇದೆಯೇ?

**ದಾದಾಶ್ರೀ:** ಹಿಂದೂಸ್ಥಾನದಲ್ಲಿ ಮನುಷ್ಯನಾಗಿ ಜನ್ಮವನ್ನು ಹೊಂದಿದ ಬಳಿಕ, ಈ ನಾಲ್ಕೂ ಗತಿಗಳಲ್ಲಿ ಅಲೆದಾಡಬೇಕಾಗುತ್ತದೆ. 'Foreign'ನ ಮನುಷ್ಯರಲ್ಲಿ ಹಾಗಿಲ್ಲ. ಅವರಲ್ಲಿ ಎರಡು-ಐದು ಶೇಕಡದಷ್ಟು ಮನುಷ್ಯರು ನಿಯಮದಿಂದ ಹೊರಗುಳಿದಿರಬಹುದು. ಅವರನ್ನು ಬಿಟ್ಟು ಇನ್ನುಳಿದಂತೆ ಎಲ್ಲರೂ ಮೇಲಿನ ಗತಿಗೆ ಪ್ರಗತಿ ಹೊಂದುತ್ತಾರೆ.

**ಪ್ರಶ್ನಕರ್ತ:** ಈ ಜನರು ಯಾವುದನ್ನು ವಿಧಾತ ಎಂದು ಕರೆಯುತ್ತಾರೆ, ಅದು ಯಾರಿಗೆ ಹೇಳುತ್ತಾರೆ?

**ದಾದಾಶ್ರೀ:** ಪ್ರಕೃತಿಯನ್ನೇ ವಿಧಾತನೆಂದು ಕರೆಯುವುದು. ವಿಧಾತ ಹೆಸರಿನ ಯಾವ ದೇವಿಯು ಇಲ್ಲ. 'Scientific circumstantial evidence' (ವೈಜ್ಞಾನಿಕ ಸಂಯೋಗದ ಪುರಾವೆ) ಅದುವೇ ವಿಧಾತವಾಗಿದೆ. ನಮ್ಮ ಜನರ ನಂಬಿಕೆ ಏನೆಂದರೆ, ಆರನೆಯ ದಿನ ವಿಧಾತನು

ಹಣೆಬರಹವನ್ನು ಬರೆದಿದ್ದಾನೆ ಎಂದು. ಇದೆಲ್ಲಾ ವಿಕಲ್ಪದಿಂದ ಸರಿಯಾಗಿದೆ. ಆದರೆ ವಾಸ್ತವಿಕವಾಗಿ ತಿಳಿಯ ಬೇಕಿದ್ದರೆ, ಅದು ಸರಿಯಲ್ಲ.

ಇಲ್ಲಿನ ಕಾನೂನು ಏನೆಂದರೆ, ಯಾರು ತನ್ನದಲ್ಲದಿರುವುದನ್ನು ಎಳೆದುಕೊಳ್ಳುತ್ತಾರೋ, ಅಂಥವರಿಗೆ ಎರಡು ಕಾಲಿನಿಂದ ನಾಲ್ಕು ಕಾಲಿನ ಗತಿಯು ಬರುತ್ತದೆ. ಆದರೆ ಅದೂ ಸಹ ಶಾಶ್ವತವಾಗೇನೂ ಅಲ್ಲ. ಹೆಚ್ಚೆಂದರೆ ಇನ್ನೂರು ವರ್ಷಗಳು, ಅದೂ ಕೂಡಾ, ಏಳು-ಎಂಟು ಅವತಾರಗಳು ಜಾನುವಾರು ಗತಿಗೆ ಹೋಗುತ್ತಾರೆ, ಹಾಗೂ ಕಡಿಮೆಯೆಂದರೆ ಐದೇ ನಿಮಿಷದಲ್ಲಿ ಜಾನುವಾರು ಗತಿಗೆ ಹೋಗಿ ಮತ್ತೆ ಮನುಷ್ಯ ಗತಿಗೆ ಬರುವುದೂ ಇದೆ. ಅಲ್ಲದೆ ಎಷ್ಟೋಂದು ಜೀವಗಳು ಅಲ್ಲಿಯೇ ಒಂದೇ ನಿಮಿಷದಲ್ಲಿ ಹದಿನೇಳು ಅವತಾರಗಳನ್ನು ಬದಲಾಯಿಸುತ್ತವೆ. ಹಾಗಾಗಿ ಜಾನುವಾರು ಗತಿಗೆ ಹೋದರೆಂದರೆ ನೂರು-ಇನ್ನೂರು ವರ್ಷಗಳಷ್ಟು ಆಯುಷ್ಯವು ಇರಬೇಕೆಂದೇನೂ ಖಚಿತವಿಲ್ಲ.

## ಇದು ಅರ್ಥವಾಗುವುದು ಲಕ್ಷಣಗಳ ಮೇಲೆ!

**ಪ್ರಶ್ನಕರ್ತ:** ಈ ಜಾನುವಾರು ಯೋನಿಯಲ್ಲಿ ಹೋಗಿರುವ ಸಾಕ್ಷಿ ಏನಾದರು ಇದೆಯೇ ಅದರ ಬಗ್ಗೆ ಸ್ವಲ್ಪ ತಿಳಿಸಿ, ಅದನ್ನು ಸೈಂಟಿಫಿಕ್ ರೀತಿಯಿಂದ ಹೇಗೆ ಒಪ್ಪಿಕೊಳ್ಳುವುದು?

**ದಾದಾಶ್ರೀ:** ಇಲ್ಲಿ ಯಾರಾದರು ಸಿಟ್ಟಿನಿಂದ ಗುರ್..., ಗುರ್..., ಎನ್ನುತ್ತಿರುವ ವ್ಯಕ್ತಿಯನ್ನು ಭೇಟಿಯಾಗಿದ್ದೀರಾ ನೀವು? 'ಯಾಕೆ ಗುರ್ ಗುರ್ ಎನ್ನುವಿರಿ' ಎಂದು ಅವರನ್ನು ನೀವು ಕೇಳುವಿರಲ್ಲವೇ? ಅವರು ನಾಯಿಯ ಗತಿಯಿಂದ ಬಂದಿರುವವರಾಗಿರುತ್ತಾರೆ. ಕೆಲವರು ಮಂಗಗಳ ಹಾಗೆ ಚೇಷ್ಟೆ ಮಾಡುವಂಥವರು ಇರುತ್ತಾರೆ! ಅಲ್ಲಿಂದ ಅವರು ಬಂದಿರುತ್ತಾರೆ. ಕೆಲವರು ಬೆಕ್ಕಿನ ಹಾಗೆ ಬೇಟೆಗಾಗಿ ಕಾದುಕುಳಿತಿರುವ ರೀತಿಯಲ್ಲಿ ಕುಳಿತಿರುತ್ತಾರೆ ಹಾಗೂ ನಿಮ್ಮಿಂದ ಕಸಿದುಕೊಂಡು ಹೋಗುವುದಕ್ಕಾಗಿ, ಅಪಹರಿಸಿಕೊಂಡು ಹೋಗುವುದಕ್ಕಾಗಿ ಇರುತ್ತಾರೆ, ಇಂಥವರು ಬೆಕ್ಕಿನ ಜನ್ಮದಿಂದ ಬಂದಿರುತ್ತಾರೆ. ಇದರಿಂದಾಗಿ ಎಲ್ಲಿಂದ ಬಂದಿದ್ದಾರೆಂದು ಗುರುತಿಸಬಹುದಾಗಿದೆ ಹಾಗು ಎಲ್ಲಿಗೆ ಹೋಗುತ್ತಾರೆ ಎಂದೂ ಸಹ ಗುರುತಿಸಬಹುದು ಮತ್ತು ಇದು ಕೂಡಾ ಖಾಯಂ ಅನ್ನುವುದೇನು ಅಲ್ಲ. ಈ ಜನರು ಹೇಗೆಂದರೆ, ಅವರಿಗೆ ಪಾಪ (ಕೆಡಕು) ಮಾಡಲು ಕೂಡಾ ಸರಿಯಾಗಿ ಬರುವುದಿಲ್ಲ.

ಕಲಿಯುಗದಲ್ಲಿನ ಜನರಿಗೆ ಸರಿಯಾಗಿ ಪಾಪ ಮಾಡಲು ಸಹ ಬರುವುದಿಲ್ಲ. ಆದರೂ ಮಾಡುವುದೆಲ್ಲಾ ಪಾಪವೇ! ಹಾಗಾಗಿ ಅವರ ಪಾಪದ ಫಲವು ಹೇಗಿರುತ್ತದೆ? ಅದು ಹೆಚ್ಚೆಂದರೆ ಐವತ್ತು-ನೂರು ವರ್ಷಗಳು ಜಾನುವಾರು ಗತಿಗೆ ಹೋಗಿ ಮತ್ತೆ ಇಲ್ಲಿಗೆ ವಾಪಾಸು

ಬರುವಂಥದ್ದಾಗಿರುತ್ತದೆ. ಅದುಬಿಟ್ಟು ಸಾವಿರಾರು ಅಥವಾ ಲಕ್ಷಗಟ್ಟಲೆ ವರ್ಷಗಳಷ್ಟು ಇರುವುದಿಲ್ಲ. ಅದರಲ್ಲಿಯೂ ಕೆಲವರು ಐದು ವರ್ಷವಷ್ಟೇ ಜಾನುವಾರು ಗತಿಗೆ ಹೋಗಿ ಬರುತ್ತಾರೆ. ಹಾಗಾಗಿ ಜಾನುವಾರು ಗತಿಗೆ ಹೋಗುವುದನ್ನು ಅಪರಾಧವೆಂದು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ. ಬಡಪಾಯಿ ಜನರು, ಅಲ್ಲಿಂದ ತಕ್ಷಣವೇ ಬಂದುಬಿಡುತ್ತಾರೆ. ಯಾಕೆಂದರೆ, ಅಂತಹ ದೊಡ್ಡ ಪಾಪವನ್ನೇನೂ ಮಾಡಿರುವುದೇ ಇಲ್ಲವಲ್ಲ! ಅವರಲ್ಲಿ ಅಂತಹ ಪಾಪಗಳನ್ನು ಮಾಡುವ ಶಕ್ತಿಯಾದರೂ ಎಲ್ಲಿದೆ?

## ಹಾನಿ-ವೃದ್ಧಿಯ ನಿಯಮ!

**ಪ್ರಶ್ನಕರ್ತ:** ಈ ಮನುಷ್ಯರ ಜನಸಂಖ್ಯೆ ಹೆಚ್ಚಾಗುತ್ತಲೇ ಇದೆ, ಇದರಿಂದಾಗಿ ಜಾನುವಾರುಗಳು ಕಡಿಮೆಯಾಗಿವೆ ಎಂದು ಅರ್ಥೈಸಿ ಕೊಳ್ಳುವುದೇ?

**ದಾದಾಶ್ರೀ:** ಹೌದು, ನಿಜವೇ. ಎಷ್ಟು ಆತ್ಮಗಳಿವೆ, ಅಷ್ಟೇ ಆತ್ಮಗಳು ಇರುತ್ತವೆ. ಆದರೆ conversion (ರೂಪಾಂತರ) ಆಗುತಲಿರುತ್ತದೆ. ಒಮ್ಮೆ ಮನುಷ್ಯರು ಜಾಸ್ತಿಯಾದಾಗ ಜಾನುವಾರುಗಳು ಕಡಿಮೆಯಾಗುತ್ತವೆ ಹಾಗೂ ಮತ್ತೊಮ್ಮೆ ಜಾನುವಾರುಗಳು ಜಾಸ್ತಿಯಾದಾಗ ಮನುಷ್ಯರು ಕಡಿಮೆಯಾಗುತ್ತಾರೆ. ಹೀಗೆ conversion ಆಗುತ್ತಲೇ ಇರುತ್ತದೆ. ಇನ್ನು ಮುಂದಕ್ಕೆ ಮನುಷ್ಯರು ಕಡಿಮೆಯಾಗಲಿದ್ದಾರೆ. ಈಗಾಗಲೇ 1993ನೇ ಸಾಲಿನಿಂದ ಕಡಿಮೆಯಾಗಲು ಪ್ರಾರಂಭವಾಗಿದೆ!

ಜನರು calculation (ಗಣನೆ) ಮಾಡುತ್ತಲೇ ಇರುತ್ತಾರೆ, ಏನೆಂದರೆ 2000ನೆ ಸಾಲಿನಲ್ಲಿ ಹೀಗಾಗುತ್ತದೆ, ಹಾಗಾಗುತ್ತದೆ. ಹಿಂದೂಸ್ಥಾನದಲ್ಲಿ ಜನಸಂಖ್ಯೆ ಹೆಚ್ಚಾದರೆ ನಾವು ತಿನ್ನುವುದು ಏನು? ಹೀಗೆ calculations ಮಾಡುತ್ತಿರುತ್ತಾರೋ, ಇಲ್ಲವೋ? ಇದು ಯಾವ ರೀತಿಯಾಗಿದೆ ಎಂದು simile (ಹೋಲಿಸಿ) ಹೇಳಲೇ?

ಒಬ್ಬ ಹದಿನಾಲ್ಕು ವರ್ಷದ ಹುಡುಗ, ಅವನ ಎತ್ತರ ನಾಲ್ಕು ಅಡಿ, ನಾಲ್ಕು ಇಂಚು ಆಗಿರುತ್ತದೆ ಹಾಗೂ ಅವನು ಹದಿನೆಂಟನೇ ವಯಸ್ಸಿಗೆ ಬಂದಾಗ, ಐದು ಅಡಿ ಎತ್ತರಕ್ಕೆ ಬೆಳೆಯುತ್ತಾನೆ. ಆಗ ಏನು ಹೇಳುತ್ತಾರೆ, ನಾಲ್ಕು ವರ್ಷದಲ್ಲಿ ಎಂಟು ಇಂಚು ಹೆಚ್ಚಾಗಿದೆ ಎಂದು. ಹಾಗಾದರೆ ಎಪ್ಪತ್ತು ವರ್ಷಕ್ಕೆ ಎಷ್ಟು ಆಗಬಹುದು? ಈ ರೀತಿಯಲ್ಲಿ calculation ಮಾಡಿದ ಹಾಗೆ, ಜನಸಂಖ್ಯೆಯನ್ನು ಕೂಡಾ calculation ಮಾಡುತ್ತಾರೆ!

## ಮಕ್ಕಳಿಗೆ ಬಾಧೆಗಳು ಯಾಕೆ?

**ಪ್ರಶ್ನಕರ್ತ:** ದೋಷವೇ ಮಾಡದ ಮಕ್ಕಳಿಗೆ ಶಾರೀರಿಕ ನೋವನ್ನು ಅನುಭವಿಸಬೇಕಾಗಿ ಬರುತ್ತದೆಯಲ್ಲ, ಅದಕ್ಕೆ ಕಾರಣವೇನು?

**ದಾದಾಶ್ರೀ:** ಮಗುವಿನ ಕರ್ಮದ ಉದಯವು ಮಗುವಿಗೆ ಅನುಭವಿಸಬೇಕಾಗುತ್ತದೆ ಹಾಗೂ ತಾಯಿಯಾದವಳು, ಅದನ್ನು ನೋಡಿ ದುಃಖವನ್ನು ಅನುಭವಿಸಬೇಕಾಗಿದೆ. ಮೂಲದಲ್ಲಿ ಮಗುವಿನ ಕರ್ಮವಾಗಿದೆ, ಅದರಲ್ಲಿ ತಾಯಿಯ ಅನುಮೋದನೆ ಇದುದರಿಂದ 'Mother' ಕೂಡಾ ಅದನ್ನು ನೋಡಿ ಅನುಭವಿಸಬೇಕಾಗಿದೆ. ಮಾಡುವುದು, ಮಾಡಿಸುವುದು ಹಾಗೂ ಅನುಮೋದಿಸುವುದು (ಸಮ್ಮತಿಸುವುದು)-ಈ ಮೂರೂ ಕರ್ಮದ ಬಂಧನಕ್ಕೆ ಕಾರಣವಾಗಿವೆ.

## ಮನುಷ್ಯ ಜನ್ಮದ ಪ್ರಾಮುಖ್ಯತೆ!

ಮನುಷ್ಯ-ದೇಹದಲ್ಲಿ ಬರುವ ಮೊದಲು ಇನ್ನಿರುವ ಗತಿಗಳು ಯಾವುವೆಂದರೆ, ದೇವಗತಿ, ತಿರ್ಯಂಚ (ಪಶು, ಪಕ್ಷಿ ಹಾಗು ವನಸ್ಪತಿ) ಮತ್ತು ನರಕ ಗತಿ. ಈ ಗತಿಗಳಿಗೆಲ್ಲಾ ಹೋಗಿ ಬಂದಮೇಲೆ ಮನುಷ್ಯ ದೇಹವು ಸಿಗುವುದು. ಅಲ್ಲದೆ ಈ ಎಲ್ಲಾ ಅಲೆದಾಟಕ್ಕೆ ಅಂತ್ಯವೂ ಮನುಷ್ಯ ದೇಹದಿಂದಲೇ ಸಿಗುವುದು. ಈ ಮನುಷ್ಯ-ದೇಹವನ್ನು ಸಾರ್ಥಕವಾಗಿಸಿಕೊಳ್ಳಲು ಕಲಿತುಕೊಂಡರೆ, ಆಗ ಮೋಕ್ಷವನ್ನು ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆ ಇದೆ ಹಾಗೂ ಅದನ್ನು ಕಲಿಯದೇ ಹೋದರೆ ಆಗ ಅಲೆದಾಟದ ಸಾಧನಗಳು ಇನ್ನೂ ಅಧಿಕವಾಗಿ ದೊರಕಿಕೊಂಡು ಬರುವ ಸಾಧ್ಯತೆಯೂ ಇದೆ! ಬೇರೆ ಗತಿಗಳಲ್ಲಿ ಕೇವಲ ಬಿಡುಗಡೆ ಇದೆ. ಆದರೆ ಇಲ್ಲಿ ಎರಡೂ ಇದೆ, ಬಿಡುಗಡೆಯು ಇದೆ ಹಾಗೂ ಜೊತೆ-ಜೊತೆಗೆ ಬಂಧನವೂ ಕೂಡಾ ಇದೆ. ಹಾಗಾಗಿ ದುರ್ಲಭವಾದ ಮನುಷ್ಯ-ದೇಹವು ಪ್ರಾಪ್ತವಾಗಿರುವಾಗ, ಅದರಿಂದ ಕೆಲಸವನ್ನು ಮಾಡಿಕೊಳ್ಳಬೇಕು. ಅನಂತ ಅವತಾರ ಆತ್ಮವನ್ನು ದೇಹಕ್ಕಾಗಿ ವ್ಯಯ ಮಾಡಲಾಗಿತ್ತು. ಈಗ ಈ ಒಂದು ಅವತಾರದ ಯಾವ ದೇಹವಿದೆಯೋ ಅದನ್ನು ಆತ್ಮಕ್ಕಾಗಿ ವ್ಯಯ ಮಾಡಿದರೆ, ಆಗ ಕೆಲಸವೇ ಆಗಿಹೋಗುತ್ತದೆ!

ಮನುಷ್ಯ-ದೇಹದಲ್ಲಿರುವಾಗ ಯಾರಾದರೂ 'ಜ್ಞಾನಿ ಪುರುಷರು' ದೊರೆತರೆ, ಆಗ ಮೋಕ್ಷದ ಉಪಾಯವು ದೊರಕಿಬಿಡುತ್ತದೆ. ದೇವಲೋಕದವರೂ ಸಹ ಮನುಷ್ಯ-ದೇಹವನ್ನು ಪಡೆಯಲು ಆತುರರಾಗಿರುತ್ತಾರೆ. ಜ್ಞಾನಿ ಪುರುಷರ ಭೇಟಿಯಾಗುವ ಸಂಯೋಗವು ದೊರೆತಾಗ, ಅನಂತ ಅವತಾರದಿಂದ ಶತ್ರು ಸಮಾನವಾಗಿದ್ದ ಈ ದೇಹವು, ಈಗ ಪರಮ ಮಿತ್ರನಾಗಿ

ಬಿಡುತ್ತದೆ! ಅಲ್ಲದೆ ಈ ದೇಹದಿಂದಾಗಿ ನಿಮಗೆ ಜ್ಞಾನಿ ಪುರುಷರು ದೊರಕಿದ್ದಾರೆ, ಹಾಗಿರುವಾಗ ಸಂಪೂರ್ಣ ಕೆಲಸವನ್ನು ಮಾಡಿಕೊಳ್ಳಿ. ಎಲ್ಲಾ ರೀತಿಯ ಹೊಂದಾಣಿಕೆಯನ್ನು ಮಾಡಿಕೊಂಡು ಗಡಿಯನ್ನು ದಾಟಿಕೊಂಡು ಹೊರಬನ್ನಿ.

## ಅಜನ್ಮ-ಅಮರವಾಗಿರುವುದಕ್ಕೆ, ಆವಾಗಮನ ಎಲ್ಲಿಂದ?

**ಪ್ರಶ್ನಕರ್ತ:** ಈ ಆವಾಗಮನದ (ಆಗಮನದ) ತಿರುಗಾಟವು ಯಾರಿಗೆ?

**ದಾದಾಶ್ರೀ:** ಯಾವ ಅಹಂಕಾರ ಇದೆಯೋ, ಅದಕ್ಕೆ ಆವಾಗಮನ ಇರುತ್ತದೆ. ಆತ್ಮವಂತೂ ಅದರಷ್ಟಕ್ಕೆ ದರ್ಶನದಲ್ಲಿಯೇ ಇರುವುದಾಗಿದೆ. ಈ ಅಹಂಕಾರವೂ ಕೂಡಾ ಕೊನೆಗೆ ಸ್ಥಗಿತವಾಗುತ್ತದೆ, ಅದರ ತಿರುಗಾಟವೂ ನಿಂತುಹೋಗುತ್ತದೆ!

## ನಂತರ ಮರಣದ ಭಯವೇ ಇರುವುದಿಲ್ಲ!

**ಪ್ರಶ್ನಕರ್ತ:** ಯಾವ ಈ ಒಂದು ಸನಾತನ ಶಾಂತಿಯನ್ನು ಹೊಂದಲಾಗಿದೆಯೋ, ಅದು ಕೇವಲ ಈ ಜನ್ಮ ಪೂರ್ತಿಗಾಗಿಯೋ ಅಥವಾ ಜನ್ಮ ಜನ್ಮಾಂತರದವರೆಗೂ ಇರುವುದೋ?

**ದಾದಾಶ್ರೀ:** ಇದು ಪರ್ಮನೆಂಟ್ ಆಗಿದೆ. ನಂತರ ಕರ್ತನೇ ಇಲ್ಲದೆ ಇರುವಾಗ, ಕರ್ಮ ಬಂಧನವೂ ಇಲ್ಲದಿರುವಾಗ, ಒಂದೆರಡು ಅವತಾರಗಳಲ್ಲಿ ಮೋಕ್ಷವು ಆಗಬೇಕಾಗಿದೆ; ತಪ್ಪಿಸಿಕೊಳ್ಳುವಂತಿಲ್ಲ, ಹೋಗದಿದ್ದರೆ ನಡೆಯುವುದಿಲ್ಲ. ಯಾರಿಗೆ ಮೋಕ್ಷಕ್ಕೆ ಹೋಗಲು ಬೇಡವೋ, ಅವರು ಈ ಧಂದೆಯನ್ನು ಮಾಡುವುದೇ ಬೇಡ. ಈ 'line'ಗೆ ಬರುವುದೇ ಬೇಡ. ಮೋಕ್ಷವು ಇಷ್ಟವಿಲ್ಲದಿರುವಾಗ ಈ 'line'ನಲ್ಲಿ ಬರುವುದೇ ಬೇಡ.

**ಪ್ರಶ್ನಕರ್ತ:** ಈ 'ಜ್ಞಾನ' ಇದೆಯಲ್ಲ ಇದು ಇನ್ನೊಂದು ಜನ್ಮಕ್ಕೆ ಹೋದಾಗ ಅದು ನಿಜವಾಗಿ ನೆನಪಿನಲ್ಲಿ ಇರುತ್ತದೆಯೇ?

**ದಾದಾಶ್ರೀ:** ಎಲ್ಲವೂ ಈಗ ಹೇಗಿದೆ, ಅದೇ ರೀತಿಯಲ್ಲಿರುತ್ತದೆ. ಏನೂ ಬದಲಾವಣೆಯೇ ಇಲ್ಲ. ಕಾರಣವೇನೆಂದರೆ, ಎಲ್ಲಿ ಕರ್ಮಗಳು ಬಂಧಿಸುವುದಿಲ್ಲ, ಅಲ್ಲಿ ಸಮಸ್ಯೆಗಳ ಗೊಂದಲವೇ ಉಂಟಾಗುವುದಿಲ್ಲ!

**ಪ್ರಶ್ನಕರ್ತ:** ಅದರ ಅರ್ಥವು ಹೀಗೆಂದಾಗುತ್ತದೆ, ಹಿಂದಿನ ಜನ್ಮದಲ್ಲಿ ನಮ್ಮದು ಯಾವ ಕರ್ಮಗಳಿತ್ತೋ ಅದನ್ನು ಅನುಸರಿಸಿಕೊಂಡು ಸಮಸ್ಯೆಗಳು-ಗೊಂದಲಗಳು ನಡೆಯುತ್ತಲೇ ಇರುತ್ತವೆಯೇ?

**ದಾದಾಶ್ರೀ:** ಹಿಂದಿನ ಅವತಾರದಲ್ಲಿ ಅಜ್ಞಾನದಿಂದ ಕರ್ಮವನ್ನು ಕಟ್ಟಿಕೊಳ್ಳಲಾಗಿದೆ, ಆ ಕರ್ಮದ 'effect' ಈಗ ಬಂದಿದೆ. 'Effect' ಅನ್ನು ಅನುಭವಿಸಲೇ ಬೇಕಾಗಿದೆ. ಈ 'effect' ಅನ್ನು ಅನುಭವಿಸುತ್ತಾ, ಅನುಭವಿಸುತಲಿರುವಾಗ, ಜ್ಞಾನಿಯು ದೊರಕದೇ ಹೋದರೆ ಆಗ ಪುನಃ ಹೊಸದಾಗಿ causes ಹಾಗೂ ಹೊಸದಾದ effect ಹುಟ್ಟು ಹಾಕುತ್ತಲೇ ಇರುವುದಾಗಿದೆ. 'Effect'ನಿಂದ ಪುನಃ 'causes'ನ ಉತ್ಪಾದನೆಯನ್ನು ಮಾಡುತ್ತಲೇ ಇರುವುದಾಗಿದೆ. ಹಾಗೂ ಆ causes ಪುನಃ ಮುಂದಿನ ಭವದಲ್ಲಿ effect ರೂಪದ್ಲಲಿ ಬರುತ್ತದೆ. Causes and effect, effect and causes, ಇದು ನಡೆಯುತ್ತಲೇ ಇರುತ್ತದೆ. ಯಾವಾಗ ಜ್ಞಾನಿ ಪುರುಷರು 'causes' ಅನ್ನು ನಿಲ್ಲಿಸಿಬಿಡುತ್ತಾರೆ, ಆಗ effect ಮಾತ್ರವೇ ಅನುಭವಿಸಲು ಉಳಿದಿರುತ್ತದೆ. ಅಲ್ಲಿಂದ ಮುಂದಕ್ಕೆ ಕರ್ಮದ ಬಂಧನವಾಗುವುದು ನಿಂತು ಹೋಗುತ್ತದೆ.

ಸಂಪೂರ್ಣವಾದ ಜ್ಞಾನವು ನೆನಪಿನಲ್ಲಿ ಇರುವುದಷ್ಟೇ ಅಲ್ಲದೆ, ತಾನು ಆ ಸ್ವರೂಪವೇ ಆಗಿಬಿಡುವುದಾಗಿದೆ. ನಂತರ ಮರಣದ ಭಯವೇ ಇರುವುದಿಲ್ಲ! ಯಾವುದರ ಭಯವೂ ಇರುವುದಿಲ್ಲ, ಹಾಗೂ ನಿರ್ಭಯವಾಗಿ ಇರುವುದಾಗಿದೆ!

## ಅಂತಿಮ ಸಮಯದ ಜಾಗೃತಿ!

### ಜೀವಂತವಾಗಿ ಇರುವವರೆಗೆ!

**ಪ್ರಶ್ನಕರ್ತ:** ದಾದಾ, ಜ್ಞಾನವನ್ನು ತೆಗೆದುಕೊಳ್ಳುವ ಮೊದಲು ಈ ಭವದಲ್ಲಿ ಯಾವುದೆಲ್ಲಾ ಪರ್ಯಾಯಗಳನ್ನು ಕಟ್ಟಿಕೊಳ್ಳಲಾಗಿತ್ತೋ, ಅವುಗಳ ನಿವಾರಣೆಯನ್ನು ಯಾವ ರೀತಿಯಿಂದ ಮಾಡಬಹುದು?

**ದಾದಾಶ್ರೀ:** ನೀವು ಜೀವಂತವಾಗಿ ಇರುವಲ್ಲಿಯವರೆಗೂ ಪಶ್ಚಾತ್ತಾಪವನ್ನು ಮಾಡಿ ಅವನ್ನು ಸ್ವಚ್ಛಗೊಳಿಸಬೇಕು, ಆದರೆ ಅಲ್ಲಿ ಕೆಲವು ಮಾತ್ರವೇ ನಿರ್ಮೂಲನವಾಗುತ್ತವೆ, ಎಲ್ಲವೂ ನಿವಾರಣೆಯಾಗುವುದಿಲ್ಲ. ಸಡಿಲವಂತೂ ಆಗಿಬಿಡುತ್ತವೆ. ಸಡಿಲವಾಗುವವು ಹೇಗೆಂದರೆ, ಮುಂದಿನ ಭವದಲ್ಲಿ ಕೈಯಿಂದ ಸುಮ್ಮನೆ ಮುಟ್ಟಿದ ಕೂಡಲೇ ಗಂಟು ಬಿಚ್ಚಿಕೊಂಡು ಬಿಡುತ್ತವೆ!

**ಪ್ರಶ್ನಕರ್ತ:** ಪ್ರಾಯಶ್ಚಿತ್ತದಿಂದ ಎಲ್ಲವೂ ಕಳಚಿ ಬೀಳುತ್ತವೆಯೇ?

**ದಾದಾಶ್ರೀ:** ಹೌದು, ನಾಶವಾಗಿ ಬಿಡುತ್ತವೆ. ಕೆಲವೊಂದು ಪ್ರಕಾರದ ಬಂಧನವಿರುತ್ತವೆ, ಆ ಕರ್ಮಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದರಿಂದ ಬಿಗಿಯಾಗಿರುವ ಗಂಟುಗಳು ಸಡಿಲವಾಗಿ ಬಿಡುತ್ತವೆ. ನಮ್ಮ ಪ್ರತಿಕ್ರಮಣದಲ್ಲಿ ಬಹಳಷ್ಟು ಶಕ್ತಿ ಇದೆ. ದಾದಾರವರ ಹಾಜರಿಯನ್ನು ಇಟ್ಟುಕೊಂಡು ಮಾಡಿದಾಗ ಕೆಲಸವಾಗಿಬಿಡುತ್ತದೆ.

## ಈ ಜ್ಞಾನ ಪ್ರಾಪ್ತಿಯ ಬಳಿಕದ ಲೆಕ್ಕಾಚಾರ ಮಹಾವಿದೇಹಕ್ಕಾಗಿ!

ಕರ್ಮಗಳ ಹೊರೆಯಿಂದಾಗಿ ಅವತಾರಗಳನ್ನು ಪಡೆಯಬೇಕಾಗಿ ಬಂದರೆ ಬರಲಿ, ಆದರೆ ಅದು ಕೇವಲ ಇನ್ನು ಒಂದು-ಎರಡು ಅವತಾರಗಳಷ್ಟೇ. ನಂತರ 'ಸಿಮಂಧರ್ ಸ್ವಾಮಿ'ಯ ಬಳಿಗೆ ಹೋಗಲೇ ಬೇಕಾಗಿದೆ. ಇಲ್ಲಿಂದ ಮುಂದಕ್ಕೆ ಹೋಗಲು ಮೊದಲಿನ ಲೆಕ್ಕಾಚಾರದ ಪ್ರಕಾರ ಯಾವುದೋ ಬಹಳ ಅಂಟಿಕೊಂಡಿರುವ ಕರ್ಮಗಳಿವೆ, ಅವುಗಳನ್ನು ಸಂಪೂರ್ಣವಾಗಿ ಮುಗಿಸದೆ, ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ!

**ಪ್ರಶ್ನಕರ್ತ:** ಪ್ರತಿಕ್ರಮಣ ಮಾಡುವುದರಿಂದ ಕರ್ಮಗಳ ಹೊರೆಯು ಕಡಿಮೆಯಾಗುತ್ತದೆಯೇ?

**ದಾದಾಶ್ರೀ:** ಕಡಿಮೆಯಾಗುತ್ತದೆ! ಅಲ್ಲದೆ ಶೀಘ್ರವಾಗಿ ಸಮಾಧಾನವೂ ದೊರಕುತ್ತದೆ.

## 'ನಾವು' ಹೀಗೆ ಮಾಡಿದೆವು ನಿವಾರಣೆ ವಿಶ್ವದೊಂದಿಗೆ!

ನಮ್ಮಿಂದೆಷ್ಟು ತಪ್ಪುಗಳನ್ನು ಮಾಡಲಾಗಿತ್ತೋ, ಅವುಗಳಿಗೆ ಪಶ್ಚಾತ್ತಾಪ, ಪ್ರತಿಕ್ರಮಣ, ಪ್ರತಿಜ್ಞೆಯನ್ನು ಮಾಡಬೇಕು. ಎಷ್ಟು ತೀವ್ರತೆಯಿಂದ ಪ್ರತಿಕ್ರಮಣವನ್ನು ಮಾಡಲಾಗುವುದೋ, ಅಷ್ಟು ಮೋಕ್ಷವು ಸಮೀಪಕ್ಕೆ ಬರುವುದಾಗಿದೆ.

**ಪ್ರಶ್ನಕರ್ತ:** ಈ files ಗಳು ಮತ್ತೆ ಅಂಟಿಕೊಳ್ಳುವುದಿಲ್ಲ ತಾನೇ ಇನ್ನೊಂದು ಜನ್ಮದಲ್ಲಿ?

**ದಾದಾಶ್ರೀ:** ಯಾಕೆ ತೆಗೆದುಕೊಂಡು ಹೋಗಬೇಕು? ನಾವು ಇನ್ನೊಂದು ಜನ್ಮಕ್ಕೆ ಯಾಕೆ ತೆಗೆದುಕೊಂಡು ಹೋಗಬೇಕು? ಈಗಿಂದೀಗಲೇ ಪ್ರತಿಕ್ರಮಣ ಎಷ್ಟಾಗುತ್ತದೆ ಅಷ್ಟು ಮಾಡಿ ಮುಗಿಸಿಬಿಡಬೇಕು. ಯಾವ ಕೆಲಸದ ಒತ್ತಡವೂ ಇಲ್ಲದಿರುವಾಗ, 'files'ಗಳ ಪ್ರತಿಕ್ರಮಣವನ್ನು ಮಾಡುತಲಿರಬೇಕು. 'ಚಂದುಭಾಯ್'ಗೆ, 'ನೀವು' ಕೇವಲ ಇಷ್ಟು ಹೇಳಬೇಕು, 'ನೀನು ಪ್ರತಿಕ್ರಮಣ ಮಾಡುತಲಿರು' ಎಂದು. ನಿಮ್ಮ ಮನೆಯಲ್ಲಿನ ಪ್ರತಿಯೊಬ್ಬ ವ್ಯಕ್ತಿಗೂ, ಒಂದಲ್ಲಾ

ಒಂದು ಸಲ ಈ ಮೊದಲು ನಿಮ್ಮಿಂದ ದುಃಖವನ್ನು ಕೊಡಲಾಗಿರುತ್ತದೆ, ಅದರ ಪ್ರತಿಕ್ರಮಣವನ್ನು ನೀವು ಮಾಡಬೇಕು. ಸಂಖ್ಯಾತ ಹಾಗೂ ಅಸಂಖ್ಯಾತ ಜನ್ಮಗಳಲ್ಲಿ ಯಾವ ರಾಗ-ದ್ವೇಷಗಳನ್ನು, ವಿಷಯ, ಕಷಾಯದಿಂದ ದೋಷಗಳನ್ನು ಮಾಡಲಾಗಿತ್ತೋ, ಅವುಗಳಿಗೆ ಕ್ಷಮೆಯಾಚಿಸಬೇಕು. ಹೀಗೆ ದಿನವೂ ಒಬ್ಬೊಬ ವ್ಯಕ್ತಿಯ ಬಗ್ಗೆ, ಹಾಗೆಯೇ ಮನೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ಪ್ರತಿಕ್ರಮಣ ಮಾಡಬೇಕು. ನಂತರ ಅಕ್ಕಪಕ್ಕದವರನ್ನು, ನೆರೆ-ಹೊರೆಯವರನ್ನು ಎಲ್ಲರನ್ನೂ ಗಣನೆಗೆ ತೆಗೆದುಕೊಂಡು, ಉಪಯೋಗ ಪೂರ್ವಕವಾಗಿ ಈ ಕೆಲಸವನ್ನು ಮಾಡಬೇಕು. ನೀವು ಹೀಗೆ ಮಾಡಿದಾಗ, ಭಾರವು ಕಡಿಮೆಯಾಗುತ್ತದೆ. ಹೀಗೆ ಮಾಡದೇ ಹೋದರೆ, ತನ್ನಷ್ಟಕ್ಕೆ ಹಗುರವಾಗಲು ಸಾಧ್ಯವಿಲ್ಲ.

ನಾವು ಇಡೀ ಜಗತ್ತಿನೊಂದಿಗೆ ಈ ರೀತಿಯಲ್ಲಿ ನಿವಾರಣೆಯನ್ನು ಮಾಡಿಕೊಂಡಿದ್ದೇವೆ. ಹೀಗೆ ಮೊದಲು ನಿವಾರಣೆಯನ್ನು ಮಾಡಿಕೊಂಡ ಬಳಿಕವೇ ನಮಗೆ ಆ ದೋಷಗಳಿಂದ ಬಿಡಿಸಿಕೊಳ್ಳಲು ಸಾಧ್ಯವಾಯಿತು. ಎಲ್ಲಿಯವರೆಗೆ ನಮ್ಮ ದೋಷಗಳು ನಿಮ್ಮ ಮನಸ್ಸಿನಲ್ಲಿ ಇರುತ್ತವೆ, ಅಲ್ಲಿಯವರೆಗೆ ನಮಗೆ ನೆಮ್ಮದಿಯಾಗಿರಲು ಬಿಡುವುದಿಲ್ಲ! ಹಾಗಾಗಿ ನಾವು ಹೇಗೆ ಪ್ರತಿಕ್ರಮಣ ಮಾಡುತ್ತೇವೆಂದರೆ, ಆಗಿಂದಾಗಲೇ ಎಲ್ಲವೂ ಅಳಿದುಹೋಗುವುದು.

## ಮೃತ್ಯು ಹೊಂದಿದವರ ಪ್ರತಿಕ್ರಮಣ!

**ಪ್ರಶ್ನಕರ್ತ:** ಯಾರಿಂದ ಕ್ಷಮೆ ಕೇಳಬೇಕಿರುತ್ತದೆಯೋ ಆ ವ್ಯಕ್ತಿಯ ದೇಹಾಂತವಾಗಿಬಿಟ್ಟಿದ್ದರೆ, ಆಗ ಯಾವ ರೀತಿಯಲ್ಲಿ ಪ್ರತಿಕ್ರಮಣ ಮಾಡಬೇಕು?

**ದಾದಾಶ್ರೀ:** ದೇಹಾಂತವಾಗಿದ್ದರೆ, ಆಗಲೂ ನಮ್ಮಲ್ಲಿ ಅವರ ಭಾವಚಿತ್ರ ಇರುತ್ತದೆ, ಅವರ ಮುಖ ನೆನಪಿರುತ್ತದೆ, ಅವರನ್ನು ನೆನಪಿಸಿಕೊಂಡು ಮಾಡಬಹುದು. ಮುಖ ನೆನಪಿಗೆ ಬಾರದೆ ಹೋದರೆ, ಅವರ ಹೆಸರು ತಿಳಿದಿರುತ್ತದೆ ಆಗ ಅವರ ಹೆಸರಿನಲ್ಲಿ ಮಾಡಬಹುದು, ಇದೆಲ್ಲಾ ಅವರಿಗೆ ಹೋಗಿ ತಲುಪುತ್ತದೆ.

**ಪ್ರಶ್ನಕರ್ತ:** ಮರಣ ಹೊಂದಿದ ವ್ಯಕ್ತಿಗಾಗಿ ಪ್ರತಿಕ್ರಮಣವನ್ನು ಯಾವ ರೀತಿಯಲ್ಲಿ ಮಾಡಬೇಕು?

**ದಾದಾಶ್ರೀ:** ಮನಸ್ಸು-ವಚನ-ಕಾಯ, ಭಾವಕರ್ಮ-ದ್ರವ್ಯಕರ್ಮ-ನೊಕರ್ಮ, ಮೃತರ ಹೆಸರು ಹಾಗೂ ಅವರ ಹೆಸರಿನ ಎಲ್ಲಾ ಮಾಯೆಯಿಂದ ಭಿನ್ನವಾಗಿರುವ ಅವರ ಶುದ್ಧಾತ್ಮನನ್ನು ಜ್ಞಾಪಿಸಿಕೊಂಡು, 'ಇಂತಹ ದೋಷವು ಆಗಿತ್ತು' ಎಂದು ನೆನಪು (ಆಲೋಚನೆ) ಮಾಡಿಕೊಂಡು, ಆ ದೋಷಕ್ಕಾಗಿ ನನಗೆ ಈಗ ಪಶ್ಚಾತ್ತಾಪವಾಗುತ್ತಿದೆ ಹಾಗೂ ಅದಕ್ಕಾಗಿ ನನ್ನನ್ನು ಕ್ಷಮಿಸಿ,

ಎಂದು,ಕೇಳಿಕೊಳ್ಳಬೇಕು (ಇದು ಪ್ರತಿಕ್ರಮಣ). ಅಂತಹ ದೋಷವನ್ನು ಮಾಡದೆ ಇರಲು ದೃಢ ನಿಶ್ಚಯ ಮಾಡುತ್ತೇನೆ, ಹಾಗೆಂದು ನಿರ್ಧಾರವನ್ನು ಮಾಡಬೇಕು (ಇದು ಪ್ರತ್ಯಾಖ್ಯಾನ್/ಪ್ರತಿಜ್ಞೆ). 'ನಾವು' ಸ್ವತಃ, 'ಚಂದುಭಾಯ್'ನ ಜ್ಞಾತಾ-ದೃಷ್ಟಾ ಪದದಲ್ಲಿ ಇದ್ದು ನೋಡಬೇಕು; ಈ 'ಚಂದುಭಾಯ್' ಎಷ್ಟು ಪ್ರತಿಕ್ರಮಣ ಮಾಡಿದ, ಹೇಗೆ ಮಾಡಿದ, ಹಾಗೂ ಎಷ್ಟು ಶ್ರದ್ಧೆಯಿಂದ ಮಾಡಿದ ಎಂದು.

**-ಜೈ ಸಚ್ಚಿದಾನಂದ್**

************

# ಅಂತಿಮ ಸಮಯದ ಪ್ರಾರ್ಥನೆ!

**ಹೇ ದಾದಾ ಭಗವಾನ್, ಹೇ ಶ್ರೀ ಸಿಮಂಧರ್ ಸ್ವಾಮಿ ಪ್ರಭು, ನಾನು, ಮನಸ್ಸು-ವಚನ-ಕಾಯ, ** ಹಾಗೂ ** ನ ಹೆಸರಿನ ಸರ್ವಮಾಯಾ, ಭಾವಕರ್ಮ-ದ್ರವ್ಯಕರ್ಮ-ನೋಕರ್ಮ, ತಾವು ಪ್ರಕಟ ಪರಮಾತ್ಮ ಸ್ವರೂಪ ಪ್ರಭುಗಳ ಸುಚರಣದಲ್ಲಿ ಸಮರ್ಪಿಸುತ್ತೇನೆ.**

**ಹೇ ದಾದಾ ಭಗವಾನ್, ಹೇ ಶ್ರೀ ಸಿಮಂಧರ್ ಸ್ವಾಮಿ ಪ್ರಭು, ನಾನು ನಿಮ್ಮಲ್ಲಿ ಅನನ್ಯ ಶರಣು ಬಂದಿದ್ದೇನೆ. ನನಗೆ ನಿಮ್ಮ ಅನನ್ಯ ಶರಣವು ದೊರಕುವಂತಾಗಲಿ. ಕೊನೆ ಗಳಿಗೆಯಲ್ಲಿ ನಿಮ್ಮ ಹಾಜರಿ ಇರಲಿ. ನನ್ನ ಕೈ ಹಿಡಿದು ಮೋಕ್ಷಕ್ಕೆ ಕರೆದೊಯ್ಯಿರಿ. ಕೊನೆ ತನಕ ಜೊತೆಯಲ್ಲಿಯೇ ಇರುವಂತಾಗಲಿ.**

**ಹೇ ಪ್ರಭು, ನನಗೆ ಮೋಕ್ಷವನ್ನು ಬಿಟ್ಟು ಈ ಜಗತ್ತಿನಲ್ಲಿನ ಬೇರೆ ಯಾವುದೇ ವಿನಾಶಿ ವಸ್ತು ಬೇಕಿಲ್ಲ. ನನ್ನ ಮುಂದಿನ ಜನ್ಮವು ನಿಮ್ಮಯ ಚರಣದಲ್ಲಿ ಹಾಗೂ ಶರಣದಲ್ಲಿಯೇ ಆಗುವಂತಾಗಲಿ.**

**'ದಾದಾ ಭಗವಾನ್ ನ ಅಸೀಮ ಜೈ ಜೈಕಾರ್ ಹೋ'** ಎಂದು ಹೇಳುತ್ತಲೇ ಇರಬೇಕು.

** ಅಂತಿಮ ಸಮಯವು ಯಾರಿಗೆ ಬಂದಿರುವುದೋ, ಆ ವ್ಯಕ್ತಿಯು ತನ್ನ ಹೆಸರನ್ನು ಹೇಳಿಕೊಳ್ಳಬೇಕು.

(ಈ ರೀತಿಯಾಗಿ ಆ ವ್ಯಕ್ತಿಯು ಆಗಾಗ ಹೇಳಿಕೊಳ್ಳುತಲಿರಬೇಕು ಅಥವಾ ಯಾರಾದರು ಆ ವ್ಯಕ್ತಿಯ ಬಳಿ ಕುಳಿತು ಆಗಾಗ ಹೇಳುತಲಿರಬೇಕು.)

*********

# ಮೃತ್ಯು ಹೊಂದಿದ ವ್ಯಕ್ತಿಗಾಗಿ ಪ್ರಾರ್ಥನೆ!

**ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಲ್ಲಿ, ಪ್ರತ್ಯಕ್ಷ 'ಸಿಮಂಧರ್ ಸ್ವಾಮಿ'ಯ ಸಾಕ್ಷಿಯಲ್ಲಿ, ದೇಹಧಾರಿ ** ನ ಮನಸ್ಸು-ವಚನ–ಕಾಯದ ಯೋಗ, ಭಾವಕರ್ಮ-ದ್ರವ್ಯಕರ್ಮ-ನೋಕರ್ಮ ದಿಂದ ಭಿನ್ನವಾಗಿರುವ ಹೇ ಶುದ್ಧಾತ್ಮ ಭಗವಾನ್, ನೀವು ಹೀಗೊಂದು ಕೃಪೆ ಮಾಡಬೇಕು. ಅದೇನೆಂದರೆ, ** ಎಲ್ಲಿ ಇರುವರೋ ಅಲ್ಲಿ ಸುಖ-ಶಾಂತಿಯನ್ನು ಪಡೆಯಲಿ. ಅವರಿಗೆ ಮೋಕ್ಷವು ಪ್ರಾಪ್ತಿಯಾಗಲಿ.**

**ಈ ದಿನದವರೆಗೂ ಮತ್ತು ಈ ಕ್ಷಣದಲ್ಲಿಯೂ ನನ್ನಿಂದ ** ನೊಂದಿಗೆ ರಾಗ-ದ್ವೇಷ, ಕಷಾಯಗಳು ಆಗಿದ್ದಲ್ಲಿ, ಅವುಗಳಿಗಾಗಿ ಕ್ಷಮೆಯಾಚಿಸುತ್ತೇನೆ. ಹೃದಯಪೂರ್ವಕವಾಗಿ ಪಶ್ಚಾತ್ತಾಪ ಪಡುತ್ತೇನೆ. ನನ್ನನ್ನು ಕ್ಷಮಿಸಿ ಹಾಗೂ ಪುನಃ ಅಂತಹ ದೋಷಗಳನ್ನು ಎಂದೂ ಮಾಡದೆ ಇರುವಂತೆ ಶಕ್ತಿ ನೀಡಿ.**

** ಮೃತ್ಯು ಹೊಂದಿರುವ ವ್ಯಕ್ತಿಯ ಹೆಸರನ್ನು ಹೇಳಬೇಕು.

(ಈ ರೀತಿಯಾಗಿ ಪ್ರಾರ್ಥನೆಯನ್ನು ಆಗಾಗ ಮಾಡುತಲಿರಬೇಕು. ಅಲ್ಲದೆ ಮೃತ್ಯು ಹೊಂದಿರುವ ವ್ಯಕ್ತಿಯ ನೆನಪು ಬಂದಾಗಲೆಲ್ಲಾ ಈ ಪ್ರಾರ್ಥನೆಯನ್ನು ಮಾಡಬೇಕು.)

*********

# ಶುದ್ಧಾತ್ಮನಲ್ಲಿ ಪ್ರಾರ್ಥನೆ

ಹೇ ಅಂತರ್ಯಾಮಿ ಪರಮಾತ್ಮ! ನೀವು ಪ್ರತಿಯೊಂದು ಜೀವದಲ್ಲೂ ವಾಸವಾಗಿರುವಿರಿ, ಹಾಗೆಯೇ ನನ್ನಲ್ಲಿಯೂ ವಾಸವಾಗಿದ್ದೀರಿ. ನಿಮ್ಮ ಸ್ವರೂಪವೇ ನನ್ನ ಸ್ವರೂಪವಾಗಿದೆ. ನನ್ನ ಸ್ವರೂಪ ಶುದ್ಧಾತ್ಮ.

ಹೇ ಶುದ್ಧಾತ್ಮ ಭಗವಾನ್! ನಾನು ನಿಮಗೆ ಅಬೇಧ ಭಾವದಿಂದ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ.

ಅಜ್ಞಾನದಿಂದಾಗಿ ನಾನು ಯಾವ ಯಾವ *** ದೋಷಗಳನ್ನು ಮಾಡಿದ್ದೇನೆ, ಆ ಎಲ್ಲಾ ದೋಷಗಳನ್ನು ನಿಮ್ಮ ಮುಂದೆ ವ್ಯಕ್ತಪಡಿಸುತ್ತೇನೆ. ಅವುಗಳಿಗಾಗಿ ಹೃದಯಪೂರ್ವಕವಾಗಿ ಬಹಳ ಪಶ್ಚಾತ್ತಾಪ ಪಡುತ್ತೇನೆ ಹಾಗೂ ನಿಮ್ಮಲ್ಲಿ ಕ್ಷಮೆಯಾಚಿಸುತ್ತೇನೆ. ಹೇ ಪ್ರಭು! ನನ್ನನ್ನು ಕ್ಷಮಿಸಿ, ಕ್ಷಮಿಸಿ, ಕ್ಷಮಿಸಿ ಹಾಗೂ ಮತ್ತೆ ಅಂತಹ ದೋಷಗಳನ್ನು ಮಾಡದೆ ಇರುವಂತೆ ನೀವು ನನಗೆ ಶಕ್ತಿ ನೀಡಿ, ಶಕ್ತಿ ನೀಡಿ, ಶಕ್ತಿ ನೀಡಿ.

ಹೇ ಶುದ್ಧಾತ್ಮ ಭಗವಾನ್! ನೀವು ಹೀಗೊಂದು ಕೃಪೆ ಮಾಡಿ, ಅದೇನೆಂದರೆ ನಮ್ಮ ಭೇದಭಾವವು ಅಳಿಯಲಿ ಹಾಗು ಅಭೇದ-ಸ್ವರೂಪವು ಪ್ರಾಪ್ತಿಯಾಗಲಿ. ನಾವು ನಿಮ್ಮೊಳಗೆ ಅಭೇದ ಸ್ವರೂಪದಲ್ಲಿಯೇ ತನ್ಮಯರಾಗಿ ಇರುವಂತಾಗಲಿ.

***ಯಾವ ದೋಷವು ಉಂಟಾಗಿತ್ತೋ ಅದನ್ನು ಮನಸ್ಸಿನಲ್ಲಿ ಹೇಳಿಕೊಳ್ಳಬೇಕು.

*********

# ಒಂಬ್ಬತ್ತು ಸೂತ್ರಗಳು (ನವ್ ಕಲಮೋ)

**1.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದ ಅಹಂಗೆ ಕಿಂಚಿತ್ತೂ ಕೂಡಾ ನೋವು ಮಾಡದೆ, ನೋವು ಮಾಡಿಸದೆ, ಅಥವಾ ನೋವು ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ನಾನು ಯಾವುದೇ ದೇಹಧಾರಿ ಜೀವಾತ್ಮದ ಅಹಂಗೆ ಕಿಂಚಿತ್ತೂ ಕೂಡಾ ನೋವು ಪಡಿಸದಂತಹ ಸಮಂಜಸವಾದ (ಸ್ಯಾದ್ವಾದ್) ವಾಣಿ, ಸಮಂಜಸವಾದ ವರ್ತನೆ ಹಾಗೂ ಸಮಂಜಸವಾದ ಮನನವನ್ನು ಮಾಡುವಂತೆ ನನಗೆ ಪರಮ ಶಕ್ತಿ ನೀಡಿ.

**2.** ಹೇ ದಾದಾ ಭಗವಾನ್! ನಾನು ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವು ಮಾಡದೆ, ನೋವು ಮಾಡಿಸದೆ, ಅಥವಾ ನೋವು ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ನಾನು ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವು ಪಡಿಸದಂತಹ ಸಮಂಜಸವಾದ ವಾಣಿ, ಸಮಂಜಸವಾದ ವರ್ತನೆ ಹಾಗೂ ಸಮಂಜಸವಾದ ಮನನವನ್ನು ಮಾಡುವಂತೆ ನನಗೆ ಪರಮ ಶಕ್ತಿ ನೀಡಿ.

**3.** ಹೇ ದಾದಾ ಭಗವಾನ್! ನಾನು ಯಾರೇ ದೇಹಧಾರಿ ಉಪದೇಶಕ ಸಾಧು, ಸಾಧ್ವಿ ಅಥವಾ ಆಚಾರ್ಯರ ಅವಹೇಳನ, ಅಪರಾಧ, ಅವಿನಯವನ್ನು ಮಾಡದಿರುವಂತೆ ನನಗೆ ಪರಮ ಶಕ್ತಿ ನೀಡಿ.

**4.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದ ಪ್ರತಿಯಾಗಿ ಕಿಂಚಿತ್ತೂ ಕೂಡಾ ಅಭಾವ, ತಿರಸ್ಕಾರವನ್ನು ಎಂದಿಗೂ ಮಾಡದೆ, ಮಾಡಿಸದೆ ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

**5.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದೊಂದಿಗೆ ಎಂದಿಗೂ ಕಠೋರ ಭಾಷೆ, ವ್ಯಂಗ್ಯ ಭಾಷೆಯನ್ನು ಮಾತನಾಡದೆ, ಮಾತನಾಡಿಸದೆ, ಮಾತನಾಡುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಯಾರೇ ಕಠೋರ ಭಾಷೆ, ವ್ಯಂಗ್ಯ ಭಾಷೆ ಮಾತನಾಡಿದರೂ, ನನಗೆ ಮೃದು-ಋಜು ಭಾಷೆ ಮಾತನಾಡುವಂತೆ ಪರಮ ಶಕ್ತಿ ನೀಡಿ.

**6.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದ ಪ್ರತಿಯಾಗಿ ಸ್ತ್ರೀ, ಪುರುಷ, ಅಥವಾ ನಪುಂಸಕ, ಯಾವುದೇ ಲಿಂಗಧಾರಿಯಾಗಿರಲಿ, ಅವರ ಬಗ್ಗೆ, ಕಿಂಚಿತ್ತೂ ಕೂಡಾ ವಿಷಯ-ವಿಕಾರಕ್ಕೆ ಸಂಬಂಧವಾದ ದೋಷಗಳು, ಇಚ್ಛೆಗಳು, ಚೇಷ್ಟೆಗಳು ಅಥವಾ ವಿಚಾರಕ್ಕೆ ಸಂಬಂಧವಾದ ದೋಷಗಳನ್ನು ಮಾಡದೆ, ಮಾಡಿಸದೆ ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ನನಗೆ ನಿರಂತರ ನಿರ್ವಿಕಾರಿಯಾಗಿ ಇರಲು ಪರಮ ಶಕ್ತಿ ನೀಡಿ.

**7.** ಹೇ ದಾದಾ ಭಗವಾನ್! ನಾನು ಯಾವುದೇ ರಸದಲ್ಲಿ ಲುಬ್ಧನಾಗದೇ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಸಮರಸವಾದ ಆಹಾರವನ್ನು ಸೇವಿಸುವಂತೆ ಪರಮ ಶಕ್ತಿ ನೀಡಿ.

**8.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದ ಪ್ರತ್ಯಕ್ಷ ಅಥವಾ ಪರೋಕ್ಷ, ಜೀವಂತ ಅಥವಾ ಮೃತ, ಯಾವುದಕ್ಕೂ ಕಿಂಚಿತ್ತು ಕೂಡಾ ಅವಹೇಳನ, ಅಪರಾಧ ಅವಿನಯವನ್ನು ಮಾಡದೆ, ಮಾಡಿಸದೆ ಅಥವಾ ಮಾಡಿಸುವುದಕ್ಕೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

**9.** ಹೇ ದಾದಾ ಭಗವಾನ್! ನನಗೆ ಜಗತ್-ಕಲ್ಯಾಣವನ್ನು ಮಾಡಲು ನಿಮಿತ್ತನಾಗುವಂತೆ ಪರಮ ಶಕ್ತಿ ನೀಡಿ.

*********

# ಪ್ರತಿಕ್ರಮಣದ ವಿಧಿ

ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಲ್ಲಿ, ದೇಹಧಾರಿ * ನ ಮನಸ್ಸು-ವಚನ-ಕಾಯದ ಯೋಗ, ಭಾವಕರ್ಮ-ದ್ರವ್ಯಕರ್ಮ-ನೊಕರ್ಮದಿಂದ ಭಿನ್ನವಾಗಿರುವ ಹೇ ಶುದ್ಧಾತ್ಮ ಭಗವಾನ್, ನಿಮ್ಮ ಸಾಕ್ಷಿಯಲ್ಲಿ ಇಂದಿನವರೆಗೆ ನನ್ನಿಂದ ಯಾವ ಯಾವ ** ದೋಷಗಳು ಆಗಿವೆಯೋ, ಅವುಗಳಿಗಾಗಿ ಕ್ಷಮೆಯಾಚಿಸುತ್ತೇನೆ. ಪಶ್ಚಾತ್ತಾಪ ಪಡುತ್ತೇನೆ. ಆಲೋಚನೆ-ಪ್ರತಿಕ್ರಮಣ-ಪ್ರತಿಜ್ಞೆ (ಪ್ರತ್ಯಾಖ್ಯಾನ್) ಮಾಡುತ್ತೇನೆ ಹಾಗೂ ಮತ್ತೆ ಇಂತಹ ದೋಷಗಳನ್ನು ಇನ್ನೆಂದಿಗೂ ಮಾಡುವುದಿಲ್ಲ ಎಂದು ದೃಢ ನಿಶ್ಚಯ ಮಾಡುತ್ತೇನೆ. ನನ್ನನ್ನು ಕ್ಷಮಿಸಿ, ಕ್ಷಮಿಸಿ, ಕ್ಷಮಿಸಿ.

* ಯಾರೊಂದಿಗೆ ಮನಸ್ತಾಪವು ಉಂಟಾಗಿರುತ್ತದೆ, ಆ ವ್ಯಕ್ತಿಯ ಹೆಸರನ್ನು ಹೇಳಿಕೊಳ್ಳುವುದು.

** ಯಾವ ದೋಷವಾಗಿರುತ್ತದೆ, ಅದನ್ನು ಮನಸ್ಸಿನಲ್ಲಿ ನೆನಪುಮಾಡಿಕೊಳ್ಳುವುದು.

(ನೀವು ಶುದ್ಧಾತ್ಮ ಹಾಗೂ ಯಾರು ದೋಷವನ್ನು (ತಪ್ಪನ್ನು) ಮಾಡಿದ್ದಾರೋ, ಅವರಿಂದ ಪ್ರತಿಕ್ರಮಣವನ್ನು ಮಾಡಿಸಬೇಕು. 'ಚಂದುಭಾಯ್' (File-1) ದೋಷಗಳ ಪ್ರತಿಕ್ರಮಣವನ್ನು ಮಾಡಬೇಕು.)

*********

# ಸಂಪರ್ಕಿಸಿ

## ದಾದಾ ಭಗವಾನ್ ಪರಿವಾರ

**ಅಡಾಲಜ್:** ತ್ರಿಮಂದಿರ್ ಸಂಕುಲ್, ಸೀಮಂಧರ್ ಸಿಟಿ, ಅಹಮದಾಬಾದ್–ಕಲೋಲ್ ಹೈವೇ, ಪೋಸ್ಟ್: ಅಡಾಲಜ್, ಜಿ.–ಗಾಂಧೀನಗರ್, ಗುಜರಾತ್–382421. ಫೋನ್: (079) 39830100, ಇಮೇಲ್: info@dadabhagwan.org

**ಅಹಮದಾಬಾದ್:** ದಾದಾ ದರ್ಶನ್, 5, ಮಮತಾಪಾರ್ಕ್ ಸೊಸೈಟಿ, ನವಗುಜರಾತ್ ಕಾಲೇಜಿನ ಹಿಂಭಾಗದಲ್ಲಿ, ಉಸ್ಮಾನ್‌ಪುರಾ, ಅಹಮದಾಬಾದ್ – 380014, ಫೋನ್: (079) 27540408

| | | | |
|---|---|---|---|
| **ಮುಂಬೈ** | 9323528901 | **ಬೆಂಗಳೂರು** | 9590979099 |
| **ದೆಹಲಿ** | 9810098564 | **ಹೈದರಾಬಾದ್** | 9989877786 |
| **ಕೊಲ್ಕತ್ತಾ** | (033)–32933885 | **ಚೆನ್ನೈ** | 9380159957 |
| **ಜಯಪುರ** | 9351408285 | **ಪೂನಾ** | 9422660497 |
| **ಭೂಪಾಲ** | 9425024405 | **ಯುಎಇ** | +971 557316937 |
| **ಇಂದೋರ್** | 9893545351 | **ಯು.ಕೆ.** | +44330–111–(3232) |
| **ಜಬಲ್ಪುರ** | 9425160428 | **ಕೀನ್ಯಾ** | +254 722 722 063 |
| **ರಾಯಪುರ** | 9329523737 | **ಸಿಂಗಪೂರ್** | +65 81129229 |
| **ಬಿಲಾಯ್** | 9827481336 | **ಆಸ್ಟ್ರೇಲಿಯಾ** | +61 421127947 |
| **ಪಟ್ನಾ** | 9431015601 | **ನ್ಯೂಜಿಲ್ಯಾಂಡ್** | +64 21 0376434 |
| **ಅಮರಾವತಿ** | 9422915064 | **ಯು.ಎಸ್.ಎ.** | +1 877–505–DADA (3232) |
| **ಜಲಂಧರ್** | 9814063043 | | |

Website: www.dadabhagwan.org



ಅಂತಿಮ ದಿನಗಳಲ್ಲಿ oxygen ಮೇಲೆ ಇದ್ದರೂ ಸಹ ಮುಕ್ತ ಹಾಸ್ಯದಲ್ಲಿ...

## ತಲುಪುವುದು ಕೇವಲ ಭಾವನೆಯ ಸ್ಪಂದನವು

ಮಕ್ಕಳು (ಅಥವಾ ಯಾರಾದರು ಸಂಬಂಧಿಗಳು) ಮರಣ ಹೊಂದಿದ ನಂತರ ಅವರ ಬಗ್ಗೆ ಚಿಂತಿಸುವುದರಿಂದ ಅವರಿಗೆ (ಮೃತರಿಗೆ) ದುಃಖವಾಗುತ್ತದೆ. ನಮ್ಮ ಜನರು ಅಜ್ಞಾನದಿಂದ ಹೀಗೆಲ್ಲಾ ಮಾಡುತ್ತಾರೆ. ಆದುದರಿಂದ, ನೀವು ಹೇಗಿದೆಯೋ ಹಾಗೆ ತಿಳಿದುಕೊಂಡು ಶಾಂತಿಪೂರ್ವಕವಾಗಿ ಇರುವುದನ್ನು ಕಲಿಯಬೇಕು. ವ್ಯರ್ಥವಾಗಿ ತಲೆಕೆಡಿಸಿಕೊಳ್ಳುವುದರ ಅರ್ಥವಾದರೂ ಏನು? ಇದೆಲ್ಲಾ ಸಂಸಾರದಲ್ಲಿನ ಋಣಾನುಬಂಧವಾಗಿದೆ, ಲೆಕ್ಕಾಚಾರವೆಲ್ಲಾ ಲೇವಾದೇವಿಯಾಗಿದೆ. ಈ ಮೃತ್ಯು ಹೊಂದುವುದೆಂದರೆ ಏನು? ಪುಸ್ತಕದ ಲೆಕ್ಕಾಚಾರವನ್ನು ಪೂರೈಸುವುದಾಗಿದೆ. ಹಾಗಾಗಿ, ನಮಗೆ ಅವರ ನೆನಪು ಹೆಚ್ಚು ಬರುತ್ತಿದ್ದರೆ ಆಗ ಏನು ಮಾಡಬೇಕು? ವಿತರಾಗಿ ಭಗವಂತನಿಗೆ ಕೇಳಿಕೊಳ್ಳಬೇಕು, 'ಅವರಿಗೆ ಶಾಂತಿ ನೀಡಿ' ಎಂದು. ನಾವು ಭಾವನೆ ಮಾಡಿದರೆ, ಆ ಭಾವನೆ ಅವರಿಗೆ ತಲುಪುವುದು ಖಂಡಿತ!

- ದಾದಾಶ್ರೀ

मूल दीपक से प्रकटे दीपमाला

dadabhagwan.org

ISBN 978-93-87551-35-0

9 789387 551350

Printed in India

Price ₹ 20